BUSINESS OF THE HOUSE

Mr. SPEAKER.—With regard to the Business of the Day, I would like to know whether we should continue the same practice of having no Teabreak today also, because, it is a non-official day and I do not want to cut out any time if I can possibly save it. As before, the House will continue to sit without tea-break till 12-30 P.M.

Then, with regard to the non-official business, I believe the Hon'ble Members are aware that a resolution was partly discussed and the Hon'ble Member that Sri Anna Rao, who was on his legs then, is now neither on his legs, nor is he found in the House. All that I can say is that he has concluded his speach.

Sri C. J. MUCKANNAPPA (Sira).—When he is absent ?

Mr. SPEAKER.—It means that. What shall we do with this resolution ? It is open to the House to conclude the debate or even to move for closure. The time allotted, I believe, is over. The mover was Sri T. Madiah Gowda, and the resolution relates to steps to be taken to improve administration and supervision of Primary Education particularly in Rural areas, so as to improve efficiency. How does the House feel ? Should we have a little more Debate on it ?

Sri S. SIVAPPA (Sravanabelagola).—If Members are not willing to speak, it means they do not want to take part in the Debate.

Sri C. J MUCKANNAPPA.—May I know how many members took part in the Debate on that resolution ?

Mr. SPEAKER.—I have got that information as I have already looked into that. The members who have taken part are Sri T. Madiah-Gowda, the mover, Sri C. J Muckannappa, Sri C. S. Subbiah Naik, Sri Sanjeevanatha Ikala and Sri Anna Rao Ganamukhi, who had not concluded his speech.

(Sri Gopal Gowda stood up)

Does the Hon'ble Member like to take part ? The House seems not inclined to continue the debate further. ಈ ವಿಷಯದಲ್ಲಿ ಇನ್ನು ಚರ್ಚೆ ಬೇಡ ಎನ್ನುವ ಅಭಿಪ್ರಾಯವನ್ನು ಸಭೆ ಸೂಚಿಸುತ್ತಿದೆ. ಮಾನ್ಯ ಸದಸ್ಯರ ಅಭಿಪ್ರಾಯವೇನು ?

ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ)— ಪ್ರೈಮರಿ ವಿದ್ಯಾಭ್ಯಾಸ ಮುಖ್ಯವಾದುದು, ಅದರ ಬಗ್ಗೆ ಒಂದೆರಡು ಮಾತು ಹೇಳಬೇಕಾಗಿದೆ.

Mr. SPEAKER.—I think the hon. member can be given a chance and then the debate be closed. If this resolution engages the time of the House, the other resolution would lapse.

NON-OFFICIAL RESOLUTION

***Re* : Taking steps to improve Administration and Supervision of Primary Education particularly in rural areas.**

(Debate continued)

†ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಸ್ವಾಮಿ, ಈ ಸಭೆಯ ಅಧಿವೇಶನದ ಕಳೆದ ದಿವಸಗಳಲ್ಲಿ ಚರ್ಚೆ ಮಾಡುತ್ತಿದ್ದ ಖಾಸಗಿ ನಿರ್ಣಯದ ಸಂಬಂಧದಲ್ಲಿ ನಾನು ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಬೇಕೆಂದಿದ್ದೇನೆ. ಮಾನ್ಯ ಶ್ರೀ ಟಿ. ಮಾದಯ್ಯಗೌಡರು ಈ ನಿರ್ಣಯವನ್ನು ಸಭೆಯ

ಮುಂದೆ ತಂದು ಸರ್ಕಾರದ ಗಮನವನ್ನು ತೀವ್ರವಾಗಿ ಈ ಕಡೆ ಎಳೆಯುವುದಕ್ಕೆ ಬಹಳ ಸಹಾಯ ಮಾಡಿದ್ದಾರೆ. ಇದಕ್ಕಾಗಿ ನಾನು ಅವರಿಗೆ ಸಭೆಯ ಪರವಾಗಿ ಅಭಿನಂದಿಸುತ್ತೇನೆ. ಈ ದೇಶದಲ್ಲಿ ಸ್ವಾತಂತ್ರ್ಯಾನಂತರ ಅತಿ ಕೆಟ್ಟ ರೀತಿಯಲ್ಲಿ ಅನಾಹತಕ್ಕೆ ಈಡಾಗಿರುವ ಒಂದು ವಿಷಯವೆಂದರೆ ಅದು ವಿದ್ಯಾಭ್ಯಾಸ ಎಂದು ನಾವು ಹೇಳದೆ ವಿಧಿಯಿಲ್ಲ. ಅದರಲ್ಲಿಯೂ ಮುಖ್ಯವಾಗಿ ಪ್ರಾಥಮಿಕ ವಿದ್ಯಾಭ್ಯಾಸದ ಸ್ಥಿತಿಗತಿಗಳನ್ನು ಮತ್ತು ಆ ಕ್ಷೇತ್ರದಲ್ಲಿ ನಾವು ಸ್ವಾತಂತ್ರ್ಯಾನಂತರದಲ್ಲಿ ಸಾಧಿಸಿರುವ ಪ್ರಗತಿಯನ್ನು ಪರಿಶೀಲಿಸುವುದಾದರೆ, ಅದು ಬಹಳ ಮಟ್ಟಿಗೆ ನಿರೀಕ್ಷಿಸಿದ ಪ್ರಗತಿಯನ್ನು ಸಾಧಿಸಿಲ್ಲ; ಮಾತ್ರವಲ್ಲ, ತಾವು, ಎಂದರೆ, ಸರ್ಕಾರದವರು, ಕೆಲವು ಸಂದರ್ಭಗಳಲ್ಲಿ ತಾವು ಮಾಡಲೇಬೇಕಾದ ತಮ್ಮ ಆದ್ಯಕರ್ತವ್ಯಗಳನ್ನು ಕೂಡ ನಿರ್ವಹಿಸಿಲ್ಲವೆಂದು ನಾನು ಈ ಸಭೆಯಲ್ಲಿ ಹೇಳಬೇಕಾಗಿದೆ. ರಾಜ್ಯಾಂಗದಲ್ಲಿ, ಎಲ್ಲ ಆರು ವರ್ಷ ತುಂಬಿದ ಮಕ್ಕಳಿಗೆ ಉಚಿತವಾಗಿ ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯವಾಗಿ ಕೊಡಲೇಬೇಕು ಎಂಬ ನಿರ್ದೇಶ ಎಲ್ಲ ರಾಜ್ಯಗಳಿಗೂ ಇದ್ದರೂ ಕೂಡ ಆ ನಿರ್ದೇಶವನ್ನು ಅಕ್ಷರಶಃ ಪರಿಪಾಲನೆ ಮಾಡುವುದರಲ್ಲಿ ವಿಫುಲರಾಗಿದ್ದಾರೆ. ತಮ್ಮ ರಾಜ್ಯದಲ್ಲಿ ಹಿಂದೆ ಕೂಡ ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣ ದೊರಕಬೇಕೆಂಬ ಪ್ರಯತ್ನ ನಡೆದಿತ್ತು. ಆದರೆ ಈಗ ರಾಜ್ಯದಲ್ಲಿ ಈ ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣದ ಬಗ್ಗೆ ಏನೊಂದು ನೀತಿಯನ್ನನುಸರಿಸುತ್ತಾ ಬಂದಿದ್ದಾರೋ ಅದು ಸ್ವತಃ ತನಗೆ ತಾನೆ ಮೋಸ ಮಾಡಿಕೊಳ್ಳತಕ್ಕ ಒಂದು ಪದ್ಧತಿ ಅಥವಾ ವ್ಯವಸ್ಥೆ ಎಂದು ನಾನು ಹೇಳಬೇಕಾಗಿದೆ. ಇದನ್ನು ಮಾನ್ಯ ವಿದ್ಯಾ ಸಚಿವರು ಸ್ವಲ್ಪ ಗಮನಿಸಬೇಕು. ಅವರು ಏನು ಹೇಳುತ್ತಾರೆಂದರೆ ಕಡ್ಡಾಯ ಪ್ರಾಥಮಿಕ ಶಿಕ್ಷಣದ ವ್ಯವಸ್ಥೆಯನ್ನು ನಾವು ಒಪ್ಪಿಕೊಂಡಿದ್ದೇವೆ, ಅದರಂತೆ ನಾವು ಈ ಪ್ರಾಥಮಿಕ ವಿದ್ಯಾಭ್ಯಾಸದ ಸೌಲಭ್ಯವನ್ನು ಎಲ್ಲ ಹಳ್ಳಿಗೂ ವಹಿಸತಕ್ಕ ಪ್ರಯತ್ನದಲ್ಲಿದ್ದೇವೆ ಎಂದು. ಆದರೆ ಆರು ವರ್ಷ ತುಂಬಿದ ಎಲ್ಲ ಮಕ್ಕಳನ್ನೂ ಕಡ್ಡಾಯವಾಗಿ ಶಾಲೆಗಳಿಗೆ ಸೇರಿಸತಕ್ಕ ಕ್ರಮ ಈಗ ಹಾಲಿ ಸರ್ಕಾರದ ಯೋಜನೆಯಲ್ಲಿಲ್ಲ. ಯೋಜನೆಯಲ್ಲಿದ್ದರೂ ಅವರು ಅದನ್ನು ಕಾರ್ಯಗತ ಮಾಡುವ ಕ್ರಮಗಳನ್ನು ಸರ್ಕಾರ ತೆಗೆದುಕೊಂಡಿಲ್ಲ. ಯಾವ ವಿದ್ಯಾರ್ಥಿ ಶಾಲೆಗೆ ಸೇರುತ್ತಾನೆಯೋ ಅವನು ಸೇರಿದ ದಿವಸದಿಂದ ಶಾಲೆಯನ್ನು ಬಿಟ್ಟು ಹೋಗುವಷ್ಟು ದಿವಸ ಮಾತ್ರ ಅವನಿಗೆ ಉಚಿತವಾದ ವಿದ್ಯಾಭ್ಯಾಸ ದೊರೆಯುತ್ತದೆ; ಒಂದು ವರ್ಷ, ಎರಡು ವರ್ಷ, ಮೂರು ವರ್ಷ, ಹೀಗೆ ಅವನು ನಾನಾ ಕಾರಣಗಳಿಂದಾಗಿ, ಮುಖ್ಯವಾಗಿ ಬಡತನದ ಕಾರಣದಿಂದಾಗಿ ಶಾಲೆಯನ್ನು ಬಿಟ್ಟು ಹೋದರೆ ಅವನ ಎಲ್ಲ ಹೋದ, ಏನು ಮಾಡುತ್ತಿದ್ದನೆ, ಅವನು ಹೋಟಲಿನಲ್ಲ ಲೋಟ ತೊಳೆಯುವುದಕ್ಕೆ ಸೇರಿಕೊಂಡಿದ್ದಾನೆಯೋ ಅಥವಾ ಎಲ್ಲಿಯಾದರೂ ಬೇರೆ ಕಡೆಗಳಲ್ಲಿ ಹೊಟ್ಟೆಪಾಡಿಗಾಗಿ ತಿರುಗಾಡುತ್ತಿದ್ದಾನೆಯೇ ಎನ್ನುವ ವಿಷಯದ ಕಡೆ ಸರ್ಕಾರ ಗಮನ ಕೊಡುತ್ತ ಇಲ್ಲ. ನಾವು ಎಷ್ಟೋ ಮಕ್ಕಳನ್ನು ನೋಡುತ್ತಿದ್ದೇವೆ, ಬೀದಿಯಲ್ಲಿ ಅಲೆಯುವ ಚಿಕ್ಕ ಮಕ್ಕಳನ್ನು ನೋಡುತ್ತಿದ್ದೇವೆ, ಗುಂಪು ಗುಂಪಾಗಿ ಹಿಂಡು ಹಿಂಡಾಗಿ ಇರುವುದನ್ನು ಮತ್ತು ಹಳ್ಳಿಗಳಲ್ಲಿ ಬಹಳ ಕಡೆಗಳಲ್ಲಿ 7, 8, 9, 10 ವರ್ಷದ ಮಕ್ಕಳು ಶಾಲೆಗೆ ಹೋಗುವುದಕ್ಕೆ ಅವಕಾಶವಿಲ್ಲದೆ ಇರುವುದನ್ನು ನಾವು ನೋಡುತ್ತಿದ್ದೇವೆ. ಆದುದರಿಂದ ನಾನು ಈ ವಿಷಯದಲ್ಲಿ ಸರ್ಕಾರ ವಿಫಲವಾಗಿದೆ, ಸೋತಿದೆ, ತನ್ನ ಕರ್ತವ್ಯವನ್ನು ನಿರ್ವಹಿಸಿಲ್ಲ ಎಂದು ಬಹಳ ವಿಷಾದದಿಂದ ಹೇಳಬೇಕಾಗುತ್ತದೆ.

ಇನ್ನು ಈ ಒಂದು ಸನ್ನಿವೇಶವನ್ನು ನಾವೆಲ್ಲರೂ ಒಪ್ಪಿಕೊಂಡಿರತಕ್ಕ ಈ ಮೂಲ ತತ್ವವನ್ನು ಕಾರ್ಯಗತ ಮಾಡುವ ಕಡೆ ಸರ್ಕಾರದವರು ವಿಶೇಷ ಹಾಗೂ ತೀವ್ರ ಗಮನವನ್ನು ಕೊಡಬೇಕಾದ್ದು ಅವರ ಆದ್ಯ ಕರ್ತವ್ಯವಾಗಿದೆ. ಮಾನ್ಯ ವಿದ್ಯಾಸಚಿವರು ಪ್ರಾಥಮಿಕ ವಿದ್ಯಾಭ್ಯಾಸ ಮಾತ್ರವಲ್ಲ ನಾವು ಪ್ರೌಢ ವಿದ್ಯಾಭ್ಯಾಸವನ್ನು ಕೂಡ ಉಚಿತವಾಗಿ ಮತ್ತು ಕಡ್ಡಾಯವಾದ ರೂಪದಲ್ಲಿ ಕೊಡಬೇಕಾಗುತ್ತದೆ; ಅದು ಆವಶ್ಯಕ ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಜೊತೆಗೆ ಈಗ ರಾಜ್ಯದಲ್ಲಿ ಕೊಡುತ್ತಿರುವ ಪ್ರೌಢ ವಿದ್ಯಾಭ್ಯಾಸ ಪದ್ಧತಿಯಲ್ಲಿ ಬಡವರಿಗೆ ಬಹಳ ಜನರಿಗೆ ಅದು ಉಚಿತವಾಗಿ ದೊರಕುತ್ತಿದೆ ಎನ್ನುವ ಅಭಿಪ್ರಾಯವನ್ನು ಕೂಡ ಅವರು ತಿಳಿಸಿದ್ದಾರೆ. ಈ ವಿಷಯವನ್ನು ಸಮರ್ಥಿಸುತ್ತ ಅವರು ನಮ್ಮ ಮುಂದೆ ಅಂಕಿ ಅಂಶಗಳನ್ನು ಇಟ್ಟರೆ ಈ ರಾಜ್ಯದಲ್ಲಿ ಪ್ರೌಢ ವಿದ್ಯಾಭ್ಯಾಸವು ಕೂಡ ಎಲ್ಲ ಮಕ್ಕಳಿಗೂ ಉಚಿತವಾಗಿ ದೊರೆಯುವಂತೆ ಮಾಡುವುದಕ್ಕೆ ಎಷ್ಟು ಹಣವನ್ನು ನಾವು ಹೆಚ್ಚಾಗಿ ಒದಗಿಸಬೇಕು ಎಂದು ಈ ಮಾನ್ಯ ಸಭೆ ಅದರಲ್ಲಿಯೂ ಮುಖ್ಯವಾಗಿ ಹಣಕಾಸಿನ ಸಚಿವರು ವಿಚಾರಮಾಡಬಹುದು ಎಂದು ನನಗನ್ನಿಸುತ್ತದೆ. ಏಕೆಂದರೆ ಈ ವಿದ್ಯಾಭ್ಯಾಸ ಇತರ ಎಲ್ಲ ಹಣ ತೊಡಗಿಸತಕ್ಕ ಯೋಜನೆಗಳಿಗಿಂತ ಹೆಚ್ಚು ಫಲವನ್ನು ಕೊಡತಕ್ಕದ್ದು, ಶಾಶ್ವತವಾದದ್ದು ಮತ್ತು ಭದ್ರವಾದದ್ದು ಎಂದು ನಾನು ಭಾವಿಸುತ್ತೇನೆ. ಪ್ರೊಫೆಸರ್ ಗಾಲಬ್ರೇತ್ ಅವರು, ಹಿಂದೆ ನಮ್ಮ ದೇಶದಲ್ಲಿ ಅಮೆರಿಕದ ರಾಯಭಾರಿಯಾಗಿದ್ದವರು ಒಂದು ಮಾತನ್ನು ಹೇಳುತ್ತಾರೆ: ವಿದ್ಯಾಭ್ಯಾಸದಲ್ಲಿ ತಂದೆ ತಾಯಿಗಳು ಅಥವಾ ರಾಜ್ಯ ತೊಡಗಿಸತಕ್ಕ ಹಣ, ಅದು ಕೇವಲ ಖರ್ಚು ಮಾತ್ರ ಆಗುವುದಿಲ್ಲ, ಅದು ಒಂದು ಹಣವನ್ನು ತೊಡಗಿಸತಕ್ಕ ಯೋಜನೆ (ಇನ್‌ವೆಸ್ಟ್‌ಮೆಂಟ್) ಎಂದಾಗುತ್ತದೆ ಅದರ

(ಶ್ರೀ ಎಸ್. ಗೋಪಾಲಗೌಡ)

ಫಲಗಳು ಶೀಘ್ರವಾಗಿ ಮತ್ತು ಒಳ್ಳೆಯ ರೀತಿಯಿಂದ ಬೆಳೆಯುತ್ತವೆ ಎಂದು ಅವರು ಅಭಿಪ್ರಾಯ ಪಟ್ಟಿದ್ದಾರೆ. ಆ ಅಭಿಪ್ರಾಯ ಸಾಮಾನ್ಯವಾಗಿ, ಸರ್ವಸಾಮಾನ್ಯವಾಗಿದೆ ಎಂದು ನಾನು ಭಾವಿಸುತ್ತೇನೆ. ಮುಖ್ಯವಾಗಿ ಪ್ರಾಥಮಿಕ ವಿದ್ಯಾಭ್ಯಾಸ ಎಷ್ಟು ಒಳ್ಳೆಯ ರೀತಿಯಲ್ಲಿ ನಡೆಯುತ್ತದೆಯೋ ಅದರ ಆಧಾರದ ಮೇಲೆ ಮುಂದಿನ ಮಕ್ಕಳ ಭವಿಷ್ಯ ನಿಂತಿರುತ್ತದೆಯೆಂದು ನಾನು ನಿಸ್ಸಂದೇಹವಾಗಿ ಹೇಳಬಹುದು.

ಇವೊತ್ತು ನಮ್ಮ ಹಳ್ಳಿಗಳ ಪರಿಸ್ಥಿತಿಯನ್ನು ನೋಡಿದರೆ, ಅಲ್ಲಿಯ ಪಾಠಪ್ರವಚನಗಳನ್ನು ನೋಡಿದರೆ, ಅಲ್ಲಿನ ಮಕ್ಕಳ ಸ್ಥಿತಿಗತಿಗಳನ್ನು ನೋಡಿದರೆ ನಿಜಕ್ಕೂ ಆ ದೃಶ್ಯ ಕರುಣಾಜನಕವಾಗಿರತಕ್ಕ ದೃಶ್ಯ. ಅದರಲ್ಲಿಯೂ ಮಲೆನಾಡಿನ ಕಡೆಗಳಲ್ಲಿ ತಾವು ನೋಡಬಹುದು. ಮಲೆನಾಡಿ ಪ್ರದೇಶಗಳಲ್ಲಿ ಮಳೆಗಾಲದಲ್ಲಿ ನಾವು ಆ ಮಕ್ಕಳು ಶಾಲೆಗಳಿಗೆ ಹೋಗತಕ್ಕ ಸನ್ನಿವೇಶವನ್ನು ನೋಡಿದರೆ ಕೆಲವು ಸಂದರ್ಭಗಳಲ್ಲಿ ಹೃದಯವಿದ್ರಾವಕವಾದ ಪರಿಸ್ಥಿತಿಯನ್ನು ನಾವು ನೋಡುತ್ತೇವೆ. ಅನೇಕ ಕಡೆಗಳಲ್ಲಿ ನಮ್ಮ ರಾಜ್ಯದವರು ರಸ್ತೆಗಳನ್ನು ಸೇತುವೆಗಳನ್ನೂ ಮಾಡಿದ್ದಾರೆ. ತಮ್ಮ ಗಮನಕ್ಕೆ ಒಂದು ಉದ ಹರಣೆಯನ್ನು ನಾನು ತರುವುದಕ್ಕೆ ಇಷ್ಟಪಡುತ್ತೇನೆ. ನನ್ನ ಕ್ಷೇತ್ರದಲ್ಲಿ ಮೀನು ಹೊಳೆ ಎಂದು ಒಂದು ನದಿ ಇದೆ. ದೇಶದ ಅನೇಕ ಕಡೆಗಳಲ್ಲಿ ಸೇತುವೆಗಳೂ, ರಸ್ತೆಗಳೂ ಆಗುವಾಗ ಮೀನು ಹೊಳೆ ಸರ್ಕಾರದ ಗಮನವನ್ನು ಸೆಳೆಯಲಿಲ್ಲ, ಕಾರಣವೇನೋ ಗೊತ್ತಾಗಲಿಲ್ಲ. ಅದೇ ಜಿಲ್ಲೆಯವರು ಮಂತ್ರಿಗಳಾಗಿದ್ದಾಗಲೂ ಅದನ್ನು ಪೂರೈಸಲಾರದೆ ಹೋದರು. ಇದನ್ನು ಏಕೆ ಹೇಳುತ್ತಿದ್ದೇನೆಂದರೆ—ನದಿಗೆ ಸೇತುವೆ ಹಾಕುವುದಕ್ಕೆ ಈ ಸಂದರ್ಭದಲ್ಲಿ ಒತ್ತಾಯಪಡಿಸುತ್ತಿದ್ದೇನೆಂದು ಯಾರೂ ತಪ್ಪು ಭಾವಿಸಬಾರದು–ಅಲ್ಲಿ ಮಳೆಗಾಲದಲ್ಲಿ ಜೂನ್, ಜುಲೈ, ಆಗಸ್ಟ್, ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳತನಕ ಆ ನದಿ ತುಂಬಿ ಹರಿಯುತ್ತದೆ. ಅಲ್ಲಿಯ ಮಕ್ಕಳು ತೂಗು ಸೇತುವೆ,—ಅದಕ್ಕೆ ಸಾಗ ಎಂದು ಹೇಳುತ್ತಾರೆ, ಸೊಪ್ಪು, ಸೌದೆ ಮಣ್ಣು, ಹಾಕಿ ಅದನ್ನು ಕಟ್ಟಿರುತ್ತಾರೆ—ಅದರ ಮೇಲೆ ಮಕ್ಕಳು ಪ್ರತಿದಿನ ಮೇಗರವಳ್ಳಿ ಶಾಲೆಗೆ ನಡೆದುಬರುತ್ತಾರೆ. ಇಂಥ ಅನೇಕ ಉದಾಹರಣೆಗಳನ್ನು ನಾನು ಕೊಡಬಲ್ಲೆ. ನಮ್ಮಲ್ಲಿ ಎಷ್ಟೋಕಡೆ ಶಾಲೆಗಳ ಕಟ್ಟಡಗಳು ಸೋರುತ್ತಿರುತ್ತವೆ, ಮಳೆಗಾಲದಲ್ಲಿ ಅದಕ್ಕೆ ಇರಸಲುತಟ್ಟಿ ಕಟ್ಟುವವರು ಕೂಡ ಇರುವುದಿಲ್ಲ, ಅಲ್ಲಿ ಯಾವ ಸೌಲಭ್ಯವೂ ಇರುವುದಿಲ್ಲ. ಕೆಲವು ಕಡೆ ಕಿಟಕಿಗಳು, ಬಾಗಿಲುಗಳು ಇಲ್ಲದೆ ಇರತಕ್ಕ ಸಂದರ್ಭಗಳಿರುತ್ತವೆ, ಕೆಲವು ಕಡೆ ಖಾಸಗಿ ಜನರ ಜಗುಲಿಯ ಮೇಲೆ, ಕೋಣೆಯಲ್ಲಿ, ಅಂಗಳದಲ್ಲಿ ಶಾಲೆಗಳನ್ನು ನಡೆಸತಕ್ಕ ಪ್ರಮೇಯವಿರುತ್ತದೆ ಈಚೆಗೆ ಸರ್ಕಾರದವರು ಈ ಪ್ರಾಥಮಿಕಶಾಲಾ ಕಟ್ಟಡಗಳೆಲ್ಲವನ್ನೂ ತಾಲ್ಲೂಕು ಅಭಿವೃದ್ಧಿ ಮಂಡಲಿಯವರಿಗೆ ವಹಿಸಿಬಿಟ್ಟಿದ್ದೇವೆ, ಸಾರ್ವಜನಿಕರೂ ಅವರೂ ಸೇರಿ ಕಟ್ಟಡಗಳನ್ನು ಕಟ್ಟಿಕೊಳ್ಳಬೇಕು ಎಂದು ಹೇಳುತ್ತಾರೆ. ನಾನು ಒಂದು ವಿಷಯವನ್ನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರಬಯಸುತ್ತೇನೆ. ಖಾಸಗಿಯವರು ಯಾರಾದರೂ ಶಾಲೆಗೆ ಕಟ್ಟಡವನ್ನು ಕೊಟ್ಟರೆ ಅದರ ರಿಪೇರಿಯನ್ನೂ ಅವರೇ ಮಾಡಿಸುತ್ತ ಇರಬೇಕು ಎಂದು ಸರ್ಕಾರದವರು ಬಿಟ್ಟಿರತಕ್ಕದ್ದು ಇದೆ. ತೀರ್ಥಹಳ್ಳಿ ತಾಲ್ಲೂಕು ನಾಲೂರು ಪ್ರಾಥಮಿಕ ಶಾಲೆಯನ್ನು ಉದಹರಿಸುತ್ತೇನೆ. ಆ ಶಾಲೆಗೆ ಇರಸಲುತಟ್ಟಿ ಕಟ್ಟುವ ವಿಷಯದಲ್ಲಿ ಜಿಜ್ಞಾಸೆ ಬಂತು. ಆ ಶಾಲೆಯನ್ನು ಸರ್ಕಾರದವರು ವಹಿಸಿಕೊಂಡಿಲ್ಲ. ಕಾರಣವೇನೆಂದರೆ ಸರ್ಕಾರದವರು ಹೇಳುವ ರೀತಿಯಲ್ಲಿ ಆ ಕಟ್ಟಡವಿಲ್ಲ ಎನ್ನುವ ವಿವಾದದಿಂದ. ಹೀಗಾಗಿ ಎರಡು ಮೂರು ಮಳೆಗಾಲದಲ್ಲಿ ಆ ಕಟ್ಟಡ ಮಳೆಯ ಹೊಡತಕ್ಕೆ ಸಿಕ್ಕಿ ಸಾವಿರಾರು ರೂಪಾಯಿ ಹಾಕಿ ಯಾರೋ ದಾನಿಗಳು ಕಟ್ಟಿಕೊಟ್ಟಂಥ ಶಾಲಾ ಕಟ್ಟಡ ಒಂದು ಮಳೆಗಾಲದಲ್ಲಿ ಬಿದ್ದುಹೋಯಿತು. ಇಂಥ ಕೆಲವು, ಸಾಮಾನ್ಯ ಬುದ್ಧಿಗೆ ಹೊಳೆಯತಕ್ಕ, ಸಾಮಾನ್ಯ ಬುದ್ಧಿ ಇರತಕ್ಕವನ್ನು ಮಾಡಬಹುದಾದಂಥ, ಕೆಲಸಗಳನ್ನು ದೊಡ್ಡ ಸರ್ಕಾರ, ಇಷ್ಟೆಲ್ಲ ಸಿಬ್ಬಂದಿಯನ್ನು ಇಟ್ಟುಕೊಂಡೂ ಕೂಡ ಮಾಡಲಾರದೆ ಹೋಗಿ ಅದಕ್ಕೆ ಕೆಲವು ಕಾನೂನುಗಳ ಅಡಚಣೆಯನ್ನು ಹೇಳುತ್ತದೆ.

9-30 A.M.

ಸಾಮಾನ್ಯ ಬುದ್ಧಿ ಸರ್ಕಾರದವರಿಗೆ ಇರುವುದಿಲ್ಲ ಎಂದು ಈ ಸಂದರ್ಭದಲ್ಲಿ ಅನಿಸುತ್ತದೆ, ಅವರಿಗೆ ಕಾನೂನು ಇರಬೇಕು, ಅವರಿಗೆ ಪರಿಪತ್ರ ಇರಬೇಕು, ಅವರಿಗೆ ಆದೇಶ ಇರಬೇಕು ಅದರಂತೆ ಅವರು ನಡೆಯತಕ್ಕವರು, ಅದು ಒಳ್ಳೆಯದು. ಆದರೆ ಸಾರ್ವಜನಿಕ ಹಾಗೂ ಸರ್ಕಾರದ ಉಪಯುಕ್ತವಾದ ಕಟ್ಟಡಕ್ಕೆ ಆಗಲೀ ಅಥವಾ ಯಾವುದಾದರೂ ಸೇತುವೆಗೆ ಆಗಲಿ ಧಕ್ಕೆ, ಹಾನಿ ಬರತಕ್ಕ ಸಂದರ್ಭದಲ್ಲಿ ಅವರು ಕಣ್ಣು ಬಿಟ್ಟು ಬುದ್ಧಿಯನ್ನು ಉಪಯೋಗಿಸುವುದಕ್ಕೆ ಏನಾದರೂ ಪ್ರಯತ್ನ ಮಾಡಬೇಕಾದ್ದು ಅವರ ಮತ್ತೊಂದು ಆದ್ಯ ಕರ್ತವ್ಯವಾಗುತ್ತದೆ. ಮಲೆನಾಡಿನ ಶಾಲೆಗಳ ವಿಷಯದಲ್ಲಿ ನಾನು ಒಂದು ಮಾತನ್ನು ಇಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಹಳ್ಳಿಗೆ ಎಲ್ಲಾ ಒಂದೇ ಮಂತ್ರ-ದೇಶಕ್ಕೆ ಎಲ್ಲಾ ಒಂದೇ ತಂತ್ರ ಎಂದು ಏನು ಈ ರಾಜ್ಯಭಾರ ಮಾಡುವವರು ಅಭಿಪ್ರಾಯ ಪಡುತ್ತಾರೆ ಇದರಲ್ಲಿ ಕೆಲವು ಸಲ ಆಯಾಯಾ ಪ್ರದೇಶದ ಸ್ಥಿತಿಗತಿಗಳನ್ನು ಅನುಲಕ್ಷಿಸಿ ಕೆಲವು ಬದಲಾವಣೆಗಳನ್ನು ಕೂಡ ಮಾಡಿಕೊಳ್ಳಬೇಕಾಗುತ್ತದೆ. ಈಗ ನಮಗೆ ಏನು ಹೇಳುತ್ತಾರೆ ಎಂದರೆ ಎಲ್ಲಿ ಶಾಲೆ ಕಟ್ಟಡ ಕಟ್ಟಿಸಬೇಕಾದರೂ, ನೀವು ಸಾರ್ವಜನಿಕರಿಂದ ಹಣವನ್ನು ಎತ್ತಿ ಸಂಗ್ರಹಿಸಿ ಕೊಡಿ ಎಂದು ಹೇಳುತ್ತಾರೆ. ಅದು ಪಟ್ಟಣಗಳಿಗೆ ಎಷ್ಟು ಮಟ್ಟಿಗೆ ಅನ್ವಯಿಸುತ್ತದೆಯೋ ಗೊತ್ತಿಲ್ಲ. ಎಲ್ಲಿ ಮುನಿಸಿಪಾಲಿಟಿಗಳು ಇವೆಯೋ ಕಾರ್ಪೊರೇಷನ್‌ಗಳು ಇವೆಯೋ ಅಲ್ಲಿ ಯಾರು ಹಣವನ್ನು ಎತ್ತಿ ಕೊಡುತ್ತಾರೆ ಎನ್ನುವುದು ಒಂದು ಪ್ರಶ್ನೆ. ಇನ್ನು ಕಟ್ಟಡಗಳ ವಿಷಯದಲ್ಲೂ ಕೂಡ ಕೊಡಗಿನಲ್ಲಿ ಕಟ್ಟಡ ಕಟ್ಟುವುದಾದರೆ ಅಲ್ಲಿ ಎಷ್ಟು ಹಣವನ್ನು ಕೊಡಬೇಕಾದೀತು, ಮಲೆನಾಡಿನಲ್ಲಿ ಮಲಿಕಲ್ ಘಾಟಿನಲ್ಲಿ ಕಟ್ಟಡ ಕಟ್ಟುವುದಾದರೆ ಎಷ್ಟು ಹಣ ಕೊಡಬೇಕಾದೀತು, ತೀವ್ರ ಗಾಳಿ ಬೀಸತಕ್ಕ, ಹೆಚ್ಚು ಮರಮುಟ್ಟು ಸಿಕ್ಕದೇ ಇರತಕ್ಕ ಬಿಜಾಪುರದ ಕಡೆ ಎಷ್ಟು ಹಣ ಕೊಡಬೇಕಾದೀತು ? ಅದೇ ಬೆಂಗಳೂರಿನಂಥ ಪಟ್ಟಣದಲ್ಲಿ ಸ್ಥಳವನ್ನು ಮತ್ತು ಬೇರೆ ಸಾಮಗ್ರಿಗಳನ್ನು ಕೊಂಡುಕೊಳ್ಳುವುದಕ್ಕೆ ಎಷ್ಟು ಹಣ ಕೊಡಬೇಕಾದೀತು ? ಇವುಗಳನ್ನು ಗಮನದಲ್ಲಿ ಇಟ್ಟುಕೊಳ್ಳದೇ ಒಂದು ಪ್ರಾಥಮಿಕ ಶಾಲೆಗೆ ಇಷ್ಟು ಹಣ ಕೊಡುತ್ತೇವೆ ಉಳಿದದ್ದು ನೀವು ಕೊಡಿ ಎಂದು ಕಣ್ಣು ಮುಚ್ಚಿಕೊಂಡು ಸರಕಾರ ಕಾನೂನು ಚಲಾಯಿಸುವುದಕ್ಕೆ ಮುಂದೆ ಹೋಗುತ್ತದೆ. ಎಷ್ಟೋ ಕಡೆಗಳಲ್ಲಿ ಎರಡು ಹಳ್ಳಿಗಳ ಮಧ್ಯದಲ್ಲಿರತಕ್ಕ ಒಂದು ಶಾಲೆ ಬಿದ್ದು ಹೋಗತಕ್ಕ ಪರಿಸ್ಥಿತಿಯಲ್ಲಿರುತ್ತದೆ—ಆ ಕಡೆ ಗ್ರಾಮದವರು ಈ ಕಡೆ ಗ್ರಾಮದವರು ಸರಿಪಡಿಸಲಿ ಎಂದು ಇರುತ್ತಾರೆ, ಈ ಕಡೆ ಗ್ರಾಮದವರು ಆ ಕಡೆ ಗ್ರಾಮದವರು ಸರಿಪಡಿಸಲಿ ಎಂದು ಇರುತ್ತಾರೆ. ತಲೆ ಮೇಲೆ ಮಣ್ಣು ಕಲ್ಲು ಬೀಳುತ್ತಿರುತ್ತದೆ. ಹಳ್ಳಿಯಲ್ಲಿ ಕಿಟಕಿ ಬಾಗಿಲು ಮಕ್ಕಳ ತಲೆಯ ಮೇಲೆ ಬೀಳುವ ಪರಿಸ್ಥಿತಿಯಿರುತ್ತದೆ; ಅದನ್ನು ನೋಡಿದರೆ ಗೊತ್ತಾಗುತ್ತದೆ. ಕೆಟ್ಟು ಹೋದ ಬಾಗಿಲು ರಿಪೇರಿ ಮಾಡಿಸುವುದಕ್ಕೆ ಗ್ರಾಮದವರು ಆಗ್ರಹಮಾಡುತ್ತಾರೆ ಎಂದೋ ಏನೋ ಯಾರೂ ಮುಂದೆ ಬರುವುದಿಲ್ಲ. ಉಪಾಧ್ಯಾಯರು ಮತ್ತು ಮಕ್ಕಳ ತಲೆ ಮೇಲೆ ಅದು ಬಿದ್ದುಹೋಗುವತನಕ ಗ್ರಾಮ ಪಂಚಾಯಿತಿ ಅವರೂ, ಸರಕಾರದವರೂ ಹಾಗೆಯೇ ಇರುತ್ತಾರೆ. ಇದು ಹಳ್ಳಿಯ ಒಂದು ಅಸಂಗತ ಪರಿಸ್ಥಿತಿ. ಇಂಥಾದ್ದನ್ನು ನಾನು ನೋಡಿದ್ದೇನೆ—ನನ್ನ ಕ್ಷೇತ್ರದಲ್ಲಿ ಒಂದು ಗ್ರಾಮ ಇದೆ. ಇವುಗಳನ್ನು ಪರಿಹಾರ ಮಾಡುವುದಕ್ಕೆ ಇಂತಹ ನಿರ್ವಾಹ ಸಂದರ್ಭಗಳನ್ನು ಒಂದಲ್ಲ ಒಂದು ರೀತಿಯಲ್ಲಿ ದಾಟಿ ಹೋಗಿ ಅಲ್ಲಿ ಸರಿಯಾದ ವ್ಯವಸ್ಥೆಗಳನ್ನು ಕಲ್ಪಿಸುವುದಕ್ಕೆ ಸರ್ಕಾರದವರು ಮಾನವೀಯವಾಗಿ ವಿಚಾರ ಮಾಡಬೇಕಾಗುತ್ತದೆ. ತಮ್ಮ ಸ್ವಂತ ತಲೆಯ ಬುದ್ಧಿ—ಆಫೀಸ ಕಛೇರಿ ಬುದ್ಧಿ ಅಲ್ಲ-ಸ್ವಂತ ಬುದ್ಧಿ ಇರಬೇಕು, ಮಂತ್ರಿ ಮಂಡಲದ ಬುದ್ಧಿ ಅಲ್ಲದೆ ಸರ್ಕಾರದ ತಲೆ ಅಲ್ಲದೆ ಪ್ರತಿಯೊಬ್ಬರಿಗೂ ಭುಜದ ಮೇಲೆ ಒಂದು ತಲೆ ಇರುತ್ತದೆ ಆ ತಲೆಯಲ್ಲಿ ಒಂದು ಮೆದುಳು ಇದ್ದಿರುತ್ತದೆ ಅದನ್ನು ಉಪಯೋಗಿಸಿ ಸರ್ಕಾರಕ್ಕೆ ತಿಳಿಸಿ ಕೆಲಸ ಮಾಡಬೇಕಾಗುತ್ತದೆ. ಸರ್ಕಾರದ ತಲೆಯಲ್ಲಿ ಬುದ್ಧಿ ಇಲ್ಲ ಎಂದರೆ ನನ್ನ ತಲೆಯಲ್ಲಿ ಇದೆ ಅದನ್ನು ಸ್ವಲ್ಪ ದಾನವಾಗಿ ಕೊಡುತ್ತೇನೆ ಎಂದು ಸರ್ಕಾರಕ್ಕೆ ಹೇಳುವಷ್ಟು ಛಾತಿ ಅಥವಾ ವಿಶಾಲ ಮನೋಭಾವ ದೊಡ್ಡವರು ಮತ್ತು ದೊಡ್ಡ ದೊಡ್ಡ ಹುದ್ದೆಗಳಲ್ಲಿ ಕುಳಿತಿರತಕ್ಕ ಅಧಿಕಾರಿಗಳಿಗೆ ಬರಬೇಕು. ಆದ್ದರಿಂದ ಈ ಕಟ್ಟಡಗಳ ವಿಷಯದಲ್ಲಿ ಏನು ಒಂದು ವಿಶೇಷ ಸನ್ನಿವೇಶ ಇದೆಯೋ ಇದನ್ನು ಸರ್ಕಾರದವರು ತೀವ್ರವಾಗಿ ಗಮನಿಸಬೇಕು. ತಾಲ್ಲೂಕು ಬೋರ್ಡು ಸಮಿತಿಗೆ ಹಣವನ್ನು ಕೊಡದೇ ಸಾವಿರಾರು ಶಾಲಾ ಕಟ್ಟಡಗಳನ್ನು ನೀವೇ ವಹಿಸಿಕೊಂಡು ಅವುಗಳನ್ನು ರಿಪೇರಿ ಮಾಡಿ ಇಟ್ಟುಕೊಳ್ಳಬೇಕಾಗುತ್ತದೆ, ಅವುಗಳನ್ನು ವಿಸ್ತರಿಸಿ ಎಂದು ಹೇಳುವುದರಲ್ಲಿ ಏನೂ ಅರ್ಥವಿಲ್ಲ. ನಾನು ಕಳೆದ ಏಪ್ರಿಲ್‌ನಲ್ಲಿ ಪ್ರವಾಸ ಮಾಡಿದಾಗ ಕೆಲವು ಶಾಲೆಗಳನ್ನು ನೋಡಿದೆ. ಅವು ಈ 10 ವರ್ಷಗಳಲ್ಲಿ ಮಕ್ಕಳಿಂದ ತುಂಬ ಕಿಕ್ಕಿರಿದು ಉಸಿರು ಕಟ್ಟುವಹಾಗಿದೆ. 40 ಮಕ್ಕಳು ಕುಳಿತುಕೊಳ್ಳತಕ್ಕ ಸ್ಥಳದಲ್ಲಿ 200 ಮಕ್ಕಳು ಕುಳಿತಿರತಕ್ಕ ದೃಶ್ಯ, ಕಟ್ಟಡ ಕಿರಿದು ಮಕ್ಕಳ ಸಂಖ್ಯೆ ದಿನೇ ದಿನೇ ಹೆಚ್ಚುತ್ತಾ ಇದೆ, ವಿಸ್ತರಿಸುವುದಕ್ಕೆ ಸರ್ಕಾರದವರು ಗ್ರಾಂಟ್ ಕೊಟ್ಟಿಲ್ಲ ಹಾಗೂ ಕಟ್ಟಡಕ್ಕೆ ಸ್ಥಳ ಅಕ್ವೈರ್ ಮಾಡಿಕೊಟ್ಟರೆ ನಮಗೆ ಅದು ಇದೆ ಇದು ಇದೆ ಎಂದು ಊರಿನವರಿಗೆ ಇವರು ತೊಂದರೆ ಹೇಳುತ್ತಾರೆ. ತಾಲ್ಲೂಕು ಬೋರ್ಡ್ ಸಮಿತಿಯವರು ನಮಗೆ ಅಷ್ಟು ಹಣ ಇಲ್ಲ, ಇದ್ದದ್ದೇ 3000 ರೂಪಾಯಿ, ಅದನ್ನು 30 ಹಳ್ಳಿಗಳಿಗೆ ಹಂಚಿದ್ದೇವೆ ಎಂದು ಹೇಳುತ್ತಾರೆ ಒಂದು ಹಳ್ಳಿಗೆ ಹೆಚ್ಚು ಹಣ ಸಿಕ್ಕಿ ಒಳ್ಳೆಯ ಕಟ್ಟಡ ಆಗಬಹುದು, ಇನ್ನೊಂದು ಹಳ್ಳಿಗೆ ಹೆಚ್ಚು ಹಣ ಸಿಕ್ಕದೆ ಕೆಟ್ಟ ಕಟ್ಟಡ ಆಗಬಹುದು. ಇದನ್ನು ಗಮನಕ್ಕೆ ತೆಗೆದುಕೊಳ್ಳದೇ ಹೋದರೆ—ನಾನು ನೋಡಿದ್ದೇನೆ ಒಬ್ಬರ ತೊಡೆಯ ಮೇಲೆ ಒಬ್ಬರು ಕುಳಿತುಕೊಳ್ಳುವ ಪರಿಸ್ಥಿತಿಯನ್ನು—ಕುಳಿತು ಕೊಳ್ಳುವುದಕ್ಕೆ ಮಣೆಯೇ ? ಅಥವಾ ಏನಾದರೂ ವ್ಯವಸ್ಥೆಯೇ ? ಮಕ್ಕಳು ನೆಲದ ಮೇಲೆ ತೆವಳುತ್ತಾ ಇರುತ್ತಾರೆ ಇಂಥಾ ಪರಿಸ್ಥಿತಿಯಲ್ಲಿ ಇವತ್ತು ವಿದ್ಯಾಭ್ಯಾಸ

(ಶ್ರೀ ಎಸ್. ಗೋಪಾಲಗೌಡ)

ವನ್ನು ಕೊಡುತ್ತೇವೆ. ಇದರಲ್ಲಿ ಈ ಕಡೆ ಒಂದು ಶಾಲೆ ಆದರೆ ಅದರ ಬೆನ್ನಿಗೆ ಇನ್ನೊಂದು ಶಾಲೆ ಈ ಕಡೆ ಉಪಾಧ್ಯಾಯ ಭೂಗೋಳ ಪಾಠ ಮಾಡುತ್ತಾ ಇದ್ದರೆ ಆ ಕಡೆ ಉಪಾಧ್ಯಾಯ ಲೆಕ್ಕದ ಪಾಠ ಮಾಡುತ್ತಾ ಇರುತ್ತಾನೆ. ಇಬ್ಬರಿಗೂ ಒಂದೇ ಹಲಗೆ ಇರುತ್ತದೆ. ಇಂಥ ಮಕ್ಕಳು ಬೆನ್ನಿಗೆ ಬೆನ್ನು ಕೊಟ್ಟು ಕುಳಿತಿರತಕ್ಕ ಪರಿಸ್ಥಿತಿಯಲ್ಲಿ ಏನು ವಿದ್ಯಾಭ್ಯಾಸ ಆದೀತು ಎಂಬುದನ್ನು ವಿಚಾರ ಮಾಡಬೇಕು. ಮಲೆನಾಡಿನಂಥ ಪ್ರದೇಶ, ಕೊಡಗಿನಂಥ ಪ್ರದೇಶ ಮತ್ತು ಮರ ಮುಟ್ಟು ಸಿಕ್ಕದ ಬಿಜಾಪುರ ಪ್ರದೇಶ ಈ ಎಲ್ಲಾ ಪ್ರದೇಶಗಳನ್ನೂ ಗಮನಕ್ಕೆ ತೆಗೆದುಕೊಂಡು ದೊಡ್ಡ ಹಳ್ಳಿ, ಯಾವುದು, ಯಾವುದಕ್ಕೆ ಹೆಚ್ಚು ಸಿಕ್ಕಬೇಕು, ಎಲ್ಲಿ ಹೆಚ್ಚಿನ ಅವಶ್ಯಕತೆಗಳನ್ನು ಪೂರೈಸಬೇಕು, ತುರ್ತಾಗಿ ಪೂರೈಸಬೇಕು ಎಂಬುದನ್ನು ಗಮನಿಸಿ ಸರ್ಕಾರದವರು ಕ್ರಮ ತೆಗೆದುಕೊಳ್ಳದೇ ಹೋದರೆ ಇದು ಬಹಳ ದೊಡ್ಡ ಅಪಾಯಕ್ಕೆ ಹಾದಿಯಾಗುತ್ತದೆ. ಇನ್ನೊಂದು ಮಾತನ್ನು ಈ ಸಂದರ್ಭದಲ್ಲಿ ಹೇಳಬೇಕು; ಕಟ್ಟಡ ಇಲ್ಲದೇ ಇದ್ದರೆ ಕಟ್ಟಡ ಕಟ್ಟಿ ಕೊಡಿ, ಹಣ ಕೊಡಿ, ನೀವೇ ಉಪಾಧ್ಯಾಯರನ್ನು ನೇಮಕ ಮಾಡಿ ಶಾಲೆಯನ್ನು ತೆರೆಯುತ್ತೇವೆ ಎಂಬ ಈ ಮಾರವಾಡಿ ಹೇಳುವ ಷರತ್ತುಗಳನ್ನು ಸರ್ಕಾರದವರು ಅನೇಕ ಸಲ ಹೇಳುತ್ತಾರೆ. 20 ಹುಡುಗರನ್ನು ಕೊಡಿ ಇಲ್ಲದೇ ಇದ್ದರೆ 3,000 ರೂಪಾಯಿ ಡಿಪಾಸಿಟ್ಟು ಮಾಡಿ ಎಂದು ಈ ತರಹ ಸರ್ಕಾರದಿಂದ ಕೇಳುವುದು ಬಹಳ ಅಸಹನೀಯವಾದುದು, ಇಷ್ಟು ಬೇಜವಾಬ್ದಾರಿಯಿಂದ ಸರ್ಕಾರದವರು ವರ್ತಿಸುತ್ತಿದ್ದಾರಲ್ಲ ಎಂದು ಒಂದೊಂದು ಸಲ ಆಶ್ಚರ್ಯವಾಗುತ್ತದೆ, ನೀವು ಒಂದು ಉಸಿರಿನಲ್ಲಿ 6 ವರ್ಷ ತುಂಬಿದ ಎಲ್ಲಾ ಹೆಣ್ಣು ಮತ್ತು ಗಂಡು ಮಕ್ಕಳಿಗೂ ಕಡ್ಡಾಯ ಶಿಕ್ಷಣ ಕೊಡಬೇಕು, ಇದು ರಾಜ್ಯಾಂಗದ ನಿರ್ದೇಶನ ಎಂದು ಹೇಳುತ್ತೀರಿ. ಇದು ನಿಮ್ಮ ಒಪ್ಪಿತವಾದ ಗುರಿಯಾಗಿದೆ ಇದನ್ನು ಕಾರ್ಯಗತ ಮಾಡುವುದರಲ್ಲಿ ಇದ್ದೇವೆ ಎಂದು ಒಂದು ಉಸಿರಿನಲ್ಲಿ ಹೇಳಿದರೆ ಇನ್ನೊಂದು ಉಸಿರಿನಲ್ಲಿ ಶಾಲೆಗಳಿಗೆ ಹುಡುಗರನ್ನು ಕಳುಹಿಸಿದರೂ ಕೂಡ ಕೆಲವು ಊರುಗಳಲ್ಲಿ 3-4 ಮೈಲಿಗಳ ದೂರದಲ್ಲಿ ಶಾಲೆ ಹತ್ತಿರ ಎಲ್ಲೂ ಇಲ್ಲ ಎಂದರೂ ಅವರಿಗೂ ಈ ಉತ್ತರವನ್ನು ಸರ್ಕಾರದವರು ಕೆಲವು ಸಲ ಕೊಡುತ್ತಾರೆ, ಇದನ್ನೂ ಕೂಡ ಮಾನ್ಯ ವಿದ್ಯಾ ಸಚಿವರು ವಿಚಾರ ಮಾಡಬೇಕು. ಮಕ್ಕಳ ಸಂಖ್ಯೆ 19 ಇರಬಹುದು ಶಾಲೆ ತೆಗೆಯಲಿಕ್ಕೆ 20 ಜನ ಹುಡುಗರು ಇಲ್ಲ ಎಂದು ಶಾಲೆ ತೆಗೆಯದೇ ಹೋದರೆ ಆ 19 ಮಕ್ಕಳ ಗತಿ ಏನು? ಕಾನೂನಿಗೆ ಕಣ್ಣು ಇರುವುದಿಲ್ಲ—ಹೃದಯ, ಮನಸ್ಸು ಇರುವುದಿಲ್ಲ. ಇಂತಹ ಕಾನೂನುಗಳನ್ನು ಜನರ ಮುಂದೆ ಹಿಡಿಯುವುದರಿಂದ ಏನು ಪ್ರಯೋಜನ? 19 ಮಕ್ಕಳನ್ನು ಕೊಡುವ ಹಳ್ಳಿಯೇ ಆದಾಗ—20 ಮಕ್ಕಳು ಇಲ್ಲ ಎಂದು ಶಾಲೆ ತೆರೆಯದಿದ್ದರೆ 19 ಜನ ಇರುವ ಮಕ್ಕಳು ಬೇರೆ ಕಡೆಗೆ ಹೋಗಿ ಊಟ ಎಲ್ಲಿ ಮಾಡಬೇಕು? ಅವರಿಗೆ ವಿದ್ಯಾಭ್ಯಾಸ ಹೇಗೆ ಕೊಡಿಸಬೇಕು? ಈ ಒಂದು ಸಂದರ್ಭವನ್ನು ತಾವು ತಪ್ಪಿಸಿಕೊಂಡು ಹೊಣೆಗಾರಿಕೆಯನ್ನು ತೀರಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಯಾವ 6 ವರ್ಷ ತುಂಬಿದ ಹೆಣ್ಣು ಮತ್ತು ಗಂಡು ಮಗುವನ್ನೂ ಶಾಲೆಯ ಹೊರಗಡೆ ಅಲೆಯುವುದನ್ನು ನೋಡುವುದಕ್ಕೆ ನನ್ನಿಂದ ಸಾಧ್ಯವಿಲ್ಲ.

ಏಕೆಂದರೆ ಇದು ಸರ್ಕಾರದವರ ಆದ್ಯಕರ್ತವ್ಯ. ಸರ್ಕಾರದವರೇ ಮಾಡುತ್ತೇವೆಂದು ಒಪ್ಪಿಕೊಂಡಿರುವುದರಿಂದ ಇದು ಇಂದು ಅವರ ಆದ್ಯಕರ್ತವ್ಯವಾಗಿದೆ. ಆದರೆ ಸರ್ಕಾರದವರಿಗೆ ಹಣದ ಕೊರತೆ ಇರಬಹುದು, ಜನಗಳು ಮುಂದೆ ಬಾರದಿರಬಹುದು, ನುರಿತ ಶಿಕ್ಷಕರಿಲ್ಲದಿರಬಹುದು, ಆದಾಗ್ಯೂ ಅವರ ಈ ಪ್ರಾಥಮಿಕ ಶಿಕ್ಷಣವನ್ನು ಉಚಿತವಾಗಿ ಮತ್ತು ಕಡ್ಡಾಯವಾಗಿ ಕೊಟ್ಟೇತೀರಬೇಕು. ದೇಶ ಸ್ವಾತಂತ್ರಗೊಳಿಸಿದ ಹದಿನಾರು ವರ್ಷಗಳ ಅವಧಿಯಲ್ಲಿ ನಾವೀಗ ಒಂದು ಪೀಳಿಗೆಯನ್ನು ಕಾಡುಪಾಲು ಮಾಡಿದ್ದೇವೆ. ನೂರಕ್ಕೆ ಐವತ್ತರಷ್ಟು ಹುಡುಗರು ಶಾಲೆಯ ಹೊರಗಡೆ ಇದ್ದಾರೆ ಎನ್ನುವುದನ್ನು ತಾವೆಲ್ಲರೂ ನೋಡಿರಬಹುದು.

Mr. SPEAKER.—This resolution has already been discussed for the 3 hours and would have been put to the vote of the House but for the hon. Member's desire to participate.

Sri S. GOPAL GOWDA.—I want 5 to 10 minutes.

Mr. SPEAKER.—What is the opinion of the House? Would it like to spend some more time?

Sri S. SIVAPPA.—This is an important resolution and the others tc follow are not so important. We may spend 2 hours more on this resolution.

Mr. SPEAKER.—I have no objection at all if the House agrees. But the question can be discussed under Supplementary demands and on other occasions. Shall I fix the time upto 11-30 A.M.?

HON'BLE MEMBERS.—Yes.

Mr. SPEAKER.—There would be no time-limit.

Sri S. R. KANTHI (Minister for Education).—I require about 45 minutes.

Sri S. M. KRISHNA (Maddur).—The Hon. Minister may reply at 11-30 A.M.

Mr. SPEAKER.—We will see.

ಶ್ರೀ ಎಸ್. ಗೋಪಾಲಗೌಡ.—ಇನ್ನು ಸರ್ಕಾರದವರು ಪ್ರಾಥಮಿಕ ವಿದ್ಯಾಭ್ಯಾಸ ಪಡೆಯತಕ್ಕ ಮಕ್ಕಳಿಗೆ,ಅದರಲೂ ಹಳ್ಳಿಗಾಡಿನ ಜನಾಂಗದವರಿಗೆ ಕೆಲವು ವಿಶೇಷ ಸೌಲಭ್ಯಗಳನ್ನು ಕೊಡಬೇಕೆಂದು ಅದಕ್ಕಾಗಿ ಕೆಲವು ಹಣವನ್ನು ವಿಸಲಾಗಿಟ್ಟಿದ್ದಾರೆ. ಆದರೆ ಈ ಯೋಜನೆ ಕೆಲವು ವೇಳೆ ಕೇವಲ ಒಂದು ಪ್ರಚಾರಾರ್ಥಯೋಜನೆ ಆಗಿರುತ್ತದೆಯೇ ವಿನಾ ನಿಜವಾಗಿಯೂ ಜನರಿಗೆ ಇದರಿಂದ ಏನು ಸೌಲಭ್ಯ ದೊರೆಯಬೇಕೋ ಅದು ದೊರೆಯುತ್ತಿಲ್ಲ. ಈ ವಿಚಾರ ಎಲ್ಲರಿಗೂ ಗೊತ್ತಿರುತ್ತದೆ. ಕೆಲವು ಮಕ್ಕಳಿಗೆ ಬಟ್ಟೆಕೊಡಬೇಕೆಂಬ ಒಂದು ವ್ಯವಸ್ಥೆ ಮಾಡಿದ್ದಾರೆ. ಆ ಬಟ್ಟೆಗಳನ್ನು ಸರಬರಾಯಿ ಮಾಡುವುದರಲ್ಲಿ ಅಳತೆಗೆ ಸರಿಯಾದ ಬಟ್ಟೆಗಳನ್ನು ತರುವುದಿಲ್ಲ. ರೆಡಿಮೇಡ್ ಷಾಪುಗಳಲ್ಲಿ ಕೊಂಡುಬಿಡುತ್ತಾರೆ. ಆರಾಣೆ ಬೆಲೆ ಇದ್ದರೆ ಎಂಟಾಣೆ ಬಿಲ್ ಹಾಕಿಸಿ ಅದರಲ್ಲೂ ಎರಡಾಣೆ ಜೇಬಿಗೆ ಹಾಕತಕ್ಕಂಥ ಜನಗಳಿದ್ದಾರೆ. ನಮ್ಮ ಕಡೆ ಹೆಣದ ಬಾಯಿನಲ್ಲಿರತಕ್ಕ ಬೆಣ್ಣೆ ತಿನ್ನತಕ್ಕ ಜನ ಎಂದು ಹೇಳುತ್ತಾರೆ, ಅಂಥ ಜನ ಇವರು. ಹರಿಜನರ ಮಕ್ಕಳ ಬಟ್ಟೆಗಾಗಿ 5 ರೂಪಾಯಿ ಗ್ರ್ಯಾಂಟ್‌ಕೊಟ್ಟಿದ್ದರೆ ಅದರಲ್ಲೂ ಒಂದೂವರೆ ರೂಪಾಯಿ ಉಳಿಸಿಕೊಳ್ಳುವಂಥ ಜನ ನಮ್ಮಲ್ಲಿದ್ದಾರೆ. ಮೂರಡಿ ಉದ್ದ ಇರತಕ್ಕ ಹುಡುಗನಿಗೆ ಆರಂಚಿನ ನಿಕ್ಕರನ್ನು ಕೊಡುತ್ತಾರೆ. ಈ ವಿಚಾರಗಳನ್ನೆಲ್ಲ ಮಾನ್ಯ ಸಚಿವರು ಸ್ವಲ್ಪ ಲಾಲಿಸಬೇಕೆಂದು ಕೇಳಿಕೊಳ್ಳುತ್ತೇನೆ. ಈ ಕೆಲವು ವಿಚಾರಗಳು ನಾವು ಎಷ್ಟರಮಟ್ಟಿಗೆ ಕೆಟ್ಟು ಹೋಗಿದ್ದೇವೆಂಬುದನ್ನು ಸೂಚಿಸುತ್ತದೆ. ಮಕ್ಕಳ ವಿಚಾರದಲ್ಲೂ ಅನೇಕ ಪುಣ್ಯಾತ್ಮರು ನಾನಾ ರೀತಿಯಲ್ಲಿ ಧಾನಧರ್ಮಗಳನ್ನು ಮಾಡುತ್ತಾರೆ. ಹಾಗೆ ಯಾರಾದರೂ ಹಣ ಕೊಟ್ಟರೆ ಅದಕ್ಕೆ ಒಂದು ಸರಿಯಾದ ವ್ಯವಸ್ಥೆಬೇಡವೇ? ನಮ್ಮ ಕಡೆ ಹುಡುಗರು 3-4 ಮೈಲಗಳಿಂದ ಬರುತ್ತಾರೆ, ಅವರಿಗೆ ದಿನವೆಲ್ಲ ಊಟಇರುವುದಿಲ್ಲ. ಸಂಜೆ ಮನೆಗೆ ಹೋಗುವಾಗ ಅವರ ಬಾಯಲ್ಲಿ ಒಂದು ಹನಿ ಎಂಜಲು ಸಹಾ ಇರುವುದಿಲ್ಲ. ಈ ಹಿಂದೆ ಡಾ. ಲೋಹಿಯಾರವರು ಒಬ್ಬ ಮನುಷ್ಯನ ಆದಾಯ ಮೂರಾಣೆ ಇದೆಂದು ಹೇಳಿದಾಗ ಸಭೆಯಲ್ಲಿ ಒಂದು ಕೋಲಾಹಲವೇ ಎದ್ದಿತ್ತು. ಈ ದಿವಸ ಭರತಖಂಡದಲ್ಲಿ 27 ಕೋಟಿ ಜನ ಹಳ್ಳಿಗಾಡಿನಲ್ಲಿರುತ್ತಾರೆ. ಪೇಟೆಯಲ್ಲಿರತಕ್ಕ ಜನರಿಗೆ ಹೇಗೋ ದುಡ್ಡು ಬರುತ್ತದೆ. ಅವರು ನಾಯಿಯ ಬಾಲಕ್ಕೂ ದುಡ್ಡನ್ನು ಕಟ್ಟಬಲ್ಲರು. ಪೇಟೆಯಲ್ಲಿರತಕ್ಕ ಒಬ್ಬ ಕಂಟ್ರಾಕ್ಟರ ಮಗ ದಿನಕ್ಕೆ ಹತ್ತು ರೂಪಾಯಿಗಳನ್ನು ಬೇಕಾದರೂ ಖರ್ಚುಮಾಡಬಲ್ಲ. ಮಂತ್ರಿಗಳ ಮಕ್ಕಳು ಕಾರಿನಲ್ಲೇ ಓಡಾಡಬಹುದು ಆದರೆ ಹಳ್ಳಿ ಮಕ್ಕಳಿಗೆ ಗಂಜಿಗೆ ಉಪ್ಪು ಸಿಕ್ಕುವುದು ಕಷ್ಟವಾಗಿರುತ್ತದೆ. ಆ ಶೀತ ಪ್ರದೇಶದಲ್ಲಿ ಬೆಳಗ್ಗೆ ನೀರು ಕುಡಿಯುವುದಕ್ಕಾಗುವುದಿಲ್ಲ. ಅಂಥ ಬಡಮಕ್ಕಳಿಗೆ ಕಾಫಿ ಎಲ್ಲಿಂದ ಬರಬೇಕು. ಆ ಬಡವರ ಮಕ್ಕಳಿಗೆ ಅನೇಕ ವೇಳೆ ಊಟಕ್ಕೇ ತೊಂದರೆ ಇರುತ್ತದೆ. ಹಾಗಿರುವಾಗ ಅ ಮಕ್ಕಳಿಗೆ ಪಾಠ ಪ್ರವಚನಗಳಲ್ಲಿ ಮನಸ್ಸು ಹೇಗೆ ತಾನೆ ಸರಿಯಾಗಿ ನಿಲ್ಲಲು ಸಾಧ್ಯ? ಹಳ್ಳಿಗಾಡಿನಲ್ಲಿರತಕ್ಕ ಅನೇಕ ತಂದೆತಾಯಿಗಳಿಗೆ ಅವರ ಮಕ್ಕಳನ್ನು ಶಾಲೆಗೆ ಕಳುಹಿಸಲು ಸಾಧ್ಯವಾಗುತ್ತಿಲ್ಲ. ಏಕೆಂದರೆ ಅ ಮಕ್ಕಳಿಗೆ ಪುಸ್ತಕ,ಬಟ್ಟೆ,ಸೀಸದಕಡ್ಡಿ,ಫೀಜು, ಕೈಗೆ ಎರಡಾಣೆ ಇಷ್ಟನ್ನು ಒದಗಿಸಲು ಸಾಧ್ಯವಿರುವುದಿಲ್ಲ. ಪಟ್ಟಣದಲ್ಲೂ ಇಂಥ ಕೆಲವು ಜನಗಳಿರುತ್ತಾರೆ. ಅಂಥವರು ಯಾರೆಂದರೆ ಬಿನ್ನಿ, ಮಿನರ್ವ ಇತ್ಯಾದಿ ಮಿಲ್ಲುಗಳಲ್ಲಿ ಕೆಲಸಮಾಡತಕ್ಕ ಜನರು, ಪೋಲೀಸ್ ಕಾನ್‌ಸ್ಟೇಬಲ್‌ಗಳು, ಬಡಉಪಾಧ್ಯಾಯರುಗಳು ಇಂಥವರು ಪಟ್ಟಣಗಳಲ್ಲಿದ್ದರೂ ಅವರು ಬಡವರೇನೆ. ಆದರೆ ಈ ಉಪಾಧ್ಯಾಯರ ಮಕ್ಕಳಿಗೆ ಶಾಲಾ ಫೀ ಇಲ್ಲ ಎಂದು ಮಾನ್ಯ ಮಂತ್ರಿಗಳು ಹೇಳಬಹುದು ಆದರೆ ಅ ಹುಡುಗ ಶಾಲೆಗೆ ಹೋಗಬೇಕಾದರೆ ಆತನಿಗೆ ಚಡ್ಡಿ,ಅಂಗಿ,ಪುಸ್ತಕ, ಪೆನ್‌ಸಿಲ್‌ಕಡ್ಡಿ, ಇತರೆ ವೆಚ್ಚಕ್ಕಾಗಿ ಕೈಯಲ್ಲಿ ದಿನಕ್ಕೆ ಒಂದೆರಡಾಣೆ ದುಡ್ಡು ಇವೆನ್ನೆಲ್ಲ ಲೆಕ್ಕ ಹಾಕಿದರೆ ಇದೆಷ್ಟಾಗುತ್ತದೆ?

[SRI M. SRINIVASA NAIK in the Chair]

ಹಾಗೆ ಕೇಳಿದರೆ ಮಾನ್ಯ ವಿದ್ಯಾ ಸಚಿವರು ಒಂದು ರೀತಿಯಾಗಿ ಉತ್ತರ ಕೊಡುತ್ತಾರೆ. ಅವರ ತಲೆಯಲ್ಲಿ ಅನೇಕ ವಿಷಯಗಳು ಬರುತಿರುತ್ತವೆ. ಪಾದರಸದಂತೆ ಅವರ ಬುದ್ಧಿಯೂ ಓಡುತ್ತಿರುತ್ತದೆ. ಇದು ಅಲ್ಲದೆ ಈಚೆಗೆ ಅವರೇನು ಮಾಡಿದ್ದಾರೆಂದರೆ ಪ್ರತಿಯೊಂದು ಮಗುವೂ ಕೂಡ ಎರಡು ರೂಪಾಯಿಗಳನ್ನು ಕಲ್ಯಾಣ ನಿಧಿಗಾಗಿ ಕೊಡಬೇಕೆಂದು ನಿಗದಿ ಮಾಡಿದ್ದಾರೆ.

ಶ್ರೀ ಎಸ್.ಆರ್.ಕಂಠಿ.–ಇದು ಪ್ರೈಮರಿ ಶಾಲೆಗೆ ಹೋಗುವ ಹುಡುಗರಿಗಲ್ಲ. ಬರೀ ಹೈಸ್ಕೂಲು ಮತ್ತು ಕಾಲೇಜುಗಳಲ್ಲಿ ಹೋಗುವ ಹುಡುಗರಿಗೆ ಮಾತ್ರ.

ಶ್ರೀ ಎಸ್. ಗೋಪಾಲಗೌಡ.—ಇಂತಹ ನಿಧಿಯನ್ನು ಹೈಸ್ಕೂಲುಗಳಿಗೆ ಮಾತ್ರ ಎಂದರೂ ಕೊಡುವುದು ಕಷ್ಟವಾಗುತ್ತದೆ. ಕೆಲವು ಕಡೆ ಶ್ರೀಮಂತರ ಮಕ್ಕಳು ಪ್ರೈಮರಿ ಶಾಲೆಗಳಲ್ಲಿ ಓದಿಸುವುದಕ್ಕೆ ಸುಮಾರು ಇನ್ನೂರು ರೂಪಾಯಿಗಳಷ್ಟು ಖರ್ಚು ಮಾಡುತ್ತಿದ್ದಾರೆ. ಸುಮಾರು 6,7, ಮತ್ತು 8 ವರ್ಷದ ಮಕ್ಕಳು ಬೆಂಗಳೂರಿನಲ್ಲಿರುವ ಪ್ರೈಮರಿ ಶಾಲೆಗಳಲ್ಲಿ ಓದುತ್ತಿದ್ದಾರೆ. ಇಂತಹ ಸ್ಕೂಲುಗಳು ಡೆಹರಾಡೂನಿನಲ್ಲಿ ಹಾಗೂ ಮಸ್ಸೂರಿ ಮುಂತಾದ ಕಡೆಗಳಲ್ಲಿರುವ ಶಾಲೆಗಳಿಗೆ ಹೋಗುವ ಮಕ್ಕಳಿಂದ ಊಶುಲ್ಕವನ್ನು ವಸೂಲು ಮಾಡುತ್ತಿದ್ದಾರೆ. ಶಾಲೆಗಳಿಗೆ ಹೋಗುವ ಮಕ್ಕಳಿಗಾಗಿ ಶಾಲೆಯು ಆರಂಭವಾಗಿ ಅವರ ವಿದ್ಯಾಭ್ಯಾಸವು ಪೂರೈಕೆಯಾಗುವವರೆಗೆ ಕೆಲವು ಸೌಕರ್ಯಗಳನ್ನು ಕೊಡಬೇಕೆಂದು ಅಷ್ಟು ಹಣವನ್ನು ಕೊಡಬೇಕೆಂದು ಮಾಡಿರುವುದನ್ನು ನಾವು ಒಪ್ಪುತ್ತೇನೆ. ಆದರೆ ಅದರ ವಿತರಣೆ ಸರಿಯಾಗಿ ಆಗುತ್ತಿದೆಯೋ ಎನ್ನುವುದನ್ನು ಈಗ ವಿವೇಚನೆ ಮಾಡುವುದು ಅಪ್ರಕೃತ ಮತ್ತು ಅದರ ವಿವಂಚನೆಗೆ ಈಗ ಒಳಗಾಗಬೇಕಾದ ಅಗತ್ಯವೂ ಇಲ್ಲ. ಆದರೆ ಕೆಲವು ಬೇರೆ ಸಂದರ್ಭಗಳಲ್ಲಿಯೂ ಇಂತಹ ಶಾಲೆಗಳಲ್ಲಿ ಹಣದ ವಸೂಲಿ ನಡೆಯುತ್ತಿದೆ. ಇದನ್ನು ಮಾಡಿರುವುದರಿಂದ ಮಕ್ಕಳು ಶಾಲೆಗೆ ಬರುವುದೂ ಕಷ್ಟವಾಗುತ್ತದೆ. ಅಲ್ಲದೆ ಸರ್ಕಾರದವರು ಮಾನವೀಯತೆಯ ದೃಷ್ಟಿಯಿಂದ ಕೆಲವು ಸೌಲಭ್ಯಗಳನ್ನು ಕೊಡುವಂತಿರಬೇಕು ಎಂದು ಹೇಳುತ್ತ ಇದರಲ್ಲಿ ಬಟ್ಟೆಯನ್ನೂ ಕೊಡಬೇಕೆಂದು ಮಾಡಿದ್ದಾರೆ. ಇದಕ್ಕಾಗಿ ಲಕ್ಷಾಂತರ ರೂಪಾಯಿಗಳಷ್ಟು ಹಣವನ್ನು ಖರ್ಚು ಮಾಡಿ, ಸುಮಾರು ಐದು ಲಕ್ಷಮಂದಿ ವಿದ್ಯಾರ್ಥಿಗಳಿಗೆ ಇದರಿಂದ ಪ್ರಯೋಜನವಾಗಬೇಕು ಎಂದು ಹೇಳುವಾಗ ಇದರ ವ್ಯವಸ್ಥೆ ಚೆನ್ನಾಗಿ ನಡೆಯಬೇಕು. ಆದರೆ ಹಣವೇನೋ ಖರ್ಚಾಗುತ್ತದೆ ಅದರಂತೆ ಇದರ ವ್ಯವಸ್ಥೆ ಸರಿಯಾಗಿ ಆಗುತ್ತಿದೆ ಎನ್ನುವುದು ಕಾಣುತ್ತಿಲ್ಲ. ಇವೊತ್ತು ಸೆಪ್ಟಂಬರ್ ತಿಂಗಳು 7ನೇ ತಾರೀಖಿನಲ್ಲಿದ್ದೇವೆ. ಆದರೆ ಕೆಲವು ಊರುಗಳಲ್ಲಿರುವ ಶಾಲೆಗಳಿಗೆ ಇನ್ನೂ ದುಡ್ಡು ತಲುಪಿಯೇ ಇಲ್ಲ. ದುಡ್ಡನ್ನು ಹಂಚುವ ಚಾನಲ್ಲು ಏನಿದೆ, ಅದರಿಂದ ಹಣದ ಪರ್ಗಾವಣೆಯು ಗೊಂದಲದಿಂದ ಮತ್ತು ಮಂತ್ರಿಗಳ ಸ್ವಂತ ಕೆಲಸಗಳಿಂದಲೂ, ಹೀಗೆ ಬೇರೆ ಬೇರೆ ಕೆಲಸಗಳು ಅಡ್ಡ ಬರುವುದರಿಂದ ತಡವಾಗುತ್ತಿದೆ. ನಾನು ಹೇಳುತ್ತಿರುವುದು ಕೊಡಚಾದ್ರಿ ಮತ್ತು ಪಶ್ಚಿಮ ತುದಿಯಲ್ಲಿರುವ ಹುಲಿಕಲ್ಲು ಇತ್ಯಾದಿ ಊರುಗಳಿಗೆ ಹೋಗಬೇಕಾದರೆ ಡಿ. ಡಿ. ಪಿ. ಐ. ನಿಂದ ಡಿ. ಪಿ. ಐ. ಡಿ. ಪಿ. ಐ. ಕಡೆಯಿಂದ ಇನ್ಸ್‌ಪೆಕ್ಟರು ಕಡೆಗೆ, ಇನ್ಸ್‌ಪೆಕ್ಟರು ಕಡೆಯಿಂದ ಹೆಡ್‌ಮಾಸ್ಟರವರ ಕಡೆಗೆ ಹಣ ಹೋಗಿ ತಲಪಬೇಕಾದರೆ ಬಹುಶಃ ನವಂಬರು ಕೊನೆಯ ಹೊತ್ತಿಗೆ ಹೋದರೆ ಅವರ ಪುಣ್ಯ. ನಾವೆಲ್ಲಾ ಈಗ ಸ್ಕಾಲರ್‌ಷಿಪ್ಪುಗಳನ್ನು ಹಂಚುವುದನ್ನು ನೋಡುತ್ತಿದ್ದೇವೆ. ಕೆಲವು ವಿದ್ಯಾರ್ಥಿಗಳಿಗೆ ಸ್ಕಾಲರ್‌ಷಿಪ್ಪು 500–600 ರೂಪಾಯಿಗಳಷ್ಟು ಅವರ ವಿದ್ಯಾಭ್ಯಾಸ ಮುಗಿದಮೇಲೆ ತಲಪಿರುವ ಸಂದರ್ಭಗಳೂ ಇವೆ. ಇಂತಹ ಒಂದು ಸ್ಥಿತಿ ಈಗ ಇದೆ. ಈಗ ಬಟ್ಟೆಯನ್ನೂ ಹಂಚಬೇಕೆಂದು ಮಾಡಿದ್ದಾರೆ. ಇದನ್ನು ಕೊಡುವುದೇನೋ ಅತ್ಯಗತ್ಯ. ಆದರೆ ಕೆಲವು ಕಡೆ ಒಂದು ಹತ್ತಿಪ್ಪತ್ತು ಮಂದಿ ಹರಿಜನರ ಮಕ್ಕಳುಗಳು ಇವೆ. ಅವು ಶಾಲೆಗೆ ಹೋಗಲು ಬಟ್ಟೆಯೇ ಇರುವುದಿಲ್ಲ. ಅಂತಹ ಮಕ್ಕಳು ಆರು ವರ್ಷ ತುಂಬಿದಾಕ್ಷಣ ಶಾಲೆಗೆ ಕಳುಹಿಸಬೇಕೆಂದು ಕಡ್ಡಾಯ ಮಾಡಿದ್ದೀರಿ? ಅವರಿಗೆ ಆರು ವರ್ಷ ಆಗಿದೆಯೋ ಏಳು ವರ್ಷವಾಗಿದೆಯೋ ಐದು ವರ್ಷವಾಗಿದೆಯೋ ಅದನ್ನು ಹೇಳಲು ಅವರಲ್ಲಿ ಯಾವ ಜಾತಕದ ಕಾಪೀನೂ ಇಲ್ಲ, ಹುಟ್ಟಿದ ತಾರೀಖು ಕೂಡ ಗೊತ್ತಿರುವುದಿಲ್ಲ. ಅವರಿಗೆ ಸ್ಕಾಲರ್‌ಷಿಪ್ಪುಗಳನ್ನು ಹಂಚುವಾಗ ಒಬ್ಬರು ಅವನಿಗೆ 6, 7 ವರ್ಷಗಳಾಗಿವೆ ಎಂದರೆ ಇನ್ನೊಬ್ಬರು ಇನ್ನೂ ನಾಲ್ಕೂವರೆ ವರ್ಷ ಮಾತ್ರ ಆಗಿದೆ ಎಂದು ಹೇಳುತ್ತಾರೆ. ಇಂತಹ ಅವ್ಯವಸ್ಥೆಗಳು ಎಷ್ಟೋ ಇರುತ್ತವೆ. ಇದರ ಬಗ್ಗೆ ಸರ್ಕಾರ ಸರ್ವೆ ಮಾಡಿ ಎಲ್ಲೆಲ್ಲಿ ಎಷ್ಟು ವರ್ಷದ ಮಕ್ಕಳುಗಳು ಇವೆ ಎನ್ನುವುದನ್ನು ತಿಳಿಯಲು ಸರಿಯಾದ ಕಾರ್ಯಕ್ರಮವನ್ನು ಹಾಕಿಕೊಂಡಂತೆ ತೋರುವುದಿಲ್ಲ. ಎಲ್ಲ ಮಕ್ಕಳನ್ನೂ ಈಗ ಕಡ್ಡಾಯವಾಗಿ ವಿದ್ಯಾಭ್ಯಾಸಕ್ಕಾಗಿ ಶಾಲೆಗಳಿಗೆ ಕಳುಹಿಸುವುದಕ್ಕೆ ಸಾಧ್ಯವಾಗಿಲ್ಲ. ಏಕೆಂದರೆ ಇದನ್ನು ಕಾರ್ಯಗತ ಮಾಡುವಾಗ ಆರು ವರ್ಷದ ಮಕ್ಕಳು ಎಂದು ಶಾಲೆಗೆ ಕಳುಹಿಸುತ್ತಾರೆ. ಆದರೆ 7ನೆಯ ವರ್ಷದಲ್ಲಿ ಎಷ್ಟು ಜನ ಮಕ್ಕಳು ಶಾಲೆ ಬಿಟ್ಟರು ಎನ್ನುವುದರ ಅಂಕಿ ಸಂಖ್ಯೆಗಳೇನಾದರೂ ಇವೆಯೋ ಎಂದರೆ ಅದು ಕೂಡ ಇಲ್ಲ. ಎಷ್ಟೋ ಕಡೆ ನಾವು ನೋಡಿರುವಂತೆ ಗೇಣಿ ಜಮೀನು ಮಾಡುವವರ ಮಕ್ಕಳು 7, 8, 9 ವರ್ಷದ ಹುಡುಗರು ಗುಳ ಕಟ್ಟಿಕೊಂಡು ಉಳುವುದಕ್ಕೆ ಹೋಗುತ್ತಾರೆಯೇ ಹೊರತು ಅವರನ್ನು ಶಾಲೆಗಳಿಗೆ ಸೇರಿಸುವುದಕ್ಕೆ ಪ್ರಯತ್ನ ಮಾಡುವುದಿಲ್ಲ. ಹೀಗೆ ಲೆಕ್ಕಕ್ಕೆ ಆರು ತುಂಬಿದ ಮಕ್ಕಳು ಎಷ್ಟು ಜನರು ಶಾಲೆಗಳಿಗೆ ಬಂದು 7ನೇ ವರ್ಷದಲ್ಲಿ ಬಿಡುತ್ತಿರುವವರು ಎನ್ನುವುದರ ಲೆಕ್ಕವೂ ಸಿಕ್ಕುತ್ತಿಲ್ಲ......

ಶ್ರೀ ಎಸ್. ಆರ್. ಕಂಠಿ.—ತಾವು ಸ್ವಲ್ಪ ಅರ್ಥಮಾಡಿಕೊಳ್ಳಬೇಕು. ಇದರಲ್ಲಿ ಎರಡು ತರಹವಿದೆ. ಈಗ ಒತ್ತಾಯ ಇರುವುದು ಆರರಿಂದ ಏಳನೇ ವಯಸ್ಸಿನವರು, ಏಳರಿಂದ ಎಂಟನೇ

ವಯಸ್ಸಿನವರು, ಮತ್ತು ಎಂಟರಿಂದ ಒಂಬತ್ತನೇ ವಯಸ್ಸಿನವರು ಇಯತ್ತೆಗಳಿಗೆ ಹೋಗುವವರಲ್ಲಿ ತಾವು ಹೇಳುವ ವಿಚಾರ ಬೇರೆ ಯಾವುದನ್ನೋ ದೃಷ್ಟಿಯಲ್ಲಿಟ್ಟುಕೊಂಡು ಹೇಳುತ್ತಿದ್ದೀರಿ.

ಶ್ರೀ ಎಸ್. ಗೋಪಾಲಗೌಡ.—ತಾವು ಸರಿಯಾಗಿ ಇದನ್ನು ಮುಂದುವರಿಸುತ್ತಿಲ್ಲ ಎಂದು ಮಾತ್ರ ಹೇಳುತ್ತಿದ್ದೇನೆ. ಇದರಲ್ಲಿ ತಂದೆ ತಾಯಿಗಳಿಗೂ ಕಷ್ಟವಿದೆ. ನಾಲ್ಕು ವರ್ಷಗಳಾದ ಕೂಡಲೇ ಮಕ್ಕಳಿಗೆ ವಿದ್ಯಾಭ್ಯಾಸ ಕೊಡಿಸಬೇಕು ಎನ್ನುವ ವ್ಯವಸ್ಥೆ ನಮ್ಮಲ್ಲಿ ಇತ್ತು. ಕಡ್ಡಾಯ ಎನ್ನುವ ಮಾತಿನ ಅರ್ಥವೇನು ಎನ್ನುವುದು ಎಷ್ಟೋ ಜನರಿಗೆ ತಿಳಿದಿಲ್ಲ. ಅಲ್ಲದೆ ಆರು ತುಂಬಿದ ಮಕ್ಕಳನ್ನು ಸೇರಿಸಿ ಒಂದು ವರ್ಷವಾದಮೇಲೆ ಏಳನೇ ವರ್ಷದಲ್ಲಿ ಎಷ್ಟು ಮಕ್ಕಳು ಶಾಲೆ ಬಿಡುತ್ತಾರೆ ಎನ್ನುವುದರ ಬಗ್ಗೆ ತಕ್ಕ ಕಾರ್ಯಕ್ರಮವನ್ನು ಕೈಗೊಳ್ಳದೇ ಹೋದರೆ ಏನೂ ಪ್ರಯೋಜನವಾಗುವುದಿಲ್ಲ. ಇನ್ನು 'ಮಿಡ್ ಡೇ ಮೀಲ್ಸ್' ಎನ್ನುವುದನ್ನು ಜಾರಿಗೆ ತರಬೇಕು ಎಂದು ಇದಕ್ಕಾಗಿ ತಾಲ್ಲೂಕು ಅಭಿವೃದ್ಧಿ ಮಂಡಲಿಗಳವರು ಮತ್ತು ಶಾಲೆಯ ಉಪಾಧ್ಯಾಯರುಗಳೂ ಹೆಚ್ಚಿನ ಗಮನ ಕೊಡಬೇಕು ಎಂದ ಹೇಳುತ್ತಿದ್ದಾರೆ. ಇದರಲ್ಲಿ ಹೆಚ್ಚಿನ ಆಸಕ್ತಿಯನ್ನು ಶಾಲೆಯಲ್ಲಿರುವ ಉಪಾಧ್ಯಾಯರುಗಳೇ ವಹಿಸಬೇಕು ಹಾಗೂ ಗ್ರಾಮ ಸೇವಕರು ಇದಕ್ಕೆ ಸಹಾಯ ಮಾಡಬೇಕು. ಅಲ್ಲದೆ ಇದರಲ್ಲಿ ಇನ್ನೊಂದು ವಿಚಾರವನ್ನು ತಮಗೆ ಹೇಳಬೇಕಾಗಿದೆ, ಆದರೆ ನಿಜವಾಗಿಯೂ ಕೆಲವು ಕಡೆ ಕೊಡುವ ಪದಾರ್ಥಗಳು ತಿನ್ನಲು ಯೋಗ್ಯವಾಗಿರುವುದಿಲ್ಲ. ಅವು ಹೇಗಿರುತ್ತದೆ ಎಂದರೆ ಎಮ್ಮೆ ಕರ ಹಾಕಿದಾಗ ಮಡ್ಡಿಯಂತೆ ಕಲ್ಲು ಮಣ್ಣು ಎಲ್ಲವನ್ನೂ ಕಲೆಸಿ ಕೊಡುವಂತಿರುತ್ತದೆ. ಇಂತಹ ಪದಾರ್ಥಗಳನ್ನು ತಿನ್ನಬೇಕೆಂದು ಕೊಟ್ಟರೆ ಬಡವರ ಮಕ್ಕಳು ಹೇಗೋ ತಿನ್ನುತ್ತಾರೆ. ಆದರೆ ಶ್ರೀಮಂತರ ಮಕ್ಕಳು ಅದನ್ನು ಆಚೆಗೆ ಚೆಲ್ಲುತ್ತಾರೆ. ಬಡವರ ಮಕ್ಕಳು ಇದನ್ನು ತಿಂದು ಅಪೆಂಡಿಸೈಟಿಸ್ ಎನ್ನುವ ರೋಗಕ್ಕೆ ತುತ್ತಾಗುತ್ತಾರೆ. ಇದಕ್ಕಾಗಿ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತೇವೆಂದು ಮಾಡಿದರೂ ಅದನ್ನು ಆಸಕ್ತಿಯಿಂದ ಕಳಕಳಿಯಿಂದ ಮಾಡದೇ ಹೋದರೆ ಇದರಿಂದೇನೂ ಅನುಕೂಲವಾಗುವುದಿಲ್ಲ. ಹೀಗೆ ಈಗೊಂದು ಕೋಲಾಹಲ ನಡೆಯುತ್ತಿದೆ.

ಸ್ವಾಮಿ, ಈ "ಮಿಡ್ ಡೇ ಮೀಲ್" ಎಂದು ಏನು ಕೊಡುತ್ತಾರೆಯೋ ಅದು ಎಲ್ಲ ಶಾಲೆಗಳಲ್ಲಿ ದೊರೆಯುವುದಿಲ್ಲ. ಇದೊಂದು ಪ್ರಚಾರ ಸಾಧನವಾಗಿದೆಯೇ ಹೊರತು, ಇದನ್ನು ಅಂತಃಕರಣ ಪೂರ್ವಕವಾಗಿ ನಿಷ್ಠೆಯಿಂದ ಕಾರ್ಯಗತವಾಗುತ್ತಿಲ್ಲ. ಮಕ್ಕಳಿಗೆ ಇದಕ್ಕಾಗಿ ದೊರೆಯಬೇಕಾದ ಹಣ ಪ್ರಾಮಾಣಿಕವಾಗಿ ದೊರೆಯುತ್ತಿಲ್ಲ. ಈ ಯೋಜನೆ ಸಫಲವಾಗಬೇಕೆಂಬ ಕಳಕಳಿಯ ಉದ್ದೇಶವಿಲ್ಲ. ಒಟ್ಟಿನಲ್ಲಿ ಈ ಯೋಜನೆ ನಿರರ್ಥಕವಾಗಿದೆ ಎಂದು ಹೇಳಬಹುದು. ಇದನ್ನು ತೀವ್ರ ಸರಿಪಡಿಸಬೇಕು. 20 ಹುಡುಗರಿಗೆ, 50 ಮಕ್ಕಳಿಗೆ ಮಧ್ಯಾಹ್ನದ ಆಹಾರ ಕೊಡಲಾಯಿತು ಎಂದು ಲೆಕ್ಕದಲ್ಲಿ ಮಾತ್ರ ಸರಿಯಾಗಿರುತ್ತದೆ. ಲೆಕ್ಕ ತೋರಿಸುವುದರಲ್ಲಿ ಇವರು ಬಹಳ ಬುದ್ಧಿವಂತರಾಗಿದ್ದಾರೆ. ಲೆಕ್ಕದಲ್ಲಿ ಈ ಯೋಜನೆ ಸಫಲಮಾಡಿ ತೋರಿಸುವುದು ನಮಗೆ ಬೇಡ. ರುಚಿ ಯಾವಾಗಲೂ ತಿಂಡಿ ತಿನ್ನುವುದರಲ್ಲಿ ಇದೆ. ಮಕ್ಕಳು ಊಟ ಮಾಡಬೇಕು ಮೈ ಹಿಡಿಯಬೇಕು ಅವರು ಸಮಾಧಾನಪಡಬೇಕು. ಇದು ಆಗದಿದ್ದರೆ ಈ ಯೋಜನೆ ನಿಷ್ಫಲ ವಾಗುತ್ತದೆ.

10-00 A.M.

ಇನ್ನೊಂದು ವಿಷಯವನ್ನು ಈ ಸಂದರ್ಭದಲ್ಲಿ ನಾನು ಹೇಳಬೇಕಾಗಿದೆ. ಅಮೇರಿಕಾ ದೇಶದವರು ನಮಗೆ ಹಾಲಿನ ಪುಡಿ ಕಳುಸುತ್ತಿದ್ದಾರೆ. ಅದನ್ನು ಶಾಲಾ ಮಕ್ಕಳಿಗೆ ಒದಗಿಸಬೇಕೆಂಬುದು ಅವರ ಮುಖ್ಯ ಉದ್ದೇಶ. ಆದರೆ ಈ ಹಾಲಿನ ಪುಡಿ ಮಕ್ಕಳಿಗೆ ಕೊಡುವುದಕ್ಕೆ ಉಪಯೋಗಿಸದೆ, ಅದನ್ನು ಮಾರ್ಕೆಟ್ಟಿನಲ್ಲಿ ಮಾರಾಟ ಮಾಡಿಕೊಂಡು ದುಡ್ಡು ಸಂಪಾದನೆ ಮಾಡುವ ಉದ್ಯೋಗವಾಗಿದೆ. ಕೇಂದ್ರದಲ್ಲಿಯೂ ಎಂ. ಪಿ. ಇದ್ದಾರೆ. ನಮ್ಮಲ್ಲಿಯೂ ಎಂ. ಪಿ. ಇದ್ದಾರೆ. ನಮ್ಮಲ್ಲಿಯ ಎಂ. ಪಿ. ಎಂದರೆ ಮಿಲ್ಕ್ ಪೌಡರ್ ಬ್ಯಾರೆಲ್ ಗಟ್ಟಲೆ ಮಾರಾಟ ಮಾಡಿ ದಕ್ಕಿಸಿಕೊಂಡು ನೂರಾರು ರೂಪಾಯಿ ಸಂಪಾದನೆ ಮಾಡುವವರು ಆಗಿದ್ದಾರೆ. ಈ ಉದ್ಯೋಗದಿಂದ ಸಂಪಾದನೆ ಮಾಡುವ ಎಂ. ಪಿ. ಅಂದರೆ ಮಿಲ್ಕ್ ಪೌಡರ್ ಎಂ. ಪಿ. ಇವರು ಆಗಿದ್ದಾರೆ. ಇದು ಸರಿಯಲ್ಲ. ಈ ರೀತಿ ದುರುಪಯೋಗಪಡಿಸಿಕೊಳ್ಳುವದನ್ನು ಬೇಗನೆ ತಡೆಗಟ್ಟಬೇಕಾದುದು ಅಗತ್ಯವಾಗಿದೆ. ಈ ಸಂದರ್ಭದಲ್ಲಿ ನಾನು ಒಂದು ಸೂಚನೆ ಮಾಡುತ್ತೇನೆ. ಈ ಹಾಲಿನ ಪುಡಿಯನ್ನು ಒದಗಿಸಿ ಬ್ಯಾರಲ್ ಒಡೆದು ಹಾಲಿನ ಪುಡಿ ಕೊಡುವ ಸಮಾರಂಭ ಮಾಡಬೇಕು.

ಶ್ರೀ ಎಸ್. ಶಿವಪ್ಪ.—ಸ್ವಾಮಿ, ನಾವು ಹೇಳುವುದೆಲ್ಲ ಅರಣ್ಯ ರೋದನವಾಗಿದೆ.

ಶ್ರೀ ಬಿ. ರಾಚಯ್ಯ (ಅರಣ್ಯ ಮತ್ತು ಮೀನುಗಾರಿಕೆ ಶಾಖೆಗಳ ಮಂತ್ರಿಗಳು).—ಸ್ವಾಮಿ, ಅರಣ್ಯದಲ್ಲಿ ರೋದನ ಮಾಡಿದರೂ ಸಹ ಅದನ್ನು ಕೇಳತಕ್ಕ ಜನ ಇಂದು ಇದ್ದಾರೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).—ಸ್ವಾಮಿ, ಸಭೆಯಲ್ಲಿ ಚರ್ಚೆ ನಡೆದ ಕಾಲದಲ್ಲಿ ಮಂತ್ರಿಗಳು ಫೈಲು ಓದಬಹುದೇನು ?

ಶ್ರೀ ಬಿ. ರಾಚಯ್ಯ.—ಈ ಚರ್ಚೆಗೆ ಸಂಬಂಧಪಟ್ಟ ವಿಷಯದ ಫೈಲು ಇದಾಗಿದೆ.

ಸಭಾಪತಿಯವರು.—ಅಂತಹುದು ಏನೂ ಇಲ್ಲ. ಅದು ಸರಿಯಾಗಿದೆ.

ಶ್ರೀ ಎಸ್. ಗೋಪಾಲಗೌಡ.—ಹಾಲಿನ ಪುಡಿಯ ಹಂಚಿಕೆ ಸರಿಯಾಗಿ ಆಗಬೇಕು. ಏಕೆಂದರೆ ಹಾಲಿನ ಪುಡಿಯನ್ನು ಕೊಡತಕ್ಕ ದೇಶದವರು ಇತ್ತೀಚೆಗೆ ವಿವಂಚನೆ ವ್ಯಕ್ತಪಡಿಸಿದ್ದಾರೆ. ಇದು ಒಳ್ಳೇ ಪರಿಣಾಮ ಉಂಟು ಮಾಡುವುದಿಲ್ಲ. ಆದುದರಿಂದ ಇದಕ್ಕೆ ಆಸ್ಪದ ಕೊಡಕೂಡದು. ಉದಾರವಾಗಿ ಕೊಟ್ಟಿರತಕ್ಕಂಥ ಹಾಲಿನ ಪುಡಿಯನ್ನು ಮಾರಾಟ ಮಾಡಿಕೊಂಡು ಹಣ ಸಂಪಾದಿಸುವ ಅಧೋಗತಿಯ ಮಟ್ಟಕ್ಕೆ ಇಳಿದಿರುವುದು ಭೂಷಣವಲ್ಲ. ಏಕೆಂದರೆ ಇದನ್ನು ಒಳ್ಳೆಯ ಮಾತಿನಲ್ಲಿ ಹೇಳಬೇಕಾಗಿದೆ. ಇತ್ತೀಚೆಗೆ ಕೇರಳದಿಂದ ಹಾಲಿನ ಪುಡಿ ತಂದು ಇಲ್ಲಿ ಮಾರಾಟ ಮಾಡುತ್ತಿದ್ದುದನ್ನು ಪೋಲೀಸರು ಹಿಡಿದಿದ್ದಾರೆ. ಮದ್ರಾಸಿನಿಂದ ತರುವ ಹಾಲಿನ ಪುಡಿಯನ್ನು ಆಂಧ್ರದಲ್ಲಿ, ಆಂಧ್ರದ್ದು ಕೇರಳದಲ್ಲಿ ಕೇರಳದ್ದು ಮೈಸೂರಿನಲ್ಲಿ ಈ ರೀತಿ ಮಾರಾಟವಾಗುತ್ತಿದೆ. ಇದೊಂದು ವ್ಯವಸ್ಥೆ ಮಾಡಿಕೊಂಡಂತಿದೆ. ಈ ರೀತಿ ಮಾರಾಟ ಮಾಡುವವರಿಗೆ ಬ್ಯಾರೆಲ್‌ಗಟ್ಟಲೆ ಹಾಲಿನ ಪುಡಿ ದೊರೆಯುತ್ತದೆ. ಒಳ್ಳೇ ಸದುದ್ದೇಶದಿಂದ ಕೊಟ್ಟಿರತಕ್ಕ ಹಾಲಿನ ಪುಡಿಯನ್ನು ಹೀಗೆ ದುರುಪಯೋಗ ಪಡಿಸಿಕೊಳ್ಳುವುದು ಸರಿಯಲ್ಲ. ಲೆಕ್ಕಪತ್ರದಲ್ಲಿ ಎಲ್ಲವೂ ಸರಿಯಾಗಿರುತ್ತದೆ. ಆದರೆ ವಾಸ್ತವಾಂಶ ಬೇರೆ ರೀತಿಯಾಗಿದೆ. ಇದನ್ನು ಮಾನ್ಯ ವಿದ್ಯಾ ಸಚಿವರು ಕಣ್ಣುಬಿಟ್ಟು ನೋಡಿ ಕೂಡಲೆ ಸರಿಪಡಿಸಬೇಕು. ಒಂದೊಂದು ಊರಿಗೆ, ಒಂದೊಂದು ಸಂಸ್ಥೆಗೆ ಎಷ್ಟೆಷ್ಟು ಹಾಲಿನ ಪುಡಿ ಕೊಡುತ್ತೀರಿ, ಅದನ್ನು ಪ್ರಕಟ ಮಾಡಬೇಕು. ನಮ್ಮ ರಾಜ್ಯಕ್ಕೆ ಎಷ್ಟು ದೊರೆತಿದೆ ಎಷ್ಟು ಹಂಚಲಾಯಿತು ಎನ್ನುವುದಕ್ಕೆ ಅಂಕಿಅಂಶಗಳ ವಿವರ ಕೊಟ್ಟು ಪ್ರಕಟಿಸಬೇಕು ಯಾವ ಯಾವ ಗ್ರಾಮಕ್ಕೆ ಯಾವ ಯಾವ ಏಜೆನ್ಸೀ ಮೂಲಕ ಎಷ್ಟೆಷ್ಟು ಕೊಟ್ಟಿದೆ ಅದನ್ನು ಸಹ ಆಗಾಗ್ಗೆ ತಿಳಿಸಬೇಕು. ಅಂದರೆ ಯಾವ ಶಾಲೆಗೆ ಎಷ್ಟು ಹಾಲಿನಪುಡಿ ಒದಗಿಸಲಾಗಿದೆ ಎನ್ನುವುದು ಗೊತ್ತಾಗುತ್ತದೆ. ಹಾಲಿನಪುಡಿ, ಮಧ್ಯಾಹ್ನದ ಊಟ, ಬಟ್ಟೆ ಇವುಗಳನ್ನು ಹಂಚುವಾಗ್ಗೆ ಗ್ರಾಮ ಪಂಚಾಯಿತಿಯ ಸದಸ್ಯರು, ಉಪಾಧ್ಯಾಯರು ಹಾಜರ ಇರಬೇಕು. ಸಾರ್ವಜನಿಕರಿಗೆ ಈ ವಿಷಯದಲ್ಲಿ ಕೆಲವು ಸೌಲಭ್ಯ ಕೊಡಬೇಕು. ಈಗ ಕೊಟ್ಟಿರತಕ್ಕ ಸೌಲಭ್ಯ ಸಾಲದು ಎಂದು ಹೇಳುತ್ತೇನೆ.

ಆಡಳಿತದ ವಿಷಯದಲ್ಲಿ ಒಂದು ಮಾತನ್ನು ಹೇಳಬೇಕೆಂದಿದ್ದೇನೆ. ಈಚೆಗೆ ಬಹುಶಃ ಶ್ರೀಮಾಲಿಯವರು ನಿವೃತ್ತರಾಗುವುದಕ್ಕೆ ಮುಂಚೆ ಒಂದು ಮಾತನ್ನ ಹೇಳಿದರು. ಅದೇನೆಂದರೆ ಭಾರತದ ಪ್ರಾಥಮಿಕ ಶಾಲೆಯ ಉಪಾಧ್ಯಾಯರು 100 ರೂಪಾಯಿಗಳ ಸಂಬಳವನ್ನು ಪಡೆಯುವ ಮಟ್ಟಕ್ಕೆ ಬಂದುಮುಟ್ಟಿದ್ದಾರೆಂದು. ಎಲ್ಲಾ ಶಾಲೆಯ ಉಪಾಧ್ಯಾಯರೂ ಕೂಡ ತರಪೇತಿಯನ್ನು ಪಡೆದಿದ್ದಾರೆ. ತರಪೇತಿಯನ್ನು ಕೊಡುವ ವಿಷಯದಲ್ಲಿ ಒಬ್ಬೊಬ್ಬರು ಒಂದೊಂದು ವರ್ಷದಲ್ಲಿ ಒಂದೊಂದು ಯೋಜನೆಯನ್ನು ತರುತ್ತಾರೆ. ಆದರೆ ತರಪೇತಿ ಆದಮೇಲೆ ಅವರಿಗೆ ತರಪೇತಿಯ ಸೌಲಭ್ಯವನ್ನು ಒದಗಿಸುವುದಿಲ್ಲ. ಈಗ ಒಬ್ಬರು ಹಿಂದಿ ಪರೀಕ್ಷೆಯನ್ನು ಪಾಸುಮಾಡಿ ಎಂದು ಹೇಳುತ್ತಾರೆ, ಇನ್ನೊಬ್ಬರು ಫಿಜಿಕಲ್ ಟ್ರೈನಿಂಗ್ ಮಾಡಿ ಎಂದು ಹೇಳುತ್ತಾರೆ, ಇನ್ನೊಬ್ಬರು ಬೇಸಿಕ್ ಟ್ರೈನಿಂಗ್ ಮಾಡಿ ಎಂದು ಹೇಳುತ್ತಾರೆ, ಇನ್ನೊಬ್ಬರು ಮತ್ತೊಂದು ಟ್ರೈನಿಂಗ್‌ಮಾಡಿ ಎಂದು ಹೇಳುತ್ತಾರೆ. ಈಗ ಬಂಕಾಪುರದಲ್ಲಿ ಟ್ರೈನಿಂಗ್ ನಡೆಯುತ್ತಿದೆಯೆಂದು ಅಲ್ಲಿ ಅಧಿಕಾರಿಗಳು ಸೇರುವುದು ಟಿ. ಎ. ತೆಗೆದುಕೊಳ್ಳುವುದು ತಮಗೆ ಬೇಕಾದವರನ್ನು ಆರಿಸಿ ಅಲ್ಲಿಗೆ ಕಳುಹಿಸುವುದು. ತರಪೇತಿ ಕೇಂದ್ರಗಳನ್ನು ತೆರೆಯಲಾಯಿತು. ಪ್ರಚಾರ ನಡೆಸುವುದು. ಈಗ ವಾಸ್ತವವಾಗಿ ತರಪೇತಿಯನ್ನು ಪಡೆದಿರತಕ್ಕ ಶಿಕ್ಷಕರಿಗೆ ಏನು ಸೌಲಭ್ಯವನ್ನು ಕಲ್ಪಿಸಿಕೊಟ್ಟಿದ್ದೀರಿ ? ಈಗ ಮಲ್ಟಿ ಪರ್ಪಸ್ ಸ್ಕೂಲುಗಳನ್ನು ಕೊಟ್ಟಿರಿ, ಅಲ್ಲಿಗೆ ಕೊಟ್ಟಿರತಕ್ಕ ಸಾಮಾನುಗಳೆಲ್ಲವೂ ತುಕ್ಕು ಹಿಡಿದುನಿಂತಿವೆ. ತರಪೇತಿ ಕೇಂದ್ರಗಳನ್ನು ಒಂದು ವೇಳೆ ಮಾಡಿಕೊಂಡರೂ ಮಾಡಿಕೊಳ್ಳಿ. ಆದರೆ ತರಪೇತಿಯನ್ನು ಪಡೆದ ಶಿಕ್ಷಕರಿಗೆ ಒಂದು ಇನ್‌ಸೆಂಟೀವ್ ಕೊಡಬೇಕು. ಈಗ ಒಬ್ಬ ಶಿಕ್ಷಕರು ಹಿಂದಿಯನ್ನು ಪಾಸು ಮಾಡಿಕೊಂಡು ಬಂದರು ಅಥವಾ ಯಾವುದೋ ಒಂದು ತರಪೇತಿಯನ್ನು ಪಡೆದುಕೊಂಡು ಬಂದರು, ಅಂಥವರಿಗೆ 10 ರೂಪಾಯಿ ಸಂಬಳ ಜಾಸ್ತಿ ಸಿಕ್ಕುವಂತೆ ಮಾಡಬೇಕು. ಈಗ ಹಿಂದಿಯನ್ನು ಮುತವರ್ಜಿಯಿಂದ ಓದಿ ಎಂದು ಹೇಳುತ್ತಾರೆ. ಈಗ ಎಂ.ಎ. ತನಕ ಹಿಂದಿಯನ್ನು ಓದಿ ಪರೀಕ್ಷೆಯನ್ನು ಪಾಸುಮಾಡಿ ಅವನು ಪ್ರೈಮರಿ ಶಾಲೆಯಲ್ಲಿ ಶಿಕ್ಷಕನಾಗಿರಬೇಕೆಂದರೆ ಅದು ಯಾವ ನ್ಯಾಯ ? ತರಪೇತಿಯನ್ನು ಪಡೆದವನಿಗೆ ಒಂದು ಇನ್‌ಸೆಂಟೀವ್ ಕೊಡದೇ ಹೋದರೆ ತರಪೇತಿಗೆ ಏತಕ್ಕೆ ಕಳುಹಿಸಬೇಕು ? ಇದೂ ಅಲ್ಲದೆ ಕೆಲವು ದುಷ್ಟ ಅಧಿಕಾರಿಗಳು ಈಗಲೂ ಕೂಡ ಉಪಾಧ್ಯಾಯರನ್ನು ಚೆಂಡನ್ನು ಎಸೆಯುವ ಹಾಗೆ ಸ್ಥಳದಿಂದ ಸ್ಥಳಕ್ಕೆ ಊರಿಂದ ಊರಿಗೆ ವರ್ಗಾವರ್ಗಿ ಮಾಡುತ್ತಾರೆ. ಅವರು ಅದನ್ನು ವಜಾ ಮಾಡಿಸಿಕೊಳ್ಳುವುದಕ್ಕೆ ಒಬ್ಬರು ಎಂ. ಎಲ್. ಎ.ಅನ್ನೋ ಅಥವಾ ಇನ್ನು ಯಾರ

ನ್ನಾದರೂ ಹುಡಿಕಿಕೊಂಡು ಹೋಗಬೇಕು. ಹೀಗಾಗಿ ಎಷ್ಟೋ ಶಾಲೆಗಳಲ್ಲಿ ಉಪಾಧ್ಯಾಯರು ಆರು ತಿಂಗಳು ವರ್ಷಗಟ್ಟಲೆ ಇರುವುದಿಲ್ಲ. ಎಷ್ಟೋ ಶಾಲೆಗಳಲ್ಲಿ ಈಗ ನಾಲ್ಕುಜನ ಉಪಾಧ್ಯಾಯರು ಇರುವ ಶಾಲೆಗಳಲ್ಲಿ ಒಬ್ಬರೇ ಇದ್ದಾರೆ. ಅವರೇ ಎಲ್ಲಾ ತರಗತಿಗಳಿಗೂ ಪಾಠವನ್ನು ಹೇಳುತ್ತಾರೆ. ಒಬ್ಬ ಉಪಾಧ್ಯಾಯರು ಎಷ್ಟು ಅವಧಿ ಪಾಠವನ್ನು ಹೇಳಹೇಕೆಂಬುದನ್ನು ಗೊತ್ತು ಮಾಡಬೇಕು. ಇದನ್ನೆಲ್ಲಾ ಸರ್ಕಾರದವರು ಗಮನಿಸಬೇಕು.

ಆಮೇಲೆ ಈ ಒಬ್ಬ ಉಪಾಧ್ಯಾಯರು ಯಾವುದಾದರೂ ಒಂದು ಊರಿಗೆ ವರ್ಗ ಆಗಿಹೋದರೆ ಅವರು ಯಾರ ಮನೆಯಲ್ಲಿರಬೇಕು ? ಕೊನೆಗೆ ಎಲ್ಲೂ ಮನೆ ಸಿಕ್ಕದಿದ್ದರೆ ಪಟೇಲರು ಶ್ಯಾನುಭೋಗರ ಮನೆಯಲ್ಲಿ ಹೋಗಿ ಸೇರಿಕೊಳ್ಳುತ್ತಾನೆ. ಆ ಊರಿನಲ್ಲಿ ರಾಜಕಾರಣಕ್ಕೆ ಬಲಿಯಾಗಿ ಒಂದು ಗುಂಪಿಗೂ ಇನ್ನೊಂದು ಗುಂಪಿಗೂ ವಿರೋಧಿಸುತ್ತಾನೆ. ಮೂಗರ್ಜಿಯನ್ನು ಬರೆಯುತ್ತಾನೆ. ತನಗೆ ಬೇಕಾದ ಕೆಲವು ಮಕ್ಕಳಿಗೆ ಪಾಠ ಹೇಳುವುದಕ್ಕೆ ಶುರು ಮಾಡುತ್ತಾನೆ. ಹೀಗಾಗಿ ಕೆಲವರು ಉಪಾಧ್ಯಾಯರು ರಾಜಕಾರಣಕ್ಕೆ ಬಂದು ಶಾಲೆಗಳು ರಾಜಕಾರಣಕ್ಕೆ ಈಡು ಆಗಿರತಕ್ಕ ದುಷ್ಟ ಸನ್ನಿವೇಶಗಳಿವೆ. ಕಾರಣವೇನೆಂದರೆ ಅವರು ಯಾವುದಾದರೂ ಒಂದು ಹಳ್ಳಿಗೆ ಹೋದರೆ ಅವರಿಗೆ ಸರಿಯಾದ ವ್ಯವಸ್ಥೆ ಇರುವುದಿಲ್ಲ. ವಾಸಕ್ಕೆ ಮನೆ ಇರುವುದಿಲ್ಲ. ಈಗ ಕೆಲವು ಹೆಣ್ಣುಮಕ್ಕಳು ಉಪಾಧ್ಯಾಯಿನಿಯರಾಗಿರುತ್ತಾರೆ. ಅವರಿಗಂತೂ ಅದು ಒಂದು ದುರಂತ. ಅವರೇನಾದರೂ ಒಂದು ಊರಿಗೆ ವರ್ಗಆಗಿ ಹೋದರೆ ಅವರು ಅಲ್ಲಿ ಸಾರ್ವಜನಿಕರ ಆಶ್ರಯದಲ್ಲಿ, ಅವರ ಕನಿಕರ, ಅವರ ದಯೆಯಲ್ಲಿ ಅವರು ಬದುಕಿ ಬಾಳಬೇಕಾಗುತ್ತದೆ. ಹೀಗಿರುವಾಗ ಒಬ್ಬ ಉಪಾಧ್ಯಾಯರನ್ನು ಒಂದು ಕಡೆಗೆ ಪೋಸ್ಟ್ ಮಾಡಿದರೆ ಅವರು ಯಾರ ಮನೆಯ ಜಗುಲಿಯ ಮೇಲೆ ಇರಬೇಕು ? ಅವರಿಗೆ ಹೆಂಡತಿ ಮಕ್ಕಳಿದ್ದರೆ ಅವರ ಕಷ್ಟನಿಷ್ಠೂರಗಳನ್ನು ಕೇಳುವವರು ಯಾರು ? ಅವರಿಗೆ ಅಲ್ಲಿ ಸರಿಬೀಳದೆ ಮತ್ತೆ ತನಗೆ ಬೇಕಾದ ಸ್ಥಳಕ್ಕೆ ವರ್ಗಮಾಡಿಸಿಕೊಳ್ಳಬೇಕಾದರೆ ಎಂ. ಎಲ್. ಎ. ಮೂಲಕವೋ ಡಿ. ಪಿ. ಐ. ಮೂಲಕವೋ ಹೋಗಬೇಕು. ಕೆಲವು ಸಂದರ್ಭಗಳಲ್ಲಿ ಕೆಲವು ಉಪಾಧ್ಯಾಯರುಗಳಿಗೆ ಕೆಲವು ಊರುಗಳಲ್ಲಿ ಅನುಕೂಲ ಇರುತ್ತದೆ. ಆದರೆ ಆ ಊರಿನಲ್ಲಿ ಜನಗಳು ಆಗುವುದಿಲ್ಲ. ಅಂಥಾ ಸಂದರ್ಭಗಳಲ್ಲಿ ಜನಗಳು ಉಪಾಧ್ಯಾಯರನ್ನು ಹಿಡಿದು ತದಿಕಿದ್ದಾರೆ ಅಂಥಾ ಸನ್ನಿವೇಶಗಳೂ ಇವೆ. ಈ ರೀತಿ ಆಗಬೇಕಾದರೆ ಹಳ್ಳಿಗಳಲ್ಲಿನ ವಾತಾವರಣವೂ ಬಹುಮುಖ್ಯ ಕಾರಣವಾಗಿದೆ. ಅದಕ್ಕೋಸ್ಕರ ಸರ್ಕಾರದವರು ಇದನ್ನು ಗಮನಿಸಬೇಕು. ಯಾವ ಉಪಾಧ್ಯಾಯರು ಎಷ್ಟು ದಿವಸ ರಜಾಹೋಗಿದ್ದರು, ಅವರ ಚಟುವಟಿಕೆಗಳೇನು, ಶಾಲೆಗೆ ಸರಿಯಾಗಿ ಹೋಗುತ್ತಿದ್ದಾರೆಯೇ ಇಲ್ಲವೇ, ಅವರು ಎಲ್ಲಿ ವಾಸಮಾಡುತ್ತಿದ್ದಾರೆ, ಅವರು ಯಾವ ತರಹ ಮನುಷ್ಯರು ಇತ್ಯಾದಿ ವಿಷಯಗಳನ್ನೊಳಗೊಂಡ ಒಂದು ರಿಪೋರ್ಟ್ ಅವರು ಕೆಲಸ ಮಾಡತಕ್ಕ ಸ್ಥಳದಲ್ಲಿರಬೇಕು. ಆರೀತಿ ಸರ್ಕಾರದವರು ವ್ಯವಸ್ಥೆ ಮಾಡಬೇಕು. ಯಾವತ್ತೋ ಅವನನ್ನು ಕೆಲಸಕ್ಕೆ ತೆಗೆದುಕೊಳ್ಳುವ ದಿವಸ ಇಂಟರ್‌ವ್ಯೂ ಮಾಡಿ ಅವನನ್ನು ಕೆಲಸಕ್ಕೆ ನೇಮಕ ಮಾಡಿಕೊಂಡು ಬಿಟ್ಟರೆ ಮುಗಿದು ಹೋಯಿತು ಎಂದಲ್ಲ. ಇವೊತ್ತು ಅವನು ಏನಾಗಿರಬಹುದು ಎಂಬುದನ್ನು ನೋಡಬೇಕಾಗುತ್ತದೆ. ಅವನು ಕೆಲಸಕ್ಕೆ ಸೇರಿದ 5-6 ವರ್ಷಗಳಲ್ಲಿ ಕೆಟ್ಟಚಾಳಿಗೆ ಬಿದ್ದು ಈಗ ಅವನು ಲಫಂಗ ಆಗಿರಬಹುದು ಅವನು ಸರಿಯಾಗಿ ಶಾಲೆಗೆ ಹೋಗದೆ ಇರಬಹುದು. ಅಂಥವನನ್ನು ಕೆಲವು ಸಂದರ್ಭಗಳಲ್ಲಿ ನಿಷ್ಠೂರವಾಗಿ ಉಪಾಧ್ಯಾಯ ವೃತ್ತಿಯನ್ನು ಮಾಡುವುದಕ್ಕೆ ನಿನಗೆ ಯೋಗ್ಯತೆಯಿಲ್ಲ, ನೀನು ಕಟುಕರ ಅಂಗಡಿಯಲ್ಲಿ ಮಾಂಸವನ್ನು ಕೊಯ್ಯುವುದಕ್ಕೆ ಲಾಯಕ್ಕಾಗಿದ್ದೀಯೆ, ನೀನು ನಮಗೆ ಬೇಡ ಎಂದು ಹೇಳಿ ಅವನನ್ನು ಮನೆಗೆ ಕಳುಹಿಸಬೇಕಾಗುತ್ತದೆ. ಇದನ್ನೆಲ್ಲಾ ನೋಡುವವರು ಯಾರು ಎಂಬುದನ್ನು ಸರ್ಕಾರದವರೇ ಗೊತ್ತುಮಾಡಬೇಕು.

ಇನ್ನೊಂದು ವಿಷಯ. ಈಗ ಸಾಮಾನ್ಯವಾಗಿ ಡಿ. ಪಿ. ಐ. ಆಫೀಸಿನಲ್ಲಿ ನೋಡಿ ಜಿಲ್ಲಾ ಮಟ್ಟದಲ್ಲಿರತಕ್ಕ ವಿದ್ಯಾಧಿಕಾರಿಗಳ ಆಫೀಸಿನಲ್ಲಿ ನೋಡಿ, ತಾಲ್ಲೂಕು ಮಟ್ಟದಲ್ಲಿರತಕ್ಕ ವಿದ್ಯಾಧಿಕಾರಿಗಳ ಆಫೀಸಿನಲ್ಲಿ ನೋಡಿ ಅಲ್ಲಿರತಕ್ಕ ಗುಮಾಸ್ತರುಗಳು ಉಪಾಧ್ಯಾಯರ ಹತ್ತಿರ ಮಾಮೂಲು ತೆಗೆದುಕೊಳ್ಳುತ್ತಾರೆ. ಯಾವುದಾದರೂ ಒಂದು ಊರಿಗೆ ಟ್ರಾನ್ಸ್‌ಫರ್ ಮಾಡಬೇಕಾದರೆ ಇಷ್ಟು, ಕಂಟಿಜೆನ್ಸಿ ಡ್ರಾ ಮಾಡಬೇಕಾದರೆ ಇಷ್ಟು ಎಂದು ಮಾಮೂಲು ವಸೂಲು ಮಾಡುತ್ತಾರೆ. ಈ ರೀತಿ ವಿದ್ಯಾಭ್ಯಾಸದ ಆಡಳಿತ ಇರುವುದು ಅವಮಾನಕರ. ವಿದ್ಯಾಭ್ಯಾಸದ ಸಂಸ್ಥೆಯಾದರೂ ಕೂಡ ದೇಶದ ನಿತ್ಯ ರಾಜಕಾರಣದಿಂದ ಹೊರಗೆ ಇದ್ದು ಲಂಚ, ಸ್ವಜನ ಪಕ್ಷಪಾತ ಮುಂತಾದ ದುಷ್ಟ ಪ್ರವೃತ್ತಿಗಳನ್ನು ದೂರಮಾಡುವುದಾದರೆ ಆಗ ಅದು ಒಂದು ವಿದ್ಯಾಭ್ಯಾಸ ಸಂಸ್ಥೆ ಎಂದು ಹೇಳಬಹುದು. ಒಂದು ಒಳ್ಳೆಯ ಆಡಳಿತ ಎಂದು ಹೇಳಬಹುದು. ವಿದ್ಯಾಭ್ಯಾಸದ ಇಲಾಖೆಯಲ್ಲಿ ಲಂಚ, ರಾಜಕೀಯ ಶಾಲಾ ಮಕ್ಕಳಿಗೆ ಕೊಟ್ಟಂಥ ಹಾಲಿನ ಪುಡಿಯನ್ನು ಮಾರಾಟ ಮಾಡುವ ದುಷ್ಟ ಪ್ರವೃತ್ತಿ ಇವುಗಳು ಇರುವುದಾದರೆ ದೇಶಕ್ಕೆ ಒಳ್ಳೆಯದು ಮಾಡುವುದಕ್ಕೆ ಸಾಧ್ಯವಿಲ್ಲ. ಇದನ್ನು ಮಾನ್ಯ ಸಚಿವರು ಗಮನಿಸಬೇಕು.

(ಶ್ರೀ ಎಸ್. ಗೋಪಾಲಗೌಡ)

ಇನ್ನು ಪಠ್ಯಪುಸ್ತಕಗಳ ವಿಷಯದಲ್ಲಿ ಒಂದು ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಅದು ಆಡಳಿತಕ್ಕೆ ಸಂಬಂಧಪಟ್ಟದ್ದು. ಪಠ್ಯಪುಸ್ತಕಗಳ ವಿಷಯದಲ್ಲಿ ಬಹುಶಃ ದೇಶದ ಎಲ್ಲಾ ಜವಾಬ್ದಾರಿ ಜನರೂ ಕೆಲವು ವೇಳೆ ವಿವೇಚನೆಗೆ ತುತ್ತಾಗಿದ್ದಾರೆಂದು ಅನಿಸುತ್ತದೆ. ಈ ಪಠ್ಯಪುಸ್ತಕಗಳ ವಿಷಯದಲ್ಲಿ ವ್ಯಾಪಾರ ಸಂಸ್ಥೆಗಳು ಇವೆ, ಪ್ರಕಟಣೆ ಸಂಸ್ಥೆಗಳು ಇವೆ. ಆ ಪುಸ್ತಕಗಳಿಗೆ ಹೆಸರು ಇಡುವವರು ಬೇರೆ ಇದ್ದಾರೆ, ಅವುಗಳಿಗೆ ಬೆಲೆಯನ್ನು ಗೊತ್ತುಮಾಡುವವರು ಇದ್ದಾರೆ. ನಮ್ಮ ಕಾಲದಲ್ಲಿ ಇವುಗಳೆಲ್ಲಾ ಇರಲಿಲ್ಲ. ಯಾರ ಮನೆಯಲ್ಲೋ ಓದುವ ಪುಸ್ತಕಗಳನ್ನು ತಂದು ನಾವು ಓದಿಕೊಳ್ಳುತ್ತಿದ್ದೆವು. ಒಂದು ಊರಿನಲ್ಲಿ ಒಬ್ಬ ವಿದ್ಯಾವಂತ ಇದ್ದರೆ ಬಹಳ ಮಕ್ಕಳಿಗೆ ಪುಸ್ತಕಗಳು ದೊರೆಯುತ್ತಿದ್ದುವು. ಹಾಗೆ ಇರುವುದು ಒಳ್ಳೆಯದು. ಶ್ರೀಮಾನ್ ಕಂಠಿಯವರ ಕಾಲದಲ್ಲಿ ಪ್ರತಿವರ್ಷ ಪ್ರತಿಯೊಂದು ಶಾಲೆಯ ಪುಸ್ತಕಗಳೂ ಬದಲಾವಣೆಯಾಗುವುದಾದರೆ ಅದು ಒಂದು ದುರಂತ ಎಂದು ಹೇಳಬೇಕಾಗುತ್ತದೆ.

ಶ್ರೀ ಎಸ್. ಆರ್. ಕಂಠಿ.—ತಾವು ಸ್ವಲ್ಪ ಯೋಚನೆ ಮಾಡಿ. ತಾವು ಹಾಗೆ ಹೇಳಿದರೆ ಆಗುವುದಿಲ್ಲ. ಯಾವ ಪುಸ್ತಕವನ್ನು ಪಠ್ಯಪುಸ್ತಕವಾಗಿ ಮಾಡುತ್ತೇವೆಯೋ ಅದನ್ನು 3 ವರ್ಷ ಬದಲಾವಣೆ ಮಾಡುವುದಿಲ್ಲ. ಕೆಲವು ವೇಳೆ ಮೂರು ವರ್ಷ ಆದ ನಂತರವೂ ಅದನ್ನು ಕಂಟಿನ್ಯೂ ಮಾಡುತ್ತೇವೆ. ಅದನ್ನು ನಾಲ್ಕು ವರ್ಷ ಕಂಟಿನ್ಯೂ ಮಾಡಬೇಕಾದರೆ ಅದನ್ನು ಯೋಚನೆ ಮಾಡಿ ಅದು ಯೋಗ್ಯವಾಗಿದ್ದರೆ ಅದನ್ನು ಕಂಟಿನ್ಯೂ ಮಾಡುತ್ತೇವೆ. ಆ ಪುಸ್ತಕ ಅನ್‌ಫಿಟ್ ಎಂದು ಹೇಳುವವರೆಗೂ ಅದನ್ನು ಕಂಟಿನ್ಯೂ ಮಾಡುತ್ತೇವೆ.

ಶ್ರೀ ಎಸ್. ಗೋಪಾಲಗೌಡ.—ಅವರು ಹೇಳಿದ್ದಕ್ಕೆ ನಾನು ಆಭಾರಿಯಾಗಿದ್ದೇನೆ. ಆದರೆ ಈ ದಿವಸ ವಾಸ್ತವವಾಗಿ ಪಠ್ಯಪುಸ್ತಕಗಳ ವ್ಯವಸ್ಥೆ ಸರಿಯಾಗಿರುವುದಿಲ್ಲ. ಈ ಕೆಲಸದಲ್ಲಿ ಪ್ರಾಮಾಣಿಕತೆಯಿಲ್ಲ. ಇದಕ್ಕೆ ಸಂಬಂಧಪಟ್ಟ ಸಮಿತಿಯು ಕಣ್ಣುಬಿಟ್ಟುನೋಡಿ ಲೋಪದೋಷಗಳನ್ನು ಸರಿಪರಿಪಡಿಸುತ್ತಿಲ್ಲ. ಕೊನೆಯಪಕ್ಷ ಅಲ್ಪಪ್ರಾಣ, ಮಹಾಪ್ರಾಣ, ಇಳಿ, ದೀರ್ಘ ಮುಂತಾದುವುಗಳಲ್ಲಿರುವ ಲೋಪಗಳನ್ನಾದರೂ ಸರಿಪಡಿಸದಿದ್ದರೆ ಈ ಸಮಿತಿ ಏಕಿರಬೇಕು? ಹೋದಸಲ ಒಂದು ಪುಸ್ತಕದ ದೋಷಗಳ ವಿಚಾರ ಶ್ರೀಮಾನ್ ಮುಕ್ಕಣ್ಣಪ್ಪನವರು ತಿಳಿಸಿದರು. ನಾನು ಅದನ್ನು ಬರೆದು ತಿಳಿಸಿದೆ. ಆ ಬಗ್ಗೆ ತೀರ್ಮಾನವೇನಾಯಿತೋ ತಿಳಿಯದು ಅದನ್ನೇನು ರದ್ದುಮಾಡಿದರೇ ?...

ಶ್ರೀ ಎಸ್. ಆರ್. ಕಂಠಿ.—ಅದು ತಿದ್ದುಪಡಿಯಾಗಿದೆ.

ಶ್ರೀ ಎಸ್. ಗೋಪಾಲಗೌಡ.—ಇಂಥ ಅನೇಕ ಉದಾರಹರಣೆಗಳಿವೆ. ನಾನು ಕನ್ನಡಪಂಡಿತನಲ್ಲ ಆದರೆ ಯಾವಕಡೆ ಹೇಗೆ ಬರೆಯಬೇಕು, ಎಲ್ಲಿ ಇಳಿಕೊಡಬೇಕು ಎಂಬುದು ಸ್ವಲ್ಪ ಗೊತ್ತಾಗುತ್ತದೆ. ಒಂದುಕಡೆ ಪುಸ್ತಕದಲ್ಲಿ ರಾಷ್ಟ್ರದ ಬಾವುಟಹಾಕಿ ಚರಕ ಹಾಕಿದ್ದಾರೆ ಎಂಬುದಾಗಿ ಶ್ರೀ ಮುಕ್ಕಣ್ಣಪ್ಪನವರು ಹೇಳಿದರು. ರಾಷ್ಟ್ರದ ಬಾವುಟದಲ್ಲಿ ಚಕ್ರವಿರಬೇಕೆ ಅಥವಾ ಚರಕವಿರಬೇಕೆ ಎಂಬುದು ಕೂಡ ಗೊತ್ತಿಲ್ಲದೆ ಚಿತ್ರಿಸಿದ್ದಾರೆ. ಹೋಟೆಲ್ ಮಾಲೀಕ ಚಕ್ರವನ್ನು ಚರಕ ಎಂದು ತೋರಿಸಬಹುದು, ಅವನಿಗೆ ಗೊತ್ತಿರುವುದಿಲ್ಲ. ಆದರೆ ಸರ್ಕಾರ ನಡೆಸುವವರು ತಪ್ಪುಮಾಡಿದರೆ ಅದನ್ನ ಸಹಿಸಲು ಸಾಧ್ಯವಿಲ್ಲ. ಅದು ಕಾಂಗ್ರೆಸ್ಸಿನ ಕೈವಾಡ ಎಂದು ಹೇಳಬೇಕಾಗುತ್ತದೆ, ಅಪಾದನೆ ಮಾಡಬೇಕಾಗುತ್ತದೆ. ಬರೆದ ಮನುಷ್ಯ ಕೈಯಿಂದ ಚಿತ್ರ ಬರೆದಿರಲಾರ, ಗಮನಿಸದೆ ಒಂದು ಶಬ್ದ ಹಾಕಿರಬಹುದು. ಆದುದರಿಂದ ನೀವು ತಿದ್ದುಪಡಿ ಮಾಡಿಕೊಂಡಿರಬಹುದು. ಆದರೆ ಪಠ್ಯಪುಸ್ತಕಗಳಲ್ಲಿ ಇಂಥಾದ್ದು ಇದ್ದರೆ ಸಮಿತಿಯು ಕಣ್ಣುಮುಚ್ಚಿಕೊಂಡು ಒಪ್ಪಿಗೆ ನೀಡಿತೆ? ಜಲಜನಕ, ಆಮ್ಲಜನಕ-ಇವು ಯಾವವರ್ಗಕ್ಕೆ ಸೇರಿವೆ ಎಂದು ವಿವರಣೆ ಕೊಡುವುದರಲ್ಲಿ ತಪ್ಪಿದ್ದರೆ ಪಠ್ಯಪುಸ್ತಕಗಳಲ್ಲಿ ಹೇಗೆ ಸರಿಪಡಿಸುವುದು? ಪ್ರತಿವರ್ಷ ಲಕ್ಷಗಟ್ಟಳೆ ಪುಸ್ತಕಗಳನ್ನು ಮಕ್ಕಳು ಕೊಳ್ಳುವುದಿಲ್ಲವೆ ? ಬರೆದಿರುವುದರಲ್ಲಿ ತಪ್ಪಿದ್ದರೆ ಮಕ್ಕಳು ಅದನ್ನೇ ಕಾಪಿಮಾಡುತ್ತಾರೆ. ಪುಸ್ತಕದಲ್ಲಿ ತಪ್ಪಿದೆಯೆಂದು ಯಾರಿಗೆ ಗೊತ್ತಾಗುತ್ತದೆ ? ಕೆಲವು ಪುಸ್ತಕಗಳಲ್ಲಿ ಮಂತ್ರಿಗಳ ಚಿತ್ರ, ಹೆಸರು ಮುಂತಾದ್ದನ್ನೆಲ್ಲಾ ಸೇರಿಸಿರುವುದೇಕೆ? ಯಾವ ಮಂತ್ರಿಗಳು ಎಷ್ಟುದಿವಸ ಅಧಿಕಾರದಲ್ಲಿರುತ್ತಾರೆಂಬುದೇ ಗೊತ್ತಿರುವುದಿಲ್ಲ. ಹಾಗಿರುವಾಗ ಇದೆಲ್ಲಾ ಏಕೆ ಸೇರಿಸಬೇಕು ? ತಪ್ಪುಬರೆದು ಮಕ್ಕಳ ಮೇಲೆ ಅದನ್ನು ಇಂಪ್ರೆಸ್ ಮಾಡಬಾರದು ಪಠ್ಯಪುಸ್ತಕಗಳನ್ನು ಆರಿಸುವ ಸಮಿತಿಯಲ್ಲಿ ಮಹಾತಜ್ಞರಿದ್ದಾರೆಂದು ಕೇಳಿದ್ದೇನೆ. ಅವರು ಕೈಹಿಡ್ದುವವರಾದರೆ ಅವರ ಕೈಗಳನ್ನು ಕತ್ತರಿಸಬೇಡವೆ ? 5ಲಕ್ಷ ಮಕ್ಕಳ ಭವಿಷ್ಯವನ್ನು ರೂಪಿಸುವವರು ಅಪಾದನೆಗೆ ಒಳಗಾಗಬಾರದು. ಅವರ ವಿಚಾರದಲ್ಲಿ ಗಾಳಿವರ್ತಮಾನ ಕೂಡ ಬರಬಾರದು. ಹಾಗಿಲ್ಲದಿದ್ದರೆ ಮಕ್ಕಳನ್ನು ಕಾಣದ ಹಳ್ಳಕ್ಕೆ ತಳ್ಳಿದಂತಾಗುತ್ತದೆ. ತಾಯಿಯ ಹಾಲೇ ವಿಷವಾದರೆ ಎಷ್ಟು ಹಿಂಸೆಯಾಗುತ್ತದೆಂಬುದನ್ನು ಯೋಚನೆಮಾಡಿ, ಆದುದರಿಂದ ಈ ಪಠ್ಯಪುಸ್ತಕಗಳ ವಿಷಯದಲ್ಲಿ ಬಹಳ ನಿಷ್ಠೂರವಾದ ನೀತಿ

ಯೆನ್ನು ಸರ್ಕಾರ ಪ್ರಮಾಣಿಕವಾಗಿ ಜವಾಬ್ದಾರಿಯಿಂದ ನಿರ್ವಹಿಸಬೇಕಾಗುತ್ತದೆ. ಪ್ರತಿಪಕ್ಷದಲ್ಲಿದ್ದು ಸಮರ್ಥನೆ ಮಾಡಿಕೊಳ್ಳುವುದು ಅನಿವಾರ್ಯ ಆದರೆ ವಸ್ತುಸ್ಥಿತಿ ಬೇರೆಇದೆ. ನೂರಾರು ಉದಾಹರಣೆ ಹೇಳುವುದು ಈ ದಿವಸ ನಿಗದಿಮಾಡಿರುವ ಪುಸ್ತಕಗಳು ಸರಿಯಾದ ಪುಸ್ತಕಗಳಲ್ಲ ಹತ್ತು ಪುಸ್ತಕಗಳನ್ನು ನೋಡಿ ಒಂದು ಪುಸ್ತಕವನ್ನು ಈ ಸಭೆಯಲ್ಲೇ ನಾನು ಬರೆದು ಕೊಡದಿದ್ದರೆ ನಾನು ಗೋಪಾಲ ಗೌಡನಲ್ಲ. 10ಪ ಸ್ತಕಗಳನ್ನು ತಂದು ಅದರಲ್ಲಿರುವ ಪಾಠಗಳನ್ನು ಹಿಂದು ಮುಂದುಮಾಡಿ ಒಂದು ಪುಸ್ತಕ ಮಾಡಬಹುದು ಅದು ಸರಿಯಾದ ಕ್ರಮವೇ? ಮೂಲವಿಷಯ ಸಂಶೋಧನೆಮಾಡಿ ಯಾರೂ ಪುಸ್ತಕ ಬರೆದಿಲ್ಲ. ಪುಟ, ಹೆಸರು, ಅನುಕ್ರಮಚಿತ್ರ ಬದಲಾಯಿಸಿ ಪುಸ್ತಕಮಾಡಿ, ಪ್ರಕಾಶನದವರ ಹತ್ತಿರ ಕೈವಾಡ, ಮಾರಾಟಗಾರರ ಬಳಿ ಕೈವಾಡ, ನಡೆಸುತ್ತಾರೆ. ಒಂದು ವ್ಯವಸ್ಥಿತವಾದ ರೀತಿಯಲ್ಲಿ ನಡೆಯುತ್ತಿಲ್ಲ. ಅಕ್ರಮವು ಒಂದು ರೀತಿಯಲ್ಲಿ ನಡೆಯುತ್ತಿದೆ ಎಂದು ವ್ಯಸನದಿಂದ ಹೇಳಬೇಕಾಗಿದೆ. ಇದನ್ನು ಕಡಮೆ ಮಾಡಬೇಕು, ಪಠ್ಯಪುಸ್ತಕಗಳ ರಾಷ್ಟ್ರೀಕರಣ ಮಾಡುವುದಾಗಿ ಹೇಳುತ್ತೀರಿ, ಅದರ ಜೊತೆಗೆ ಜಾತಿ, ನ್ಯಾಸ, ಸ್ವಾತಂತ್ರ್ಯ ಮುಂತಾದುವುಗಳು ರಾಷ್ಟ್ರೀಕೃತವಾದರೆ ಅದಕ್ಕಿಂತ ದೊಡ್ಡಕೇಡು ಯಾವುದೂ ಇರಲಾರದು. ಜನಜೀವನ ಉತ್ತಮಗೊಳಿಸುವುದಕ್ಕೆ ದೋಷರಹಿತ ವ್ಯವಸ್ಥೆ ಮಾಡಿದರೆ ಒಳ್ಳೆಯದು. ಇಲ್ಲದಿದ್ದರೆ ಜಗತ್ತಿಗೆ, ಸಮಾಜಕ್ಕೆ ದೊಡ್ಡ ಅಪಾಯ ತಮಗೆ ಬೇಕಾದ ಮುದ್ದಣ್ಣ, ಸಿದ್ದಣ್ಣ ಮುಂತಾದವರಿಂದ ಪುಸ್ತಕಗಳನ್ನು ಬರೆಸಿ, ಅವರಿಗೆ ಉಪಕಾರಮಾಡಿ ಹತ್ತಾರುಸಾವಿರ ಮಕ್ಕಳಿಗೆ ಹಂಚಿ ಓದಬೇಕೆಂದು ಹೇಳಿದರೆ, ಅವು ಸರಿಯಾಗಿಲ್ಲದಿದ್ದರೆ ಚಳುವಳಿಯನ್ನು ಅದರ ವಿರುದ್ಧವಾಗಿ ಮಾಡಬೇಕಾಗುತ್ತದೆ. ಆದುದರಿಂದ ವಿದ್ಯಾಸಚಿವರು ಇದನ್ನು ಚೆನ್ನಾಗಿ ಗಮನಿಸಬೇಕು. ಅವರು ತಿಳಿದವರು, ಅವರಿಗೆ ತಿಳಿಯುವಂತೆ ಹೇಳುವಶಕ್ತಿ ನನಗಿಲ್ಲ, ಈಗಿನ ರೀತಿ ಸರ್ಕಾರಕ್ಕೆ ಗೌರವ ತರುವಂತಿಲ್ಲ. ಪುನಃ ಪಠ್ಯಪುಸ್ತಕಗಳ ವಿಚಾರದಲ್ಲಿ ಈಗ ನಡೆದಿರುವ ಪ್ರಕರಣಗಳು ನಡೆಯದಂತೆ ತಡೆಮಾಡಬೇಕು. ನುರಿತ ಪಂಡಿತರು, ಜ್ಞಾನಿಗಳು ಅನೇಕರಿದ್ದಾರೆ, ಸಮಾಜ ಜೀವನದಲ್ಲಿ ಆಸಕ್ತಿಯಿರುವವರಿದ್ದಾರೆ. ಮಕ್ಕಳ ವಿಚಾರದಲ್ಲಿ ಮಮತೆಯುಳ್ಳವರಿದ್ದಾರೆ. ಅವರಿಗೆ ಸಂಬಳ, ಭತ್ಯ ಕೊಡಬೇಕಾಗಿಲ್ಲ. ಅವರನ್ನು ಕೇಳಿ ಮರ್ಯಾದೆಯಿಂದ ಅವರೊಂದಿಗೆ ಮಾತನಾಡಿ ವ್ಯವಸ್ಥೆಮಾಡಿದರೆ ಎಷ್ಟೋ ಒಳ್ಳೆಯದು.

ಪಠ್ಯಪುಸ್ತಕಗಳ ಪರಿಷ್ಕರಣ ಮಾಡುವಾಗ ಒಂದು ಗೊತ್ತಾದ ಕಾರ್ಯಕ್ರಮವನ್ನು ಅನುಸರಿಸಿಕೊಂಡು ಬರಬೇಕು. ಪ್ರಾಥಮಿಕ ವಿದ್ಯಾಭ್ಯಾಸದಲ್ಲಿ ಇವತ್ತು ಇರತಕ್ಕಂಥ ಲೋಪದೋಷಗಳನ್ನು ಕುಂದುಕೊರತೆಗಳನ್ನು ತಾವು ಹೋಗಲಾಡಿಸಿ, ತಮ್ಮ ಆಡಳಿತವನ್ನು ಸರಿಪಡಿಸಿಕೊಳ್ಳಿ ಎಂದು ಹೇಳಿ ಉಪಾಧ್ಯಾಯರ ಸಂಬಳ ಸಾರಿಗೆಗಳ ವಿಷಯದಲ್ಲಿ, ಅವರ ಸೌಲಭ್ಯಗಳನ್ನು ಹೆಚ್ಚಿಸುವ ವಿಷಯದಲ್ಲಿ ಸರ್ಕಾರ ತೀವ್ರ ಗಮನಕೊಡಬೇಕು. ಅವರ ಕೊರತೆಗಳನ್ನು ಹೋಗಲಾಡಿಸುವುದಕ್ಕೆ ಪ್ರಯತ್ನ ಮಾಡಬೇಕು, ಎಂದು ನಾನು ಹೇಳಿ, ನಾನು ಈ ಒಂದು ಸಂದರ್ಭದಲ್ಲಿ ಮಾತನಾಡುವುದಕ್ಕೆ ಅವಕಾಶ ಕೊಟ್ಟಂಥ ಅಧ್ಯಕ್ಷರಿಗೆ, ಹಾಗೂ ಈ ನಿರ್ಣಯ ತಂದಂಥ ಮಾನ್ಯ ಶ್ರೀ ಮಾದೇಗೌಡರಿಗೆ ಕೃತಜ್ಞತೆಯನ್ನು ಅರ್ಪಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

10-30 P.M.

†ಶ್ರೀ ಕೆ. ಲಕ್ಕಪ್ಪ (ಹೆಬ್ಬೂರು).—ಅಧ್ಯಕ್ಷರೆ, ಪ್ರಾಥಮಿಕ ಶಿಕ್ಷಣ ಆಡಳಿತದ ಬಗ್ಗೆ ತಂದಿರತಕ್ಕಂಥ ಈ ನಿರ್ಣಯದ ಬಗ್ಗೆ ಈಗಾಗಲೇ ಶ್ರೀಮಾನ್ ಗೋಪಾಲಗೌಡರು ಮಾತನಾಡಿರತಕ್ಕಂಥ ವಿಚಾರಗಳನ್ನು ಸ್ವಲ್ಪಮಟ್ಟಿಗೆ ಬಿಟ್ಟು, ಬಾಕಿ ವಿಚಾರವನ್ನು ಚರ್ಚೆ ಮಾಡಲು ಬಯಸುತ್ತೇನೆ. ಅದರಲ್ಲಿಯೂ ನಮ್ಮ ಈ ಮಂತ್ರಿಮಂಡಲದಲ್ಲಿ ಶ್ರೀಮಾನ್ ಕಂಠಿಯವರ ಅಧಿಕಾರಾವಧಿಯಲ್ಲಿ ಆಗಿರತಕ್ಕಂಥ ಅನ್ಯಾಯ ಮತ್ತು ಮಕ್ಕಳ ಭವಿಷ್ಯಕ್ಕೆ ಒದಗಿರತಕ್ಕಂಥ ಧಕ್ಕೆ ಒಂದು ದೊಡ್ಡ ಕೋಲಾಹಲವನ್ನೇ ಈ ರಾಜ್ಯದಲ್ಲಿ ಎಬ್ಬಿಸಿದೆ ಎಂದು ಹೇಳಿದರೆ ಬಹುಶಃ ತಪ್ಪಾಗಲಾರದು. ಏಕೆಂದರೆ ನಮ್ಮ ದೇಶದಲ್ಲಿ ಸಮಾಜವಾದವನ್ನು ಸ್ಥಾಪನೆ ಮಾಡಬೇಕು, ಇದು ನಾಗರಿಕ ದೇಶವಾಗಬೇಕು, ಜನಗಳಲ್ಲಿ ಸಂಸ್ಕೃತಿ ಬೆಳೆಯಬೇಕು ಎಂದು ಹೇಳಿ ವಿದ್ಯಾಖಾತೆಗೆ ಹೆಚ್ಚು ಅಧಿಕಾರವನ್ನು ಕೊಟ್ಟೆವು. ಪ್ರಜಾಪ್ರಭುತ್ವ ಯಶಸ್ವಿಯಾಗಿ ನಡೆಯಬೇಕಾದರೆ ಒಳ್ಳೆಯ ಪ್ರಜೆಗಳನ್ನು ನಿರ್ಮಾಣಮಾಡಬೇಕು ಎಂದು ಹೊರಟ ಈ ದಾರಿಗೆ ಇವತ್ತಿನಿಂದ ಕೊಡಲಿ ಪೆಟ್ಟು ಹಾಕಿರುವ ನಿದರ್ಶನಗಳಿವೆ ಎಂದು ಬಹಳ ವಿಷಾದದಿಂದ ಹೇಳಬೇಕಾಗಿದೆ. ಈ ಸರ್ಕಾರ ಬಂದಮೇಲೆ ಪ್ರತಿದಿವಸ ಸಾಮಾನ್ಯವಾಗಿ ವಿದ್ಯಾಭ್ಯಾಸದ ಇಲಾಖೆಯಮೇಲೆ ಟೀಕೆಗಳು ಬಂದಿವೆ. ಪ್ರತಿನಿತ್ಯ ವಿದ್ಯಾಇಲಾಖೆಯ ಆಡಳಿತ ಕುಸಿದು ಹೋಗುತ್ತಿರುವಂಥ ನಿದರ್ಶನಗಳನ್ನು ಕಣ್ಣಾರೆ ಕಂಡಿದ್ದೇವೆ.

Mr. CHAIRMAN.—The Hon'ble member should speak only on primary education.

Sri K. LAKKAPPA.—Education Department includes Primary Schools also.

ಈ ಮೂಲಭೂತವಾದಂಥ ವಿಷಯವನ್ನು, ಹಕ್ಕನ್ನು ಪ್ರಜೆಗಳಿಗೆ ಕೊಡತಕ್ಕಂಥ ಸಂದರ್ಭದಲ್ಲಿ ಈ ಸರ್ಕಾರ ಆದರಲ್ಲಿಯೂ ಪ್ರಾಥಮಿಕ ಶಿಕ್ಷಣದ ಆಡಳಿತ ಬಹಳ ಕೆಟ್ಟುಹೋಗಿದೆ. ಅದಕ್ಕೆ ತುಕ್ಕು ಹಿಡಿದಿದೆ ಎಂದು ಹೇಳಿದರೆ ತಪ್ಪಾಗಲಾರದು. ಈಗಾಗಲೇ ಶ್ರೀ ಗೋಪಾಲಗೌಡರು ಹೇಳಿದರು. ಈ ಸರ್ಕಾರ ಕಡ್ಡಾಯ ಶಿಕ್ಷಣವನ್ನು ಜಾರಿಗೆ ತಂದು ಈ ದೇಶದಲ್ಲಿ ಸಂಸ್ಕೃತಿಯನ್ನು ಬೆಳಸಿ, ಜನಗಳನ್ನು ಸುಸಂಸ್ಕೃತರನ್ನಾಗಿ ಮಾಡುತ್ತೇವೆ ಎಂಬ ಈ ಒಂದು ಯೋಜನೆಯಲ್ಲಿ ವಿಫಲವಾಗಿದೆ ಎಂದು ಎಲ್ಲಕ್ಕಿಂತ ಬಹಳ ಮುಖ್ಯವಾಗಿ ಪ್ರಾಥಮಿಕ ಶಾಲೆಗಳಿಗೆ ಕಟ್ಟಡಗಳಿಲ್ಲ, ಕಟ್ಟಡಗಳಿದ್ದರೆ, ಉಪಾಧ್ಯಾಯರಿಲ್ಲ. ಉಪಾಧ್ಯಾಯರಿದ್ದರೆ ಹುಡುಗರು ಬರುತ್ತಾ ಇಲ್ಲ. ಇವೆಲ್ಲಾ ಇದ್ದರೂ ಆಡಳಿತವರ್ಗ ಸರಿಯಾಗಿಲ್ಲ. ಈ ಪ್ರಶ್ನೆಗಳು ಬಹಳವಾಗಿ ಇವೆ. ಇದು ಸರಿಯಾಗಬೇಕಾದರೆ ಅಧಿಕಾರ ನಡೆಸತಕ್ಕಂಥವರು ಸರಿಯಾಗಿರಬೇಕು; ಪಾಠವನ್ನು ಹೇಳತಕ್ಕಂತವರು ಸರಿಯಾಗಿರಬೇಕು, ಹುಡುಗರನ್ನು ಪಾಠಶಾಲೆಗೆ ಕಳುಹಿಸತಕ್ಕಂಥ ಪೋಷಕವರ್ಗಕ್ಕೆ ಮತ್ತು ಪಾಠಪ್ರವಚನವನ್ನು ಮಾಡುವುದಕ್ಕೆ ಒಳ್ಳೆಯ ಕಟ್ಟಡಗಳು ಅತ್ಯವಶ್ಯಕವಾಗಿರಬೇಕು. ಈ ವಿಚಾರದಲ್ಲಿ ಗ್ರಾಮಾಂತರ ಪ್ರದೇಶಗಳ ಬಗ್ಗೆ ಹೇಳುವುದಾದರೆ, ಜನರ ಸ್ಥಿತಿ ನಿಜವಾಗಿಯೂ ದುರ್ದೈವ ಎಂದು ಹೇಳಬೇಕಾಗಿದೆ. ಇವತ್ತಿನ ದಿವಸ ಈ ದೇಶದಲ್ಲಿ 100ಕ್ಕೆ 90 ಜನ ರೈತರಿರುವಂಥ ಕಡೆ ಆಡಳಿತಯಂತ್ರ ನಡೆಸತಕ್ಕಂಥ ಸರ್ಕಾರ, ರೈತರ ಮಕ್ಕಳು ವಿದ್ಯಾಭ್ಯಾಸಮಾಡುವುದಕ್ಕೆ ಸೌಕರ್ಯ ಕಲ್ಪಿಸಿಲ್ಲ. ಸೌಕರ್ಯ ಬೇಕು ಎಂದು ಹೇಳಿ ಯಾರು ಕೇಳಿದರೂ, ಮೊದಲು ಹಣವನ್ನು ಹಳ್ಳಿಯವರು ಕಟ್ಟಡಕ್ಕೆ ಕೊಡಬೇಕು ಎಂದು ಸರ್ಕಾರದವರು ಹೇಳುತ್ತಾರೆ. ಈ ಜವಾಬು ನಿಜವಾಗಿಯೂ ಪ್ರಜಾ ಪ್ರಭುತ್ವಕ್ಕೆ ಅಥವಾ ಪ್ರಜಾಪ್ರಭುತ್ವನೀತಿಗೆ ಸರಿಹೊಂದಿಕೊಳ್ಳುವುದಂಥದಲ್ಲ. ಏಕೆಂದರೆ ಈ ದೇಶದಲ್ಲಿ ಪ್ರತಿಯೊಬ್ಬ ಪ್ರಜೆಯೂ ಕಡ್ಡಾಯವಾಗಿ ಪ್ರಾಥಮಿಕ ಶಿಕ್ಷಣವನ್ನು ಪಡೆಯತಕ್ಕಂಥಾದ್ದು ಅವನ ಆಜನ್ಮಸಿದ್ಧವಾದ ಹಕ್ಕು. ಆ ಹಕ್ಕಿಗೆ ಧಕ್ಕೆ ಇರುವುದಾದರೆ ಪ್ರಜಾಪ್ರಭುತ್ವ ಎಲ್ಲಿಗೆ ಹೋಗುತ್ತದೆ ಅನ್ನುವುದನ್ನು ಯೋಚನೆ ಮಾಡಬೇಕಾಗಿದೆ. ಸ್ವಾಮಿ, ಗ್ರಾಮಾಂತರ ಪ್ರದೇಶಗಳ ಪ್ರಾಥಮಿಕ ಶಿಕ್ಷಣ ಕಟ್ಟಡಗಳ ವಿಷಯವನ್ನು ತಾಲ್ಲೂಕು ಬೋರ್ಡುಗಳಿಗೆ ವಹಿಸತಕ್ಕಂಥ ವಾದ, ರೀತಿ ನೀತಿ ಕೂಡ ನಮ್ಮ ಮಕ್ಕಳ ಭವಿಷ್ಯಕ್ಕೆ ಬಹಳ ಅನ್ಯಾಯ ಮಾಡುವಂಥಾದ್ದು ಎಂದು ಎದ್ದು ಕಾಣುತ್ತಾ ಇದೆ. ಗ್ರಾಮಾಂತರ ಪ್ರದೇಶಗಳಲ್ಲಿ ಎಲ್ಲೆಲ್ಲಿ ಕಟ್ಟಡಗಳು ಬೇಕಾಗಿವೆ, ಅಲ್ಲಿಗೆ ಹೋಗತಕ್ಕಂಥ ಮಕ್ಕಳು ಎಷ್ಟು ಎಂಬ ಬಗ್ಗೆ ಇವತ್ತಿನವರೆಗೂ ಸರ್ಕಾರ ನಿಖರವಾದ ಅಂಕಿಅಂಶಗಳನ್ನು ಸಂಗ್ರಹಣೆ ಮಾಡಿಲ್ಲ. ಸಂಗ್ರಹಣೆ ಮಾಡಿರತಕ್ಕಂಥ ಅಂಕಿಅಂಶಗಳೂ ಕೂಡ ತಪ್ಪು ಮತ್ತು ಸುಳ್ಳಿನ ವರದಿಗಳ ಆಧಾರದ ಮೇಲೆ ಶೇಖರಿಸಿದ ಅಂಕಿಅಂಶಗಳಾಗಿವೆ. ಏಕೆಂದರೆ ಅನೇಕ ಹಳ್ಳಿಗಳಿಗೆ ಸಾಮಾನ್ಯವಾಗಿ ಹತ್ತಾರು ಮೈಲಿಗಳ ದೂರಕ್ಕೆ ಒಂದು ಸ್ಕೂಲು ಇರುವುದಿಲ್ಲ. ಸ್ಕೂಲುಗಳಿದ್ದರೂ ಒಂದೇ ಕೊಠಡಿಯಲ್ಲಿ ನಾಲ್ಕು ಕ್ಲಾಸುಗಳನ್ನು ಮಾಡುವ ದೃಶ್ಯ ನೋಡಬೇಕಾಗಿದೆ, ಇದೂ ಅಲ್ಲದೆ ಈ ಕ್ಲಾಸುಗಳಿಗೂ ಪಾಠವನ್ನು ಒಬ್ಬರೆ ಉಪಾಧ್ಯಾಯರು ಹೇಳಿಕೊಡಬೇಕು. ಎಲ್ಲ ಕ್ಲಾಸಿನ ಹುಡುಗರೂ ಒಂದೇ ಹಾಲನಲ್ಲಿ ಕುಳಿತುಕೊಂಡು ಪಾಠ ಹೇಳಿಸಿಕೊಳ್ಳಬೇಕು, ಕಲಿಯಬೇಕು. ಇವತ್ತಿನ ದಿವಸ ಉಪಾಧ್ಯಾಯರ ಸ್ಥಿತಿ ಯಾವ ರೀತಿ ಇದೆ ಎನ್ನುವುದನ್ನು ಮತ್ತು ಸರ್ಕಾರ ದಿನಚರಿ ಆಡಳಿತದಲ್ಲಿ ಕೈ ಹಾಕುತ್ತಿರುವ ನಿದರ್ಶನಗಳನ್ನೂ ಹೇಳಬೇಕಾಗಿದೆ. ಹಳ್ಳಿಯಲ್ಲಿನ ಪ್ರಾಥಮಿಕ ಶಾಲೆಗಳಸ್ಥಿತಿ ಹೀನಾಯವಾಗಿದೆ. ಅಧಿಕಾರಿಗಳು ನೀತಿನಿಯಮಕ್ಕೆ ಗೌರವ ಕೊಡುತ್ತಿಲ್ಲ. ಪ್ರೈಮರಿ ಶಾಲೆಯ ಒಂದು ನಿದರ್ಶನವನ್ನು ಹೇಳಬೇಕಾಗಿದೆ. ನಮ್ಮ ತುಮಕೂರು ಡಿಸ್ಟ್ರಿಕ್ಟು ಕೊರಟಗೆರೆ ತಾಲ್ಲೂಕು ಕೊಳಾಲ ಎಂಬ ಒಂದು ಹಳ್ಳಿಯಲ್ಲಿ ಒಬ್ಬರು New Type Middle School ಹೆಡ್ ಮಾಸ್ಟರು 12 ವರ್ಷದಿಂದ ಆದೇ ಸ್ಕೂಲಿನಲ್ಲಿಯೇ ಇದ್ದರೂ ಆಲೂರಿನ ಮುಖ್ಯಸ್ಥರ ಮತ್ತು ಬಹಳ ಅನುಕೂಲಸ್ಥರ ಮನೆಯಲ್ಲಿ ಊಟಮಾಡಿಕೊಂಡು, ಅವರ ಲೆಕ್ಕಪತ್ರಗಳು, ಲೇವಾದೇವಿ, ದಿನಚರಿ ವ್ಯವಹಾರ ನೋಡಿಕೊಂಡು ಅವರ ಜೊತೆಯಲ್ಲಿಯೇ ಇದ್ದರು. ಅಂತಹ ವ್ಯವಹಾರದಲ್ಲಿದ್ದಂತಹ ಈ ಸ್ಕೂಲಿನ ಉಪಾಧ್ಯಾಯರು ಮೊನ್ನೆ ಒಂದು ಸಾರಿ ಇನ್ಸ್‌ಪೆಕ್ಟರನ್ನು ಭೇಟಿ ಮಾಡುವುದಕ್ಕೆ ಹೋದಾಗ ನೀವು ಯಾರು, ನೀವು ಇನ್ಸ್‌ಪೆಕ್ಟರ್ ಎಂಬುದಕ್ಕೆ ಏನು ಗುರುತಿದೆ ಎಂದು ಕೇಳಿದ್ದಾರೆ. ಈ ವಿಚಾರವನ್ನು ತುಮಕೂರು ಡಿ. ಓ. ಗೆ ತಿಳಿಸಿದಾಗ ಕೂಡಲೆ ಅಲ್ಲಿಂದ ಆ ಉಪಾಧ್ಯಾಯರನ್ನು ಪಾವಗಡ ತಾಲ್ಲೂಕಿಗೆ ವರ್ಗ ಮಾಡಿದ್ದಾರೆ. ಆದರೆ ಸಾಹುಕಾರರ ಒಂದು ಆಶ್ರಯದಲ್ಲಿ ಬೆಳೆದಂತಹ ಉಪಾಧ್ಯಾಯರು ಈ ಸ್ಕೂಲನ್ನೇ ಮುಚ್ಚಿ ವಿದ್ಯಾರ್ಥಿಗಳ ಸರ್ಟಿಫಿಕೇಟುಗಳನ್ನು ವಾಪಸ್ಸು ತೆಗೆದುಕೊಂಡು ವಿದ್ಯಾರ್ಥಿಗಳಿಗೆ ಇಲ್ಲಿ ಸ್ಕೂಲು ನಡೆಯುವುದಿಲ್ಲ. ನೀವೆಲ್ಲಾ ಬೇರೆಕಡೆಗೆ ಹೋಗಿ ಎಂದು ಹೇಳಿ ಆ ಸ್ಕೂಲು ಬಾಗಿಲನ್ನೇ ಮುಚ್ಚಿದರು. ಇಂಥಾದ್ದಕ್ಕೆಲ್ಲಾ ಸರ್ಕಾರ ರಕ್ಷಣೆ ಕೊಡುವಹಾಗೆಯೇ ಇಲ್ಲ. ಸರ್ಕಾರ ನೇರವಾಗಿ ತುಮಕೂರು ಡಿ. ಓ.

ಆಫೀಸಿಗೆ ಪತ್ರವ್ಯವಹಾರಗಳನ್ನು ನಡೆಸುವ ಮೂಲಕ, ಮಂತ್ರಿಗಳು ಮತ್ತು ಉನ್ನತ ಅಧಿಕಾರಿಗಳ ಪ್ರೇರಣೆಯಿಂದಲೋ ಏನೋ ಪುನಃ ಆ ಉಪಾಧ್ಯಾಯರನ್ನು ಅದೇ ಊರಿನಲ್ಲಿ ವರ್ಗಮಾಡಿದರು. ಒಬ್ಬ ಡಿಸ್ಟ್ರಿಕ್ಟ್ ವಿದ್ಯಾಧಿಕಾರಿ ಒಬ್ಬ ಸಾಮಾನ್ಯ ಉಪಾಧ್ಯಾಯರ ಮೇಲೆ ಕಂಟ್ರೋಲ್ ಇಲ್ಲದೆ ಅವರ ಒಂದು ಕರ್ತವ್ಯದ ಬಗ್ಗೆ ಅವರು ಹೇಳಿದ ಮಾತನ್ನು ಕೇಳದೆ ಇರುವ ನಿದರ್ಶನ ಒಂದನ್ನು ಈಗ ಈ ಸಭೆಯ ಮುಂದೆ ತಿಳಿಸಬೇಕಾಗಿ ಬಂತು. ಇವತ್ತಿನ ದಿವಸ ಗ್ರಾಮಾಂತರ ಪ್ರದೇಶಗಳಲ್ಲಿ ಇರತಕ್ಕ ಪ್ರಾಥಮಿಕ ಶಾಲೆಗಳ ಆಡಳಿತ ಯಂತ್ರದ ರೀತಿನೀತಿ ಕೆಟ್ಟುಹೋಗಿ ಪ್ರಾಥಮಿಕ ವಿದ್ಯಾಭ್ಯಾಸದ ಏಳಿಗೆ ಕುಂದುತ್ತಿದೆಯೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಪ್ರಜೆಗಳು ಒಳ್ಳೆಯ ಸುಸಂಸ್ಕೃತರು ಆಗಬೇಕೆಂಬ ಸರ್ಕಾರದ ಮನೋಭಾವನೆಯ್ಯೇ ಅಷ್ಟಾಗಿ ಕಾಣಬರುತ್ತಿಲ್ಲ.

ಶ್ರೀ ಎಸ್. ಆರ್. ಕಂಠಿ.—ಅಂತಹ ಉದಾಹರಣೆಗಳು ಎಷ್ಟಿವೆ ?

ಶ್ರೀ ಕೆ. ಲಕ್ಕಪ್ಪ.—ಅಂತಹ ಉದಾಹರಣೆಗಳು ಬಹಳ ಇವೆ. ಹಿಂದೆ ಅನೇಕಬಾರಿ ಈ ಬಗ್ಗೆ ಕಾಗದಗಳನ್ನು ಬರೆದು ಮಂತ್ರಿಗಳ ಗಮನಕ್ಕೆ ತಂದಿದ್ದೇನೆ. ಇದು ಬಹಳ ದುರದೃಷ್ಟಕರ. ಈ ವಿಷಯದಲ್ಲಿ ಉನ್ನತ ಅಧಿಕಾರಿಗಳು ಈರೀತಿಯಲ್ಲಿ ಕೆಲಸಕಾರ್ಯಗಳನ್ನು ನಿರ್ವಹಣೆ ಮಾಡಿದ್ದಾರೆ. ನಿಜವಾಗಿ ಆಡಳಿತಯಂತ್ರವನ್ನು ಸರಿಯಾಗಿ ನಡೆಸುವುದಕ್ಕೆ ತಕ್ಕ ಅವಕಾಶಗಳು ಇದ್ದರೂ ಸಾಮಾನ್ಯ ವಿಷಯಗಳಲ್ಲಿ ಇವರು ಕೈಹಾಕುವುದರಿಂದ ಆಡಳಿತಯಂತ್ರವೇ ಕೆಟ್ಟು ಹೋಗುವ ಪರಿಸ್ಥಿತಿ ಬರುತ್ತದೆ. ಇವತ್ತಿನ ದಿವಸ ತಾಲ್ಲೂಕ್ ಬೋರ್ಡುಗಳಿಗೆ ಸರ್ಕಾರದವರು ಕೊಡುವ ಹಣ ಸಾಲದು ಎಂಬುದಾಗಿ ಪಂಚಾಯತಿ ನಿರ್ಣಯಗಳನ್ನು ಮಾಡಿ ಪೋಷಕರಿಂದ ಕಳುಹಿಸಲ್ಪಟ್ಟರೂ ಸಾಕಷ್ಟು ರೀತಿಯಲ್ಲಿ ಸರ್ಕಾರ ಆ ಬಗ್ಗೆ ನಿಗಾಕೊಡುತ್ತಾ ಇಲ್ಲ ಮುಖ್ಯವಾಗಿ ಇವತ್ತಿನ ದಿವಸ ಸರ್ಕಾರ ಪ್ರಾಥಮಿಕ ವಿದ್ಯಾಭ್ಯಾಸ ಸೌಕರ್ಯಕ್ಕೆ ಮತ್ತು ಕಟ್ಟಡಗಳಿಗೆ ಇನ್ನೂ ಅನೇಕ ಕಡೆಗಳಲ್ಲಿ ಹಣವನ್ನೊದಗಿಸಲಿಲ್ಲವೆಂದು ಬಹಳ ವ್ಯಸನವಾಗುತ್ತದೆ.

ಶ್ರೀ ಎಸ್. ಆರ್. ಕಂಠಿ.—ಕೆಲವು ಕಡೆಗಳಲ್ಲಿ ಇನ್ನೂ ಜನಗಳಿಂದ ಕಾಂಟ್ರಿಬ್ಯೂಷನ್ ಬರಬೇಕು ಅದು ಬಂದಕೂಡಲೆ ಸರ್ಕಾರದವರು ತಕ್ಕ ಹಣ ಸಹಾಯವನ್ನು ಮಾಡುತ್ತಾರೆ.

ಶ್ರೀ ಕೆ. ಲಕ್ಕಪ್ಪ.—ತೆರಿಗೆಗಳನ್ನು ನಾವೇಕೊಡಬೇಕು, ಕಟ್ಟಡಗಳನ್ನು ನಾವೇ ಕಟ್ಟಿಸಿಕೊಡಬೇಕು, ಉಪಾಧ್ಯಾಯರುಗಳನ್ನು ನಾವೇ ನೇಮಿಸಿಕೊಳ್ಳಬೇಕು. ಹೀಗೆ ಎಲ್ಲಾ ಕೆಲಸಗಳನ್ನು ನಾವೇ ಮಾಡಿಕೊಳ್ಳಬೇಕು ಅಂದರೆ ಸರ್ಕಾರ ಏನೇನು ಕೆಲಸಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಮಾಡುತ್ತಿದೆಯೆಂಬುದನ್ನು ಸ್ವಲ್ಪ ಹೇಳಿದರೆ ಚೆನ್ನಾಗಿರುತ್ತದೆ. ತೆರಿಗೆಯನ್ನು ಜನ ಕೊಡುತ್ತಾರೆ. ಇತ್ತೀಚೆಗೆ ನಮ್ಮ ದೇಶಕ್ಕೆ ರಕ್ಷಣೆಯಾಗಬೇಕು ಎಂದು ಬೇರೆ ಹೇಳುತ್ತಿದ್ದೀರಿ. ಹೀಗೆ ಪ್ರತಿಯೊಂದು ನಾವೇ ಮಾಡುತ್ತಿದ್ದೇವೆಂದು ಜನತೆ ಹೇಳುತ್ತಿರುವುದನ್ನು ಸರ್ಕಾರ ಈ ಸಂದರ್ಭದಲ್ಲಿ ಮನಗಾಣಬೇಕು. ಅಂದ ಮೇಲೆ ಸರ್ಕಾರ ಮಾಡತಕ್ಕ ಕೆಲಸವೇನು? ವಿದ್ಯಾಭ್ಯಾಸ ಸೌಕರ್ಯ ಸಾಕಷ್ಟು ಮಕ್ಕಳಿಗೆ ಕೊಡಬಾರದು ಮತ್ತು ನಮ್ಮ ದೇಶದ ಮಕ್ಕಳು ವಿದ್ಯಾವಂತರಾಗಬಾರದು ಎಂಬ ಮನೋಭಾವ ಸರ್ಕಾರ ತಾಳಿದೆಯೋ ಏನೋ ಎಂಬ ಒಂದು ಸಂಶಯ ಜನತೆಗೆ ಈಗ ಉಂಟಾಗುತ್ತಿದೆ. ಇಂತಹ ಪ್ರಜಾಪ್ರಭುತ್ವದಲ್ಲಿ ಸ್ವೇಚ್ಛಾಧಿಕಾರ ತೊಲಗಬೇಕು. ಇಲ್ಲಧಿದ್ದರೆ ಸರ್ಕಾರದವರ ಮೇಲೆ ಒಂದು ರೀತಿಯ ಅನುಮಾನ ಅಥವಾ ಶಂಕೆ ಇಂತಹ ರಾಜ್ಯಾಡಳಿತದಲ್ಲಿ ಜನತೆಗೆ ಉಂಟಾಗುತ್ತದೆ. ಆದ್ದರಿಂದ ಈ ಪ್ರಜಾಭುತ್ವದಲ್ಲಿ ಪ್ರಾಥಮಿಕ ಶಾಲಾಕಟ್ಟಡಗಳು ಹೆಚ್ಚಿ ಮಕ್ಕಳು ಹೆಚ್ಚುಹೆಚ್ಚಾಗಿ ವಿದ್ಯಾವಂತರಾಗಿ ದೇಶ ಚೆನ್ನಾಗಿ ಬೆಳೆಯಬೇಕು ಎಂಬುದು ಈ ಸನ್ನಿವೇಶದಲ್ಲಿ ಬಹುಮುಖ್ಯವಾದುದು. ಈ ಸಮಸ್ಯೆಗಳನ್ನು ಇವತ್ತಿನವರೆಗೂ ಬಿಡಿಸಿಕೊಳ್ಳುವುದಕ್ಕೆ ಇವರ ಅಧಿಕಾರದ ಅವಧಿಯಲ್ಲಿ ಸಾಧ್ಯವಾಗಿಲ್ಲ. ಇನ್ನು ಮುಂದೆ ಪ್ರಾಥಮಿಕ ಶಾಲಾ ಕಟ್ಟಡಗಳ ಬಗ್ಗೆ ಆಗಬೇಕಾದ ಸೌಕರ್ಯಗಳನ್ನೆಲ್ಲಾ ಒದಗಿಸುವುದೇ ಈ ಸರಕಾರದ ಪ್ರಥಮ ಕರ್ತವ್ಯವಾಗಿರಬೇಕೆಂದು ನಾನು ಈ ಸಂದರ್ಭದಲ್ಲಿ ಆಶಿಸಬಯಸುತ್ತೇನೆ. ಇನ್ನು ಪ್ರಾಥಮಿಕ ಶಿಕ್ಷಣ ಮತ್ತೆ ಏತಕ್ಕೋಸರ ಕೆಟ್ಟಿದೆ ಎಂದರೆ ಉಪಾಧ್ಯಾಯರಲ್ಲಿರತಕ್ಕ ಜಿಗುಪ್ಸೆಯೇ ಕಾರಣ. ಅವರಿಗೆ ಕೊಡತಕ್ಕ ಈಗಿನ ಸಂಬಳಸಾರಿಗೆ ಮತ್ತು ಇತರ ಸೌಕರ್ಯಗಳೇ ಮತ್ತೊಂದು ಕಾರಣವೆಂದು ಹೇಳಬಹುದು ಏಕೆಂದರೆ ಆ ಉಪಾಧ್ಯಾಯರಿಗೆ ಕೊಡುತ್ತಾ ಇರತಕ್ಕ ಕಿರುಕುಳ, ಅನ್ಯಾಯಗಳನ್ನು ಇದುವರೆಗೂ ಈ ಸರ್ಕಾರ ಬಗೆಹರಿಸಿಲ್ಲ. ಈ ದೇಶದಲ್ಲಿ ಪ್ರಾಥಮಿಕ ಉಪಾಧ್ಯಾಯರುಗಳ ಸಂಖ್ಯೆಯೇ ಬಹಳ ಜಾಸ್ತಿ. ಆದ್ದರಿಂದ ಅವರ ಸಮಸ್ಯೆಗಳೂ ಅಷ್ಟೇ ಗಾತ್ರವಾಗಿ ಉದ್ಭವಿಸುತ್ತವೆಂಬುದನ್ನು ಸರ್ಕಾರ ಈ ಸಂದರ್ಭದಲ್ಲಿ ಮನಗಾಣಬೇಕು. ಆ ಬಗ್ಗೆ ಸರ್ಕಾರ ಯಾವ ಅಂಕಿ ಅಂಶವನ್ನೂ ಇದುವರೆಗೆ ಕ್ರೋಢೀಕರಿಸಿಲ್ಲ. ಇನ್ನು ಮೊನ್ನೆತಾನೆ ಪ್ರಾಥಮಿಕ ಉಪಾಧ್ಯಾಯರ ಬಗ್ಗೆ ರೆಕ್ರೂಟ್‌ಮೆಂಟ್ ರೂಲ್ಸ್ ಬಂದಾಗ ಕೆಲವು ವರ್ಗದ ಉಪಾಧ್ಯಾಯ ವೃತ್ತಿ ಶಿಕ್ಷಣ ಪಡೆದಿರುವ ಉಪಾಧ್ಯಾಯರ ಗೋಳು ನಮ್ಮ ಮುಂದೆ ಇವತ್ತಿನದಿವಸ ಬಂದಿದೆ. ಅದು ತಮಗೂ, ಸರ್ಕಾರದವರಿಗೂ ಗೊತ್ತಿದೆ. ಸುಮಾರು 400 ಜನ ಉಪಾಧ್ಯಾಯರುಗಳು ಎಸ್. ಎಸ್. ಎಲ್. ಸಿ. ಪಾಸಾಗಿದೆ ಟಿ. ಟಿ. ಸಿ.

(ಶ್ರೀ ಕೆ. ಲಕ್ಕಪ್ಪ)

ಪರೀಕ್ಷೆ ಪಾಸ್ ಮಾಡಿಕೊಂಡು ಇದುವರೆಗೂ ಹಂಗಾಮಿಯಾಗಿ ಉಪಾಧ್ಯಾಯರ ವೃತ್ತಿಯಲ್ಲಿ ಕೆಲಸಮಾಡಿ ಇವತ್ತಿನ ದಿವಸ ಅವರು ಕೆಲಸ ಕಾರ್ಯಗಳಿಲ್ಲದೆ ತೊಂದರೆಪಡುತ್ತಾ ಇದ್ದಾರೆ. ಇವತ್ತಿನ ದಿವಸ ಅವರಿಗೆಲ್ಲರಿಗೂ ಕೆಲಸಗಳನ್ನು ಕೊಡಿಸುವ ವಿಚಾರವನ್ನು ಸರ್ಕಾರದವರು ಇದುವರೆಗೂ ತಮ್ಮ ಗಮನಕ್ಕೆ ತೆಗೆದುಕೊಳ್ಳಲೇ ಇಲ್ಲ. ಈ 400 ಜನ ಉಪಾಧ್ಯಾಯರ ಗೋಳಂತೂ ಬಹಳವಾಗಿದೆ. ಈಗ ಅಂತಹವರಿಗೆ ಪುನಃ ಪರೀಕ್ಷೆ ಮತ್ತು ಟ್ರೈನಿಂಗ್ ತೆಗೆದುಕೊಳ್ಳಬೇಕೆಂದು ಒಂದು ಅವಕಾಶವನ್ನು ಕೊಟ್ಟಿದ್ದೀರಿ. ಅಂತಹ ಉಪಾಧ್ಯಾಯರಿಗೆ ಈಗ ಏನು ಕೆಲಸಗಳನ್ನು ಕೊಟ್ಟಿದ್ದೀರೋ ಗೊತ್ತಿಲ್ಲ. ಇವತ್ತಿನದಿವಸ ಏಕದಂ ಅವರನ್ನು ರಿಟ್ರೆಂಚ್ ಮಾಡುವುದರಿಂದ ಎಷ್ಟು ಅನ್ಯಾಯವಾಗುತ್ತದೆಂಬುದನ್ನು ಸರ್ಕಾರ ಚೆನ್ನಾಗಿ ಮನಗಾಣಬೇಕು. ಈಗಾಗಲೇ ಅವರಿಗೆ ಎಷ್ಟೋ ತೊಂದರೆಯಾಗಿದೆ. ಆದ್ದರಿಂದ ಈ ವಿಚಾರದಲ್ಲಿ ಸರ್ಕಾರದವರು ಯಾವುದಾದರೂ ಒಂದು ತ್ವರಿತವಾದ ನಿರ್ಧಾರವನ್ನು ಕೂಡಲೇ ಕೈಗೊಳ್ಳಬೇಕು. ಏಕೆಂದರೆ ನುರಿತ ಶಿಕ್ಷಕರು ದೇಶದಲ್ಲಿ ಸಿಗುವುದು ದುರ್ಲಭ. ಉತ್ತಮ ವಾದಂಥ ರೀತಿಯಲ್ಲಿ ಪಾಠಗಳನ್ನು ಹೇಳಿಕೊಡತಕ್ಕ ಉಪಾಧ್ಯಾಯರುಗಳು ದೇಶದಲ್ಲಿ ಸಿಕ್ಕುವುದು ಕಷ್ಟ, ಹಾಗಿರುವಾಗ ಅಂತಹವರನ್ನು ಸರ್ಕಾರ ಸರಿಯಾದ ರೀತಿಯಲ್ಲಿ ನೋಡಿಕೊಂಡು ಅವರ ಸ್ಥಿತಿಗತಿಗಳ ಕಡೆಗೆ ವಿಶೇಷ ಗಮನವನ್ನು ಕೊಡಬೇಕು. ಇಲ್ಲದಿದ್ದರೆ ದೇಶದಲ್ಲಿ ಮುಂದೆ ಉತ್ತಮವಾದ ಪ್ರಜೆಗಳನ್ನು ತಯಾರುಮಾಡುವುದಕ್ಕೆ ಸರ್ಕಾರಕ್ಕೆ ತುಂಬಾ ತೊಂದರೆಯಾಗುತ್ತದೆ. ಎಲ್ಲಿ ಅಂತಹ ಉಪಾಧ್ಯಾಯರುಗಳಿರುವುದಿಲ್ಲವೋ ಅಂತಹ ದೇಶ ಸುಸಂಸ್ಕೃತದೇಶವಾಗುವುದಕ್ಕೆ ಅವಕಾಶವಿಲ್ಲ. ಆದ್ದರಿಂದ ಮುಖ್ಯವಾಗಿ ಪ್ರಾಥಮಿಕ ಶಾಲಾ ಉಪಾಧ್ಯಾಯರುಗಳ ವಿಚಾರದಲ್ಲಿ ಸರ್ಕಾರದವರು ಬಹಳ ಸಹಾನುಭೂತಿಯಿಂದ ವರ್ತಿಸಬೇಕಾದುದು ಅವರ ಪ್ರಥಮ ಕರ್ತವ್ಯ. ಆದರೆ ಉಪಾಧ್ಯಾಯರುಗಳು ಎಲ್ಲೋಆಗಲಿ ಅವರ ಕರ್ತವ್ಯವನ್ನು ಮೀರಿ ಕರ್ತವ್ಯಕ್ಕೆ ವಿರೋಧವಾಗಿ ಕೆಲಸಮಾಡುವ ನಿದರ್ಶನಗಳೇನಾದರೂ ಸರ್ಕಾರಕ್ಕೆ ಕಂಡು ಬಂದಾಗ್ಗೆ ಅವರ ಮೇಲೆ ಉಗ್ರಶಿಕ್ಷೆ ಮಾಡತಕ್ಕ ವ್ಯವಸ್ಥೆ ಮಾಡುವುದು ಬಹುಮುಖ್ಯ. ಏಕೆಂದರೆ ಇವತ್ತಿನ ದಿವಸ ಕೆಲವು ಉಪಾಧ್ಯಾಯರುಗಳು ಮತ್ತು ಇತರರು ಖಾಸಗೀ ಜನಗಳಿಂದ, ಸರ್ಕಾರದಿಂದ ಅಥವಾ ಅಮೇರಿಕಾ ದೇಶದಿಂದ ಶಾಲಾ ಮಕ್ಕಳಿಗೋಸ್ಕರ ಕೊಟ್ಟಂಥ ಹಾಲಿನ ಪುಡಿಯನ್ನು ಅಪಹಾಸ್ಯ ಮಾಡಿದಂಥ ನಿದರ್ಶನಗಳನ್ನು ನಾನು ಹಿಂದೆ ಆಯವ್ಯಯದ ಅಧಿವೇಶನದಲ್ಲಿ ಸರ್ಕಾರದ ಗಮನಕ್ಕೆ ತಂದಿದ್ದೇನೆ. ಎಲ್ಲಿ ಶಾಲಾ ಮಕ್ಕಳಿಗೋಸ್ಕರ ಕೊಟ್ಟಂಥ ಹಾಲಿನ ಪುಡಿಯನ್ನು ದುರುಪಯೋಗ ಮಾಡುತ್ತಾರೋ ಅಂತಹವರು ನಿಜವಾಗಿ ದೇಶ ದ್ರೋಹಿಗಳು. ಅಂತಹವರು ಎಲ್ಲೋ ಇರಲಿ ಅವರಿಗೆ ಸರ್ಕಾರದವರು ಉಗ್ರಶಿಕ್ಷೆಯನ್ನು ಕೊಡುವ ಕಾನೂನನ್ನು ಜಾರಿಗೆ ತರಬೇಕು. ಹೆಬ್ಬೂರ್ ಹೈಸ್ಕೂಲಿಗೆ ಸರಬರಾಜು ಮಾಡಿದ ನೂರಾರು ಡಬ್ಬಗಳ ಹಾಲಿನ ಪುಡಿಯನ್ನು ಆ ಸ್ಕೂಲಿನ ಒಬ್ಬ ಅಧ್ಯಕ್ಷರು ದುರುಪಯೋಗಪಡಿಸಿ ಅದರಿಂದ ಬಂದಂಥ ಹಣವನ್ನೆಲ್ಲಾ ಉಪಯೋಗಿಸಿದರೆ, ಈ ವಿಚಾರವನ್ನು ಹಿಂದೆಯೇ ಎಂಕ್ವೈರಿ ಮಾಡಿ ಎಂದು ಹೇಳಿದ್ದಾರೆ. ಇದು ಏಕೆಂದರೆ ಇವತ್ತು ಆ ಹೈಸ್ಕೂಲು ಇಲ್ಲಿ ಅಲ್ಲಿರುವವರ ಅನುಕೂಲಕೋಸ್ಕರ ಅಥವಾ ಒಂದು ಸುಖಭೋಗಕೋಸ್ಕರ ಸ್ಥಾಪನೆಯಾಗಿದೆ ಎಂದು ಕಾಣುತ್ತದೆ. ಇದರಿಂದ ಪ್ರಜೆಗಳಿಗೇ ಆಗಲೀ ವಿದ್ಯಾರ್ಥಿಗಳಿಗೇ ಆಗಲೀ ಏನೊಂದೂ ಪ್ರಯೋಜನವೂ ಆಗುತ್ತಿಲ್ಲ. ಇಂತಹ ಹೈಸ್ಕೂಲುಗಳು ಈಗ ದೇಶದಲ್ಲಿ ಬಹಳವಾಗಿವೆ. ಅಂತಹವರ ಬಗ್ಗೆ ಒಂದು ಉಗ್ರಶಿಕ್ಷೆ ಕೊಡುವ ಕ್ರಮವನ್ನು ಸರ್ಕಾರ ಅತಿಜಾಗ್ರತೆಯಾಗಿ ವ್ಯವಸ್ಥೆ ಮಾಡುವುದು ಮೊಟ್ಟಮೊದಲನೆಯ ಕರ್ತವ್ಯವೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಸ್ವಾಮಿ, ಇನ್ನೂರು ಮುನ್ನೂರು ಮಕ್ಕಳಿರುವ ಕೆಲವು ಪ್ರೈಮರಿ ಸ್ಕೂಲುಗಳನ್ನು ಅಪ್‌ಗ್ರೇಡ್ ಮಾಡಿ ಎಂದರೆ, ಹಣವಿಲ್ಲವೆಂದು ಹೇಳುತ್ತಿದ್ದಾರೆ. ಮಾಡಬೇಕಾದರೆ ಕೆಲವು ಷರತ್ತುಗಳನ್ನು ಹಾಕುತ್ತಿದ್ದಾರೆ. ಶ್ರೀಮಾನ್ ಗೋಪಾಲಗೌಡರು ಹೇಳಿದಹಾಗೆ ಕೆಲವುಕಡೆ ಷರತ್ತುಗಳು ಬಹಳ ಕಠಿಣವಾಗಿ ಕಷ್ಟವಾಗುತ್ತಿದೆ. ನದಿಗಳು ಇರುವ ಕಡೆ ಹತ್ತಿರದಲ್ಲಿ ಸ್ಕೂಲುಗಳಿದ್ದರೂ ಮಕ್ಕಳು ಆ ಸ್ಕೂಲುಗಳಿಗೆ ಹೋಗಲು ಕಷ್ಟವಿರುತ್ತದೆ. ಪ್ರವಾಹ ಕಾಲದಲ್ಲಿ ಬಹಳ ತೊಂದರೆಯಾಗುತ್ತದೆ. ಇಂಥ ನಿದರ್ಶನ ನಮ್ಮ ಕ್ಷೇತ್ರದಲ್ಲಿಯೂ ಇದೆ. ಹೀಗಿರುವಾಗ ಅಪ್‌ಗ್ರೇಡ್ ಮಾಡಿ ಎಂದು ಕೇಳಿದರೆ, ಷರತ್ತುಗಳನ್ನು ಸಡಿಲ ಮಾಡಬೇಕು. ಹೀಗೆ ಮಾಡಿದ ಹೊರತು ಆಡಳಿತ ಉತ್ತಮವಾಗುವುದಿಲ್ಲ.

ಶ್ರೀ ಎಸ್. ಆರ್. ಕಂಠಿ.—ಏನು ಮಾಡಬೇಕೆಂದು ಹೇಳಿ.

ಶ್ರೀ ಕೆ. ಲಕ್ಕಪ್ಪ.—ನೂರು ಹುಡುಗರು ಎಂಬತ್ತು ಹುಡುಗರು ಇರಬೇಕೆಂದು ಕಡ್ಡಾಯ ಮಾಡಿದ್ದಾರೆ, ಕಟ್ಟಡ ಕೊಡಬೇಕೆಂದು ಮಾಡಿದ್ದಾರೆ. ಸರ್ಕಾರಕ್ಕೆ ತೆರಿಗೆಯನ್ನು ಕೊಡುವವರು

ನಾವು, ನಮಗೆ ಸೌಕರ್ಯ ಕೊಡಿ ಎಂದು ಕೇಳುವ ಹಕ್ಕು ಪ್ರಜೆಗಳಿಗಿದೆ. ಅದನ್ನು ಕೊಡು ವುದಕ್ಕಾಗುವುದಿಲ್ಲವೆಂದು ಸರ್ಕಾರ ಹೇಳುವುದಕ್ಕಾಗುವುದಿಲ್ಲ. ತಮಗೆ ಇಷ್ಟ ಬಂದಹಾಗೆ ಷರತ್ತು ಗಳನ್ನು ಹಾಕುವುದಾದರೆ, ಪ್ರಜೆಗಳ ಹಿತದೃಷ್ಟಿಯಿಂದ ಸರ್ಕಾರ ಕೆಲಸ ಮಾಡುತ್ತಿಲ್ಲವೆಂಬುದು ವ್ಯಕ್ತವಾಗುತ್ತದೆ. ಅದಷ್ಟುಮಟ್ಟಿಗೆ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ವ್ಯಾಸಂಗ ಮಾಡುವ ದೃಷ್ಟಿಯಿಂದ ಅವರಿಗೆ ಸೌಕರ್ಯ ಕೊಡಲು ಷರತ್ತುಗಳನ್ನು ಸಡಿಲಗೊಳಿಸಬೇಕು. ಗ್ರಾಮಾಂತರ ಪ್ರದೇಶಗಳಿಗೆ ಹೆಚ್ಚು ಹಣವನ್ನೊದಗಿಸಬೇಕು. ದೊಡ್ಡ ಪಟ್ಟಣಗಳಲ್ಲಿ ಹೆಚ್ಚು ಶಾಲಾ ಕಟ್ಟಡಗಳನ್ನು ಕೊಟ್ಟಿದ್ದಾರೆ, ಹೆಚ್ಚು ಹಣ ಖರ್ಚು ಮಾಡಿದ್ದಾರೆ. ಸರ್ಕಾರದ ಯಂತ್ರ ಗ್ರಾಮಾಂತರ ಜನರಿಂದ ನಡೆಯುತ್ತದೆ. ಹೀಗಿರುವಾಗ ಗ್ರಾಮಾಂತರ ಪ್ರದೇಶದ ಜನರ ಮಕ್ಕಳ ವಿದ್ಯಾಭ್ಯಾಸಕ್ಕೆ ಹೆಚ್ಚು ಹೆಚ್ಚು ಹಣ ಮತ್ತು ಸೌಕರ್ಯವನ್ನು ಕಲ್ಪಿಸುವುದು ಅತ್ಯಗತ್ಯ. ಇದನ್ನು ಇದುವರೆಗೆ ಸರ್ಕಾರ ಕಾರ್ಯರೂಪಕ್ಕೆ ತಂದಿಲ್ಲ, ಪ್ರಶ್ನೆಯಾಗಿಯೇ ಉಳಿದಿದೆ.

ತಾಲ್ಲೂಕು ಬೋರ್ಡುಗಳಿಗೆ ವಹಿಸಿರುವ ಜವಾಬ್ದಾರಿ ಬಹಳ ಕಠಿಣವಾಗಿದೆ; ಕೊಡತಕ್ಕ ಹಣ ಬಹಳ ಅಲ್ಪ. ಅದರಿಂದ ಸ್ಕೂಲನ್ನು ನಡೆಸಲು ಸಾಧ್ಯವಿಲ್ಲ. ಗ್ರಾಮಾಂತರ ಪ್ರದೇಶದಲ್ಲಿ ಅನೇಕ ಕಡೆ ಶಾಲೆಯ ಕಟ್ಟಡದ ಗೋಡೆ ಕಟ್ಟಿಸಿ ಅಲ್ಲಿಗೇ ನಿಲ್ಲಿಸಿದ್ದಾರೆ, ಕಿಟಕಿ ಬಾಗಿಲುಗಳಿಲ್ಲದ ಕಟ್ಟಡಗಳಿವೆ, ದೇವಸ್ಥಾನಗಳಲ್ಲಿ ಸ್ಕೂಲುಗಳನ್ನು ನಡೆಸತಕ್ಕ ಸಂದರ್ಭಗಳಿವೆ. ಅನೇಕ ಸ್ಕೂಲುಗಳನ್ನು ನೋಡಿ ದರೆ ಅಲ್ಲಿನ ಹುಡುಗರ ಭವಿಷ್ಯವನ್ನೇ ಹಾಳುಮಾಡುತ್ತಿರುವ ನಿದರ್ಶನಗಳಿವೆ. ಹದಿನೈದು ವರ್ಷ ಗಳಾದರೂ ಊರಿಗೊಂದು ಸ್ಕೂಲು ಕಟ್ಟಡವಿಲ್ಲ, ಒಳ್ಳೆಯ ಸುಸಂಸ್ಕೃತ ಉಪಾಧ್ಯಾಯರನ್ನು ನೇಮಕ ಮಾಡಿಲ್ಲ. ಹೀಗಿರುವಾಗ ಈ ಸರ್ಕಾರದವರು ನಿಜವಾಗಿಯೂ ಸಮಾಜವಾದಿ ಸಮಾಜವನ್ನು ಜಾರಿಗೆ ತರುತ್ತಾರೆಯೆ ಎಂಬ ಶಂಕೆ ಬಂದಿದೆ. ನಮ್ಮ ದೇಶದ ಹಳ್ಳಿಗಳಲ್ಲಿ ಓದತಕ್ಕ ಮಕ್ಕಳ ಸಂಖ್ಯೆಗನುಗುಣವಾಗಿ ಎಲ್ಲ ಸೌಲಭ್ಯವನ್ನೂ ಒದಗಿಸುವ ಏರ್ಪಾಡನ್ನು ಶೀಘ್ರವಾಗಿ ಮಾಡ ಬೇಕಾದುದು ಸರ್ಕಾರದ ಕರ್ತವ್ಯ.

ಇನ್ನು ಉಪಾಧ್ಯಾಯರ ಮತ್ತು ಶಿಕ್ಷಣ ಅಧಿಕಾರಿಗಳ ವರ್ಗಾವರ್ಗಿ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ. ವರ್ಗಗಳ ವಿಚಾರದಲ್ಲಿ ಮಂತ್ರಿಗಳು ನೇರವಾಗಿ ಕೈಹಾಕುವುದು ನಿಲ್ಲಬೇಕು. ಆಡಳಿತ ದೃಷ್ಟಿಯಿಂದಲೂ ಸಾರ್ವಜನಿಕ ಹಿತದೃಷ್ಟಿ ಯಿಂದಲೂ ರಾಜಕೀಯ ಕೈವಾಡದಿಂದ ಇದು ದೂರವಿರಬೇಕು. ಕಾನೂನು ನಿಬಂಧನೆಗಳನ್ನು ಉಲ್ಲಂಘನೆ ಮಾಡಿ, ತಾವೇ ಹಾಕಿರತಕ್ಕ ನೀತಿಗೆ ತಿಲಾಂಜಲಿಯನ್ನು ಕೊಟ್ಟು ದುರುದ್ದೇಶಗಳನ್ನಿಟ್ಟು ಕೊಂಡು ನೇರವಾಗಿ ಒಳ್ಳೆಯ ಅಧಿಕಾರಿಗಳನ್ನು ಸಿಕ್ಕಾಪಟ್ಟೆ ವರ್ಗವರ್ಗಿ ಮಾಡುವ ವಿಚಾರವನ್ನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಸಚಿವರಿಗೇ ಗೊತ್ತಿದೆ, ತುಮಕೂರು ಜಿಲ್ಲೆಯಲ್ಲಿ ಒಂದು ಒಂದೂವರೆ ವರ್ಷದೊಳಗೆ ವಿದ್ಯಾಭ್ಯಾಸ ಅಧಿಕಾರಿಗಳನ್ನು ಸಾರ್ವಜನಿಕರಿಗೆ ತೊಂದರೆಯಾಗತಕ್ಕ ರೀತಿಯಲ್ಲಿ ವರ್ಗ ಮಾಡಿರುವ ನಿದರ್ಶನವಿದೆ. ಯಾವ ತಪ್ಪೂ ಇಲ್ಲದೆ ನೇರವಾಗಿ ಪ್ರವೇಶಿಸಿ ಅವರನ್ನು ಅಲ್ಲಿಂದ ವರ್ಗ ಮಾಡಿರುವುದು ಬಹಳ ತಪ್ಪು, ಅದನ್ನು ನಾನು ಉಗ್ರವಾಗಿ ಪ್ರತಿಭಟಿಸು ತ್ತೇನೆ. ಆರು ತಿಂಗಳಿಂದ ಏನೋ ರಾಜಕೀಯಕ್ಕೆ ಕಟ್ಟುಬಿದ್ದು, ಏನೋ ಉದ್ದೇಶವನ್ನಿಟ್ಟುಕೊಂಡು, ಎಲ್ಲಿ ಒಳ್ಳೆಯ ಅಧಿಕಾರಿಗಳು ಚೆನ್ನಾಗಿ ಕೆಲಸ ಮಾಡುತ್ತಿದ್ದರೋ, ಎಲ್ಲಿ ಗ್ರಾಮಾಂತರ ಪ್ರದೇಶಗಳ ವಿದ್ಯಾರ್ಥಿಗಳಿಗೆ ಸೌಕರ್ಯ ಮಾಡುತ್ತಿದ್ದರೋ ಅಂಥವರನ್ನು ದುರುದ್ದೇಶದಿಂದ ವರ್ಗ ಮಾಡಿರು ವುದು ಖಂಡನೀಯ ವಿಚಾರ. ಈ ವಿಚಾರದಲ್ಲಿ ಈ ಮಾನ್ಯ ಸಭೆಯ ಸುಮಾರು 60 ಮಂದಿ ಒಂದು ಮನವಿ ಕೊಟ್ಟಿದ್ದರೂ ಈ ಬಗ್ಗೆ ವಿಚಾರ ಮಾಡದೆ ಯಾವ ಉತ್ತರವನ್ನೂ ಕೊಡದೇಯಿರುವುದು ಈ ಸಭೆಗೆ ಗೌರವ ತರುವ ವಿಚಾರವಲ್ಲ. ಈ ಸಭೆಯನ್ನು ನಿಂದನೆ ಮಾಡಿದ ಹಾಗಾಗುತ್ತದೆ. ಇದನ್ನು ಸಾರ್ವಜನಿಕ ಹಿತದೃಷ್ಟಿಯಿಂದ ಹೇಳುತ್ತಿದ್ದೇನೆ.

ಶ್ರೀ ಎಸ್. ಆರ್. ಕಂಠಿ.—60 ಜನರಲ್ಲ, ಕೆಲವರು ವಿರೋಧಪಕ್ಷದ ಸದಸ್ಯರು ಕೊಟ್ಟಿದ್ದಾರೆ. ತಾವು ಇದರಲ್ಲಿ ಕೈಹಾಕಿ ಕೊಡಿಸಿದಿರಿ.

ಶ್ರೀ ಕೆ. ಲಕ್ಕಪ್ಪ.—ಈ ಸರ್ಕಾರ ರಾಜಕೀಯ ಮಾಡಿ ನೇರವಾಗಿ ಕೈಹಾಕುತ್ತಿರುವ ನಿದರ್ಶನ ವಿದೆ. ಇದರಿಂದ ಪ್ರಜಾಪ್ರಭುತ್ವ ತತ್ವದ ತಳಹದಿಗೇ ಪೆಟ್ಟು ಹಾಕಿದ್ದಾರೆಂದು ಹೇಳುತ್ತಿದ್ದೇನೆ. ಆರು ತಿಂಗಳಿಂದ ತುಮಕೂರು ಜಿಲ್ಲೆಯಲ್ಲಿ ಉಪಾಧ್ಯಾಯರ ಸ್ಥಿತಿಗತಿಗಳು ಕೆಟ್ಟಿವೆ, ಧಾರಾಕಾರ ವಾಗಿ ರಾಜಕೀಯ ಕೈವಾಡ ಅಲ್ಲಿ ನಡೆಯುತ್ತಿದೆ. ಯಾವ ಉಪಾಧ್ಯಾಯ ಚೆನ್ನಾಗಿ ಕೆಲಸ ಮಾಡಿದ್ದಾನೋ ಅವನನ್ನು ಬೇರೆ ಕಡೆ ಹಾಕಿದ್ದಾರೆ. ಪ್ರಾಥಮಿಕ ವಿದ್ಯಾಭ್ಯಾಸವನ್ನು ಸರಿಯಾಗಿ ಕಾರ್ಯಗತ ಮಾಡಬೇಕು, ಸುಸಂಸ್ಕೃತರಾದವರನ್ನು ದೇಶದಲ್ಲಿ ತಯಾರು ಮಾಡಬೇಕೆಂದು ಹೊರಟಿರುವಾಗ ಈ ರೀತಿ ಸಣ್ಣಸಣ್ಣ ಅಧಿಕಾರಿಗಳ ವರ್ಗದಲ್ಲಿ ಸರ್ಕಾರ ಕೈಹಾಕಿದರೆ ಎಷ್ಟು ಮಟ್ಟಿಗೆ ಸರಿಹೋಗುತ್ತದೆಂಬುದನ್ನು ಯೋಚಿಸಬೇಕು.

ಶ್ರೀ ಎಸ್. ಆರ್. ಕಂಠಿ.—ವರ್ಗಗಳ ವಿಚಾರದಲ್ಲಿ ಸರ್ಕಾರಕ್ಕೆ ಅಧಿಕಾರವಿದೆ; ಆದರೆ ಅದರಲ್ಲಿ ಕೈಹಾಕಿದುದು ನೀವು.

ಶ್ರೀ ಕೆ. ಲಕ್ಕಪ್ಪ.—ನಾವು ಕೈಹಾಕಿಲ್ಲ, ನೀವೇ ಹಾಕಿದ್ದೀರಿ ಎಂಬುದು ತುಮಕೂರಿಗೆಲ್ಲ ಗೊತ್ತಿದೆ. ಇದಕ್ಕೆ ಸಂಬಂಧಪಟ್ಟ ಕಾಗದಪತ್ರಗಳನ್ನು ಕೂಡ ಸಭೆಯ ಮುಂದೆ ಬೇಕಾದರೆ ಇಡುತ್ತೇನೆ. ನೀವು ಹೀಗೆಲ್ಲ ಮಾಡಬಾರದು.

ಶ್ರೀ ಎಸ್. ಆರ್. ಕಂಠಿ.—ನೀವು ಹಾಗೆ ಮಾಡಿರುವವರು, ಆ ರೀತಿ ಮಾಡಬಾರದು.

ಶ್ರೀ ಕೆ. ಲಕ್ಕಪ್ಪ.—ಸ್ವಾಮಿ, ತುಮಕೂರು ಡಿಸ್ಟ್ರಿಕ್ಟ್ ಎಜ್ಯುಕೇಷನಲ್ ಆಫೀಸರ ಕಚೇರಿಯಲ್ಲಿ ಅಲ್ಲಿನ ಅಧಿಕಾರ ವರ್ಗದಲ್ಲಿ ನಡೆಯತಕ್ಕ ರಾಜಕೀಯ ನಿಲ್ಲಬೇಕು, ಉಪಾಧ್ಯಾಯರು ಸರಿಯಾಗಿ ಕೆಲಸ ಮಾಡಬೇಕು. ರಾಜಕೀಯಕ್ಕೊಳಪಟ್ಟು ಪದೇಪದೇ ವರ್ಗವಾಗುತ್ತಿದ್ದರೆ ಸರಿಯಾಗಿ ಕೆಲಸ ಮಾಡಲು ಯಾರಿಗೆ ಮನಸ್ಸಿರುತ್ತದೆ?

ನಾನು ಈ ವಿಚಾರವನ್ನು ಏಕೆ ಹೇಳುತ್ತಿದ್ದೇನೆಂದರೆ, ಶಾಲೆಗಳು ಸರಿಯಾಗಿಲ್ಲ, ಕಟ್ಟಡಗಳು ಸರಿಯಾಗಿಲ್ಲ, ರಾಜ್ಯದಲ್ಲಿ ಇದನ್ನು ನಡೆಸತಕ್ಕ ಮಂತ್ರಿಗಳು ಸರಿಯಾದ ರೀತಿಯಲ್ಲಿ ನಿರ್ವಹಣೆ ಮಾಡುತ್ತ ಇಲ್ಲ. ಪ್ರಾಥಮಿಕ ಶಾಲಾ ಉಪಾಧ್ಯಾಯರ ಸ್ಥಿತಿ ಉತ್ತಮವಾಗಲಿಲ್ಲ, ಇವೊತ್ತಿನ ದಿವಸ ಕಟ್ಟಡಗಳಿಲ್ಲ, ಸಂಬಳವಿಲ್ಲ, ಉಪಾಧ್ಯಾಯರುಗಳಂತೂ ಸಾಕಷ್ಟಿಲ್ಲ. ಈ ರೀತಿಯಾಗತಕ್ಕ ವಿದ್ಯಾಭ್ಯಾಸ ಎಲ್ಲಿಯವರೆಗೆ ಒಳ್ಳೆಯ ಪ್ರಜೆಗಳನ್ನು ತಯಾರು ಮಾಡಬಹುದು ಎನ್ನುವುದನ್ನು ತಾವು ಯೋಚನೆ ಮಾಡಬೇಕಾಗಿದೆ.

ಸ್ವಾಮಿ, ಇಷ್ಟು ಮಾತನ್ನು ಹೇಳಿ ಶ್ರೀ ಮಾದಯ್ಯಗೌಡರು ತಂದಿರುವ ನಿರ್ಣಯವನ್ನು ಸಮರ್ಥಿಸುತ್ತ ಪ್ರಾಥಮಿಕ ಶಾಲೆಗಳ ಆಡಳಿತ ಮತ್ತು ಶಾಲಾ ಶಿಕ್ಷಕರ ಸ್ಥಿತಿಗತಿಗಳು ಉತ್ತಮವಾಗಬೇಕು, ಆಡಳಿತವನ್ನು ಸರಿಯಾದ ರೀತಿಯಲ್ಲಿ ನಡೆಸತಕ್ಕ ಅರ್ಹತೆಯುಳ್ಳ ಜನ ನೇಮಕವಾಗಬೇಕು ಎಂದು ಹೇಳುತ್ತೇನೆ. ಇದನ್ನು ಉತ್ತಮಪಡಿಸದೆ ಹೋದರೆ ನಮ್ಮ ದೇಶವು ಹಾಳಾಗಿ ಹೋಗುತ್ತದೆ, ಪ್ರಜಾಪ್ರಭುತ್ವವು ಕೂಡ ಉಳಿಯುವುದಿಲ್ಲ, ಇದನ್ನು ಎಲ್ಲಿಯವರೆಗೆ ಮಾಡುವುದಿಲ್ಲವೋ ಅಲ್ಲಿಯವರೆಗೂ ಶ್ರೀ ಗೋಪಾಲಗೌಡರು ಹೇಳಿದಹಾಗೆ ಚಳುವಳಿಯನ್ನು ಕೂಡ ಹೂಡಬೇಕಾಗುತ್ತದೆಂದು ಹೇಳಿ, ಅಧ್ಯಕ್ಷರು ನಾಲ್ಕು ಮಾತುಗಳನ್ನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ನಾನು ಅವರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

11 A.M.

† **Sri L. B. BIRJE** (Khanapur).—[*Spoke in Marathi.*]

† ಶ್ರೀ ಎಸ್. ಆರ್. ಕಂಠಿ (ವಿದ್ಯಾಶಾಖೆಯ ಮಂತ್ರಿಗಳು).—ನನ್ಮಾನ್ಯ ಅಧ್ಯಕ್ಷರೇ: ಈ ಗೊತ್ತುವಳಿಯ ಮೇಲೆ ಅನೇಕ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಕೆಲವರು ಕೆಲವು ಸಲಹೆಗಳನ್ನು ಸರ್ಕಾರಕ್ಕೆ ಕೊಟ್ಟಿದ್ದಾರೆ. ಕೆಲವರು ಕೆಲವು ಟೀಕೆಗಳನ್ನೂ ಮಾಡಿದ್ದಾರೆ. ಸಾಮಾನ್ಯವಾಗಿ ಎಲ್ಲ ಟೀಕೆಗಳಿಗೂ ಉತ್ತರ ಕೊಡುವುದಕ್ಕೆ ಆಗುವುದಿಲ್ಲ. ಕೆಲವು ಮಹತ್ವವಾದ ಟೀಕೆಗಳೇನಿವೆ ಅವುಗಳಿಗೆ ಮಾತ್ರ ನಾನೀಗ ಉತ್ತರವನ್ನು ಕೊಡಬೇಕೆಂದು ಮಾಡಿದ್ದೇನೆ. ಮುಖ್ಯವಾಗಿ ಮಾನ್ಯ ಸದಸ್ಯರುಗಳು ಕೇಳಿರತಕ್ಕ ಅಂಶಗಳೇನೆಂದರೆ:

No uniformity in primary education.
Compulsory education has not come into effect in the whole State.
No facilities to make it successful.
ಅಮೇಲೆ,
More schools to be opened and more teachers to be employed.
More lady teachers to be appointed.
More grant of Rs. 1,000 per room for school buildings.
More school and more buildings.
Conditions of teachers.
Uniform grant-in-aid code.

ಕಡೆಯಲ್ಲಿ ಟೆಕ್ಸ್ಟ್ ಬುಕ್ಕುಗಳು ಹಾಗು 'Mid day meal' ವಿಚಾರವನ್ನೂ ಹೇಳಿದ್ದಾರೆ. ನಮ್ಮ ರಾಜ್ಯದಲ್ಲಿ ಸಾಧಾರಣವಾಗಿ 25 ಸಾವಿರಕ್ಕಿಂತ ಸ್ವಲ್ಪ ಹೆಚ್ಚಿಗೆ ಗ್ರಾಮಗಳಿರುತ್ತವೆ. ಎಲ್ಲಾ ಊರುಗಳೂ, ಪಟ್ಟಣಗಳೂ ಸೇರಿ 25 ಸಾವಿರ ಚಿಲ್ಲರಕ್ಕೆ ಮೇಲಿರುತ್ತವೆ. ನಮ್ಮ ಇಡೀ ರಾಜ್ಯದ

ಲೆಕ್ಕ ಹಾಕಿದರೆ, ಈಗ 30 ಸಾವಿರ ಶಾಲೆಗಳಿರುತ್ತವೆ. ಸರ್ಕಾರದವರ ಇಚ್ಛೆ ಮೂರುನೂರು ಜನ ಸಂಖ್ಯೆ ಎಲ್ಲಿರುತ್ತದೆ, ಯಾವ ಗ್ರಾಮದಲ್ಲಿರುತ್ತದೆ, ಅಥವಾ ಎಷ್ಟು ಗ್ರಾಮಗಳನ್ನು ಒಂದು ಗ್ರೂಪ್ ಮಾಡಿದರೆ ಅಲ್ಲಿ ಮೂರುನೂರು ಜನಸಂಖ್ಯೆ ಆಗುತ್ತದೋ ಅಂಥ ಕಡೆಗಳಿಗೆಲ್ಲ ಒಂದೊಂದು ಪ್ರಾಥಮಿಕ ಶಾಲೆಯನ್ನು ಕೊಡಬೇಕು ಎಂಬುದಾಗಿದೆ. ಕೆಲವು ಕಾಲಾನಂತರ 250 ಜನಸಂಖ್ಯೆ ಇರತಕ್ಕ ಗ್ರಾಮಾಂತರ ಪ್ರದೇಶಗಳಿಗೆಲ್ಲ ಒಂದೊಂದು ಶಾಲೆಯನ್ನು ಕೊಡಬೇಕೆಂಬ ಅಭಿಲಾಷೆ ಕೂಡ ಇದೆ. ಈಗ ಎಲ್ಲೆಲ್ಲಿ 300 ಜನಸಂಖ್ಯೆಯಿರತಕ್ಕ ಗ್ರಾಮಗಳಿವೆಯೋ ಅಲ್ಲಿಗೆಲ್ಲ ಶಾಲೆಗಳನ್ನು ಕೊಡಲಾಗಿದೆ. ಆ ಶಾಲೆಗಳೆಲ್ಲ ಸರಿಯಾಗಿಯೇ ನಡೆಯುತ್ತಿವೆ ಎಂಬುದು ನನ್ನ ಭಾವನೆ. ಆದರೆ ಕೆಲವರು ನನ್ನಲ್ಲಿಗೆ ಬಂದು ಕೆಲವು ಶಾಲೆಗಳು ಸರಿಯಾಗಿ ನಡೆಯುತ್ತಿಲ್ಲ ಎನ್ನತಕ್ಕ ಮಾತನ್ನೂ ಹೇಳಿದ್ದಾರೆ. ಆದರೆ ನಾನು ಆ ಮಾತನ್ನು ಅಲ್ಲಗಳೆಯುವುದಿಲ್ಲ. 30 ಸಾವಿರ ಪ್ರಾಥಮಿಕ ಶಾಲೆಗಳೂ, 80 ಸಾವಿರ ಶಿಕ್ಷಕರೂ ಇದ್ದು ಇಂಥ ಒಂದು ದೊಡ್ಡ ರಾಜ್ಯದಲ್ಲಿ ಇಂಥ ಒಂದು ದೊಡ್ಡ ವ್ಯವಹಾರ ನಡೆಯುತ್ತಿರುವಾಗ ಕೆಲವು ಕಡೆ ಕೆಲವು ಅಕ್ರಮಗಳು ನಡೆಯುತ್ತಿರಬಹುದು. ಕೆಲವರು ಅಂಥಾದ್ದನ್ನು ತೋರಿಸಿದ್ದಾರೆ, ನಾನು ಅದನ್ನು ಕೂಡಲೆ ಸರಿಪಡಿಸಿರುತ್ತೇನೆ. ಅಂಥ ವಿಚಾರದಲ್ಲಿ ನಾನು ಮೇಲಿಂದ ಮೇಲೆ ಕಾರ್ಯಕ್ರಮ ಕೈಗೊಂಡಿರುತ್ತೇನೆ. ಕೆಲವರು ಕೆಲವು ಜಿಲ್ಲೆಗಳಲ್ಲಿ ನಡೆಯತಕ್ಕ ವಿಚಾರವನ್ನು ನನ್ನ ಗಮನಕ್ಕೆ ತಂದಿದ್ದರು. ನಾನು ಅದನ್ನು ಸರಿಪಡಿಸಲು ಕೂಡಲೆ ಕಾರ್ಯಕ್ರಮವನ್ನು ಕೈಗೊಂಡಿರುತ್ತೇನೆ.

11-30 A.M.

ಈಗ ನಾವು ಆರರಿಂದ ಹನ್ನೊಂದು ವರ್ಷ ವಯಸ್ಸಿನ ಮಕ್ಕಳಿಗೆ ಒತ್ತಾಯ ಶಿಕ್ಷಣವನ್ನು ಕೊಡುವ ಬಗ್ಗೆ ಒಂದು ಕಾರ್ಯಕ್ರಮವನ್ನು ಕೈಗೊಂಡಿದ್ದೇವೆ. ಐದನೇ ಪಂಚವಾರ್ಷಿಕ ಯೋಜನೆಯಲ್ಲಿ ಇದು ಸಂಪೂರ್ಣವಾಗಿ ಆಗಬೇಕಾಗಿದೆ. ಆದರೆ ಇದು ಹಂತ ಹಂತವಾಗಿ ಆಗುತ್ತಿದೆ. ಇದು ಮೊದಲಿಗೆ ಆರಂಭವಾದದ್ದು 1961ರಲ್ಲಿ. ಒತ್ತಾಯ ಶಿಕ್ಷಣ ಆರಂಭವಾಗಿ ಈಗ ಮೂರನೆಯ ವರ್ಷದಲ್ಲಿದ್ದೇವೆ. ಅಲ್ಲಿಂದ ಇಲ್ಲಿಯವರೆಗೆ 6 ರಿಂದ 7, 7ರಿಂದ 8, 8 ರಿಂದ 9 ಎಂದರೆ 1, 2 ಮತ್ತು 3ನೇ ವರ್ಗಗಳಲ್ಲಿ ವಿದ್ಯಾರ್ಥಿಗಳು ಒತ್ತಾಯವಾಗಿ ಹೋಗುತ್ತಿದ್ದಾರೆ. ಈ ರೀತಿ ಒತ್ತಾಯವನ್ನು ಮಾಡಿರುವ ಪರಿಣಾಮವಾಗಿ ಹಾಜರಿಯ ದಾಖಲಾತಿ ಬಗ್ಗೆ ನೋಡುವುದಾದರೆ ನೂರಕ್ಕೆ ತೊಂಬತ್ತು ಭಾಗದಷ್ಟು ವಿದ್ಯಾರ್ಥಿಗಳು ಹಾಜರಿ ದಾಖಲಾತಿಯಲ್ಲಿದ್ದಾರೆನ್ನುವುದು ಕಂಡು ಬರುತ್ತಿದೆ. ಇದರಲ್ಲಿ ಇನ್ನೊಂದು ವಿಶೇಷದ ಸಂಗತಿ ಎಂದರೆ ಹೆಣ್ಣುಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾಭ್ಯಾಸ ಪಡೆಯುತ್ತಿದ್ದಾರೆ. ಹೆಣ್ಣುಮಕ್ಕಳು ಮತ್ತು ಗಂಡು ಮಕ್ಕಳು ಇವರುಗಳ ಸರಾಸರಿಯನ್ನು ತೆಗೆದುಕೊಂಡು ನೋಡಿದರೆ ಹೆಚ್ಚುಕಡಮೆ ಇಬ್ಬರ ಸಂಖ್ಯೆಯೂ ಒಂದೇ ಸಮನಾಗಿರುತ್ತದೆ. ಬೇರೆ ರಾಜ್ಯಗಳಲ್ಲಿ ಹೆಣ್ಣುಮಕ್ಕಳ ಶಿಕ್ಷಣಕ್ಕೆ ಯಾವ ರೀತಿ ಉತ್ತೇಜನ ಇದೆಯೋ ಅದಕ್ಕಿಂತ ಹೆಚ್ಚು ಉತ್ತೇಜನ ನಮ್ಮ ಮೈಸೂರು ರಾಜ್ಯದಲ್ಲಿಯೂ ಕೊಡಲಾಗುತ್ತಿದೆ. ಎಲ್ಲ ರಾಜ್ಯಕ್ಕಿಂತ ನಮ್ಮ ರಾಜ್ಯದಲ್ಲೇ ಮೊದಲಿಗೆ ಹೆಣ್ಣುಮಕ್ಕಳ ಶಿಕ್ಷಣವನ್ನು ರೂಪಿಸಿದುದು. ನಮ್ಮ ರಾಜ್ಯದಲ್ಲಿ ಶಿಕ್ಷಣದ ಶೇಕಡವಾರು 25.4 ಎಂದು ಆಲ್ ಇಂಡಿಯಾ ಆವರೇಜಿನಿಂದ ಗೊತ್ತಾಗುತ್ತದೆ, ಎಂದರೆ ಇತರ ಕಡೆಗಿಂತ ಜಾಸ್ತಿ ಇದೆ ಎನ್ನುವುದು ಕಂಡು ಬರುತ್ತದೆ. ಆದರೆ ಸ್ಟೇಟು ಆವರೇಜು ತೆಗೆದುಕೊಂಡರೆ ನಮ್ಮ ರಾಜ್ಯಕ್ಕೆ ಏಳನೇ ನಂಬರು ಬರುತ್ತದೆ. ಹಾಗೇ ನಮ್ಮ ಮಾನ್ಯ ಸದಸ್ಯರಾದ ಶ್ರೀಮಾನ್ ಕೃಷ್ಣಶೆಟ್ಟರ ಕ್ಷೇತ್ರವಾದ ಸೌತ್ ಕ್ಯಾನರಾದಲ್ಲಿ ಲಿಟರೆಸಿ ಶೇಕಡಾ 33.3 ಇದೆ, ಧಾರವಾಡದಲ್ಲೂ ಕೂಡ ಅಷ್ಟೇ ಇದೆ, ಎರಡನೆಯದು ಕೊಡಗು, ಮೂರನೇಯದು ಕಾರವಾರ. ಹೈದರಾಬಾದು ಕರ್ನಾಟಕದ ಭಾಗಗಳಲ್ಲಿ ಹಿಂದುಳಿದಿವೆ. ಆದರೆ ಹಾಗೆ ಹಿಂದುಳಿದಿರುವುದನ್ನು ಒಂದೇ ದಿನದಲ್ಲಿ ಉತ್ತಮಪಡಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಅದನ್ನು ಮಾಡಲು ಪ್ರಯತ್ನ ಮಾಡಬೇಕು. ಹೈದರಾಬಾದಿನ ಬಿದರ್ ಭಾಗದಲ್ಲಿ 14.4 ಅಥವಾ 14.3 ಇದೆ ಆದರೆ ರಾಯಚೂರಿನಲ್ಲಿ ಸ್ವಲ್ಪ ಚೆನ್ನಾಗಿದೆ. ರಾಯಚೂರಿಗಿಂತ ಗುಲ್ಬರ್ಗಾದಲ್ಲಿ ಸ್ವಲ್ಪ ಕಡಿಮೆ ಇದೆ. ಬಿದರ್‌ನಲ್ಲಿ ಇದಕ್ಕಿಂತಲೂ ಕಡಮೆ ಇದೆ. ಇದನ್ನು ಸುಳ್ಳು ಎಂದು ಹೇಳುತ್ತಿಲ್ಲ. ಆದರೆ ನಮ್ಮಲ್ಲಿ ಕೆಲವರು ಮಾನ್ಯ ಸದಸ್ಯರು ಹೇಳಿದಂತೆ ಇಡೀ ರಾಜ್ಯದಲ್ಲಿ ಒತ್ತಾಯ ಶಿಕ್ಷಣ ಸರಿಯಾಗಿಲ್ಲ ಎನ್ನುವುದನ್ನು ನಾನು ಒಪ್ಪುವುದಿಲ್ಲ. ಅದು ಸುಳ್ಳು. ಸಂಪೂರ್ಣವಾಗಿ ಪ್ರೈಮರಿ ಎಜುಕೇಷನ್ನು ಒತ್ತಾಯ ಎಲ್ಲಾಕಡೆಯೂ ಇದೆ. ಆದರೆ ಪ್ರೈಮರಿ ಶಿಕ್ಷಣದ ಪದ್ಧತಿಯು ಬಗೆಗೆ ಎಲ್ಲಾ ಕಡೆಯಲ್ಲಿಯೂ ಒಂದೇ ರೀತಿಯಾಗಿಲ್ಲ ಎನ್ನುವುದನ್ನು ನಾನೂ ಒಪ್ಪುತ್ತೇನೆ. ಇಲ್ಲ ಎಂದು ಹೇಳುವುದಿಲ್ಲ. ಮುಂಬಯಿ ಕಡೆಯಿಂದ ಬಂದ ಭಾಗಗಳ ಪ್ರೈಮರಿ ಶಿಕ್ಷಣ ಪದ್ಧತಿ ಒಂದು ರೀತಿ ಇದೆ. ಮದರಾಸು ಕರ್ಣಾಟಕದ ಭಾಗದಿಂದ ಬಂದಿರುವ ಭಾಗಗಳ ಶಿಕ್ಷಣ ಪದ್ಧತಿ ಒಂದು ರೀತಿಯಾಗಿದೆ. ಕೊಡಗು ಭಾಗದಿಂದ ಬಂದಿರುವ ಭಾಗಗಳಲ್ಲಿ ಒಂದು ರೀತಿಯಾದ ಶಿಕ್ಷಣ ಪದ್ಧತಿ ಇದೆ. ಹಳೇ ಮೈಸೂರಿನ ಪದ್ಧತಿಯೇ ಬೇರೆ ರೀತಿಯಲ್ಲಿದೆ.

(ಶ್ರೀ ಎಸ್. ಆರ್. ಕಂಠಿ)

ಇವೆಲ್ಲವನ್ನೂ ಏಕೀಕೃತವಾಗಿ ಮಾಡಬೇಕೆಂದು ಸರಕಾರ ಬಹಳ ಜೋರಿನಿಂದ ಒತ್ತಾಯದ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ. ಇದರ ಬಗೆಗೆ ಒಂದು ಏಕೀಕೃತವಾದ ರೂಪದ ಬಿಲ್ಲನ್ನು ತರಬೇಕಾಗಿದೆ. ಇದಕ್ಕಾಗಿ ಸ್ಥಾನಿಕ ಸಂಸ್ಥೆಗಳವರ ಕಡೆಯಿಂದ ಒಂದು ಕಮಿಟಿ ಮಾಡಲಾಗಿತ್ತು. ಅವರ ವರದಿ ಈಗ ಸರಕಾರದ ಕಡೆಗೆ ಬಂದಿದೆ. ಅವನ್ನೂ ಪರಿಶೀಲನೆ ಮಾಡಲಾಗುತ್ತಿದೆ. ಹಾಗೇನೇ ಈಗ ಗ್ರಾಂಟು ಇನ್ ಏಡ್ ಕಾನೂನು ಕೂಡ ಬೇರೆ ಬೇರೆ ಭಾಗಗಳಲ್ಲಿ ಬೇರೆ ಬೇರೆ ರೀತಿಯಾಗಿವೆ. ಇವನ್ನೆಲ್ಲಾ ಒಂದುಗೂಡಿಸಿ ಏಕರೂಪವಾದ ಕಾನೂನು ತರಬೇಕೆಂದು ಸರಕಾರ ನಿರ್ಣಯವನ್ನು ಮಾಡಿದೆ. ಇದರ ಬಗ್ಗೆ ಇರುವ ನಿಯಮಗಳನ್ನೂ ಬದಲಾವಣೆ ಮಾಡಬೇಕೆಂದು ವಿಚಾರ ಮಾಡುತ್ತಿದ್ದೇವೆ. ಇದರ ಬಗ್ಗೆ ಡಿ.ಪಿ.ಐ. ಆಫೀಸಿನಲ್ಲಿ ಕೆಲಸಗಳೂ ನಡೆಯುತ್ತಿವೆ. ಆ ಆಫೀಸಿನಲ್ಲಿರುವ ಜನರನ್ನೂ ಕರೆಸಿ ಇದನ್ನು ಇನ್ನೂ ಕೂಲಂಕಷವಾಗಿ ವಿಚಾರ ಮಾಡಿ ಪ್ರೈಮರಿ ವಿಧ್ಯಾಭ್ಯಾಸದ ಪದ್ಧತಿಯನ್ನು ದೇಶದಲ್ಲಿ ಇನ್ನೂ ಉತ್ತಮಪಡಿಸಬೇಕೆಂಬ ಅಭಿಪ್ರಾಯ ಸರಕಾರಕ್ಕಿದೆ. ಆದುದರಿಂದ ನಮ್ಮ ಮೈಸೂರು ರಾಜ್ಯ ಇತರ ರಾಜ್ಯಗಳಿಗಿಂತ ಹಿಂದುಳಿದಿದೆ ಎನ್ನುವುದು ಸರಿಯಲ್ಲ. ಅಡ್ವಾನ್ಸ್ಡ್ ಸ್ಟೇಟುಗಳಲ್ಲಿ ನಮ್ಮ ರಾಜ್ಯ ಆರನೆಯದಾಗಿರುತ್ತದೆ. ಅಲ್ಲದೆ ನಮ್ಮ ಮೈಸೂರು ರಾಜ್ಯಕ್ಕೆ ಒಂದು ಒಳ್ಳೆಯ ಹೆಸರೂ ಇದೆ. ಆದಕಾರಣ ನಮ್ಮ ರಾಜ್ಯ ಹಿಂದುಳಿದಿದೆ ಎನ್ನುವುದನ್ನು ನಾನು ಒಪ್ಪಿಕೊಳ್ಳುವುದಿಲ್ಲ. ಇದಕ್ಕಾಗಿ ಜರೂರಾಗಿ ಮತ್ತು ಸಾಕಷ್ಟು ಶಿಕ್ಷಣವನ್ನು ಉತ್ತಮ ಮಾಡಬೇಕು ಎನ್ನುವ ವಿಚಾರವನ್ನು ನಾನೂ ಒಪ್ಪಿಕೊಳ್ಳುತ್ತೇನೆ. ಇದನ್ನು ನಾವು ಮಾಡೋಣ.

ಶ್ರೀ ಎಸ್. ಗೋಪಾಲ ಗೌಡ.—ಕುರುಡುಗಣ್ಣಿಗಿಂತ ಮೆಳ್ಳಗಣ್ಣೇ ಲೇಸು ಎನ್ನುವಂತೆ ನಮ್ಮ ವಿದ್ಯಾ ಮಂತ್ರಿಗಳು ಹೇಳುತ್ತಿದ್ದಾರೆ.

Mr CHAIRMAN.—The Hon'ble Minister has not yielded. The member may please resume his seat.

ಶ್ರೀ ಎಸ್. ಆರ್. ಕಂಠಿ.—ನಮ್ಮ ಮಾನ್ಯ ಸದಸ್ಯರು ತಮ್ಮ ಕಣ್ಣಿನಿಂದ ಸರಿಯಾಗಿ ನೋಡುತ್ತಿಲ್ಲ. ಏಕೆಂದರೆ ಅವರೂ ನಾವು ಸೇರಿಕೊಂಡು ಈ ಒತ್ತಾಯ ಶಿಕ್ಷಣವನ್ನು ಯಶಸ್ವಿಯಾಗುವಂತೆ ಮಾಡಬೇಕು. ಆ ದೃಷ್ಟಿಯಿಂದ ನಮ್ಮ ಮೈಸೂರು ರಾಜ್ಯ ಮೊದಲಿನಿಂದ ಯಾವ ರೀತಿ ತನ್ನ ಒಳ್ಳೆಯ ಹೆಸರನ್ನು ಉಳಿಸಿಕೊಂಡು ಬಂದಿದೆಯೋ ಅದನ್ನು ಉಳಿಸಿಕೊಂಡು ಬರಬೇಕು. ಸರಕಾರದವರೂ ಇದಕ್ಕಾಗಿ ಪ್ರಯತ್ನ ಮಾಡಬೇಕು, ಮಾನ್ಯ ಸದಸ್ಯರೂ ಪ್ರಯತ್ನ ಮಾಡಬೇಕು. ಇದೇ ಸಂದರ್ಭದಲ್ಲಿ ನಮ್ಮ ಶಿಕ್ಷಣದ ಬಗ್ಗೆ ಮಾನ್ಯ ಸದಸ್ಯರಾದ ಶ್ರೀಮಾನ್ ಗೋಪಾಲಗೌಡರು 'ಮಾರವಾಡಿ ಷರತ್ತು'ಗಳನ್ನು ಸರಕಾರ ಹಾಕುತ್ತಿದೆ ಎಂದು ಹೇಳಿದರು. ನಮ್ಮ ಒತ್ತಾಯ ಶಿಕ್ಷಣವನ್ನು ಪೂರ್ಣವಾಗಿ ಯಶಸ್ವಿಯಾಗುವಂತೆ ಮಾಡಬೇಕಾದರೆ ನಾವು ಯಾವ ರೀತಿಯಾದ ಕ್ರಮ ತೆಗೆದುಕೊಳ್ಳಬೇಕು, ಹಣವನ್ನು ಯಾವರೀತಿಯಾಗಿ ತೆಗೆದುಕೊಳ್ಳಬೇಕು ಎಂಬುದನ್ನು ವಿಚಾರಮಾಡಿ ಸಾರ್ವಜನಿಕರು ತಾವಾಗಿಯೇ ಮುಂದೆ ಬಂದು ಸಹಾಯ ಮಾಡಬೇಕೆಂದು ಕೇಳಿದ್ದೇವೆ, ಸ್ಥಾನಿಕ ಸಂಸ್ಥೆಗಳೂ ಮುಂದೆ ಬರಬೇಕು, ಮಾನ್ಯ ಸದಸ್ಯರೂ ಮುಂದೆ ಬರಬೇಕೆಂದು ನಾನು ಭಾವಿಸುತ್ತೇನೆ. ಇದನ್ನು ವಿಚಾರ ಮಾಡದೆ ಶ್ರೀಮಾನ್ ಗೋಪಾಲಗೌಡರು ಸುಮ್ಮನೆ 'ಮಾರವಾಡಿ ಷರತ್ತು' ಎಂದು ಹೇಳಿದರು. ಇದನ್ನು ವಿಚಾರ ಮಾಡಿದರೆ ಇದೆಷ್ಟು ಕಠಿಣದ ಕೆಲಸವೆನ್ನುವುದು ಕಾಣುತ್ತದೆ. ಅವರಿಗಾಗಿ ಒಂದೇ ಒಂದು ಉದಾಹರಣೆಯನ್ನು ಇಲ್ಲಿ ಕೊಡುತ್ತೇನೆ. ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ನಾವು ಸಾಧಾರಣವಾಗಿ ಹತ್ತು ಲಕ್ಷ ವಿದ್ಯಾರ್ಥಿಗಳು ಶಾಲೆಗೆ ಸೇರುತ್ತಾರೆ ಎಂದು ನಿರೀಕ್ಷೆ ಮಾಡಿದ್ದೆವು. ಆದರೆ ಅದು ಈಗ ಸುಳ್ಳು ಎನ್ನುವಂತೆ ಕಾಣಬರುತ್ತಿದೆ. ಸಾಧಾರಣವಾಗಿ ಮೂರನೆ ಪಂಚವಾರ್ಷಿಕ ಯೋಜನೆಯೊಳಗೆ ಸುಮಾರು ಹನ್ನೆರಡು ಲಕ್ಷ ವಿದ್ಯಾರ್ಥಿಗಳು ಒತ್ತಾಯ ಶಿಕ್ಷಣಕ್ಕೆ ಸೇರಬೇಕಾಗುತ್ತದೆ ಎನ್ನುವುದು ಇತ್ತೀಚೆಗೆ ಕಂಡುಬರುತ್ತಿದೆ. ಹೀಗೆ ಹತ್ತು ಲಕ್ಷ ವಿದ್ಯಾರ್ಥಿಗಳು ಸೇರುವಾಗ 40 ವಿದ್ಯಾರ್ಥಿಗಳಿಗೆ ಒಂದು ರೂಮು ಬೇಕಾಗುತ್ತದೆ ಎಂದು ಲೆಕ್ಕಾಚಾರ ಮಾಡಿದರೆ ಸುಮಾರು 25,000 ರೂಮುಗಳು ವಿದ್ಯಾರ್ಥಿಗಳಿಗಾಗಿ ಬೇಕಾಗುತ್ತವೆ. ಎಂದರೆ ಇದಕ್ಕಾಗಿ ಎಂಟು ಕೋಟಿ ರೂಪಾಯಿಗಳಷ್ಟನ್ನು ಖರ್ಚುಮಾಡಬೇಕಾಗಿ ಬರುತ್ತದೆ. ಈಗ ಸರಕಾರದವರು ಒಂದು ರೂಮಿಗಾಗಿ ಒಂದು ಸಾವಿರ ರೂಪಾಯಿಗಳಷ್ಟು ಸಹಾಯವಾಗಿ ಕೊಡಲು ಸುಮಾರು ಎರಡು ಕೋಟಿ ಐವತ್ತು ಲಕ್ಷ ರೂಪಾಯಿಗಳಷ್ಟು ಬೇಕಾಗುತ್ತವೆ. ಪಂಚವಾರ್ಷಿಕ ಯೋಜನೆಯಂತೆ ಒತ್ತಾಯ ಶಿಕ್ಷಣದಿಂದಾಗಿ ಸುಮಾರು 35 ಲಕ್ಷ ವಿದ್ಯಾರ್ಥಿಗಳು ಶಾಲೆಗೆ ಹೋಗಬೇಕಾಗಿ ಬರುತ್ತದೆ. ಇದಕ್ಕಾಗಿ ಸುಮಾರು 25 ರಿಂದ 30 ಕೋಟಿ ರೂಪಾಯಿಗಳಷ್ಟು ಹಣ ಸರಕಾರಕ್ಕೆ ಬೇಕಾಗುತ್ತದೆ. ಇಂತಹ ದೊಡ್ಡ ಜವಾಬುದಾರಿಯನ್ನು ಸರಕಾರ ಒಂದೇ ಹೇಗೆ ಹೊರಲು ಸಾಧ್ಯ ಎಂದು ಜನಗಳ ಮುಂದೆ ಸಹಾಯಕ್ಕಾಗಿ ಕೋರಿದಾಗ

ಜನರು ತಾವಾಗಿಯೇ ಮುಂದೆ ಬಂದು ಸಹಾಯ ಮಾಡುತ್ತಿದ್ದಾರೆ. ಹಿಂದೆ ಕ್ಲಾಸು ಎಜುಕೇಷನ್ ಎಂದಿತ್ತು. ಆದರೆ 'ಮಾಸ್ ಎಜುಕೇಷನ್' ಎಂದು ಈಗ ಮಾಡಬೇಕಾಗಿ ಬಂದಿದೆ. ಅದಕ್ಕಾಗಿ ಹಿಂದಿನಂಥ ಬಂದಿರುವ ಪದ್ಧತಿಗಳನ್ನು ಈಗ ಬದಲಾವಣೆ ಮಾಡಬೇಕಾಗಿ ಬಂದಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಷ್ಟೋ ಜನರು ತಾವಾಗಿಯೇ ಮುಂದೆ ಬಂದು ಶಾಲಾ ಕಟ್ಟಡಗಳನ್ನು ಕಟ್ಟಿಸಿಕೊಡುತ್ತಿದ್ದಾರೆ. ಅದರಲ್ಲಿಯೂ ಈಚೆಗೆ ಸರಕಾರದವರು ಹೇಳಿದ ಮೇಲೆ ಜನಗಳೇ ತಾವಾಗಿಯೇ ಮುಂದೆ ಬಂದು ಶಾಲಾ ಕಟ್ಟಡಗಳನ್ನು ಕಟ್ಟಲು ಸಹಾಯ ಮಾಡುತ್ತಿದ್ದಾರೆ. ಇದರ ಬಗೆಗೆ ಜನರ ಉತ್ಸಾಹ ಬಹಳ ಹೆಚ್ಚಾಗಿದೆ ಎನ್ನುವುದು ಕಂಡು ಬರುತ್ತಿದೆ.

ಇತ್ತೀಚೆಗೆ ಈ ಕೆಲಸ ಮಾಡಲು ಜನರು ಮುಂದೆ ಬರುತ್ತಿದ್ದಾರೆ. ಎಲ್ಲವನ್ನೂ ಸರಕಾರವೇ ಮಾಡಬೇಕು ಎಂದು ಹೇಳುವುದು ಸರಿಯಲ್ಲ. ಈಗ ಹಳೇ ಪಲ್ಲವಿಯನ್ನೇ ಹಾಡುವುದು ಸರಿಯಲ್ಲ. ಏಕೆಂದರೆ ಇದರಿಂದ ನಮ್ಮ ದೇಶದ ಪ್ರಗತಿಯಾಗುವುದಿಲ್ಲ.

ಇನ್ನು ಸ್ಕೂಲ್ ಕಟ್ಟಡದ ವಿಚಾರದಲ್ಲಿ ಒಂದು ಮಾತನ್ನು ಹೇಳಬೇಕಾಗಿದೆ. ಕಟ್ಟಡ ಕಟ್ಟಿಸುವ ವಿಚಾರದಲ್ಲಿ ಕೆಲವು ತಾಲ್ಲೂಕ ಬೋರ್ಡುಗಳು ಮುಂದೆ ಬಂದಿವೆ. ಜನರಿಂದ ಕಾಂಟ್ರಿಬ್ಯೂಷನ್ ತೆಗೆದುಕೊಂಡು ಈ ಕೆಲಸ ಮಾಡುತ್ತಿವೆ ಎಂದು ಈ ಮಾನ್ಯ ಸಭೆಯ ಗಮನಕ್ಕೆ ತರಲು ಇಚ್ಛಿಸುತ್ತೇನೆ. ಈಗಾಗಲೇ 200 ಪ್ರೈವೇಟ್ ಹೈಸ್ಕೂಲುಗಳನ್ನು ಜನರು ಪ್ರಾರಂಭಮಾಡಿದ್ದಾರೆ. ಇದನ್ನು ನೋಡಿ ನನಗೆ ಬಹಳ ಸಂತೋಷವಾಗುತ್ತದೆ. ಜನರಲ್ಲಿ ಇಂಥ ಶಕ್ತಿ ಇರುವುದು ಇಷ್ಟು ದಿನ ಗೊತ್ತಾಗದೆ ಇರುವುದು ದುಃಖವಾಗುತ್ತದೆ. ಯಾವ ತಯಾರಿಯಿಲ್ಲದೆ ಕಡ್ಡಾಯ ಶಿಕ್ಷಣ ಯೋಜನೆ ಪ್ರಾರಂಭ ಮಾಡಿದ್ದೇವೆಂದು ಶ್ರೀಮಾನ್ ಮಾದೇಗೌಡರು ಹೇಳಿರುವುದು ಸರಿಯಲ್ಲ. ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಸರಿಯಾದ ರೀತಿಯಲ್ಲಿ ತಯಾರಿ ಮಾಡಿ ಕಡ್ಡಾಯ ಶಿಕ್ಷಣ ಯೋಜನೆಯನ್ನು ತೆಗೆದುಕೊಂಡಿದ್ದೇವೆಂದು ನಾನು ಹೇಳುತ್ತೇನೆ. ಅವರು ಹೇಳುವ ಹಾಗೆ ಎಲ್ಲಾ ತಯಾರಿ ಮಾಡುವುದು ಯಾರಿಗೂ ಸಾಧ್ಯವಿಲ್ಲ. ಕಷ್ಟ ಬಂದರೆ ಅದನ್ನು ಹೇಗೆ ನಿವಾರಣೆ ಮಾಡಬೇಕು ಎಂಬುದನ್ನು ವಿಚಾರಮಾಡಬೇಕಾಗುತ್ತದೆ. ಸಧ್ಯಕ್ಕೆ ಮುಂದೆ ಹೆಜ್ಜೆ ಇಡೋಣ. ಬರುವ ಕಷ್ಟ ನಿವಾರಣೆ ಮಾಡೋಣ. ಈ ರೀತಿಮಾಡಿದರೆ ಪ್ರಗತಿ ಸಾಧಿಸಲು ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಪ್ರಳಯದ ಕಾಲದವರೆಗೂ ಸಾಧ್ಯವಾಗುವುದಿಲ್ಲ.

Sri T. MADIAH GOWDA (Ramanagaram).—No order shall be made in respect of any area unless the State Government is satisfied that necessary facilities have been provided in that area for imparting primary education to all children.

ಶ್ರೀ ಎಸ್. ಆರ್. ಕಂಠಿ.—ಸಾಮಾನ್ಯವಾಗಿ ಸಾಧ್ಯವಿರುವ ಎಲ್ಲ ತಯಾರಿ ಮಾಡಲಾಗಿದೆ. ಸ್ಕೂಲ್ ಕಟ್ಟಡ ಇದೆ, ಸಾಲೆಗೆ ಹೋಗುವ ಮಕ್ಕಳು ಇದ್ದಾರೆ. ಆದರೆ ಮಾನ್ಯ ಸದಸ್ಯರು ಹೇಳುವ ಹಾಗೆ ಮಾತ್ರ ಮಾಡಲು ಪ್ರಳಯ ಕಾಲದವರೆಗೆ ಸಾಧ್ಯವಾಗುವುದಿಲ್ಲ.

ಕಳೆದ ಹತ್ತು ವರ್ಷಗಳಲ್ಲಿ ಶಾಲೆಗೆ ಹೋಗುವ ಮಕ್ಕಳ ಸಂಖ್ಯೆ ಜಾಸ್ತಿಯಾಗಿದೆ. ಬರುವ ಹತ್ತು ವರ್ಷಗಳಲ್ಲಿ 70 ಲಕ್ಷ, 80 ಲಕ್ಷ ಸಂಖ್ಯೆಗೆ ಹೋಗಬಹುದು. ಹೀಗೆ ಆಗುವುದು ಸಂತೋಷದ ಸಂಗತಿ. ಈ ರೀತಿ ಭರದಿಂದ ಪ್ರಗತಿ ಕಂಡು ಬರುತ್ತಿರುವಾಗ್ಗೆ ಜನರು ಮುಂದೆ ಬಂದು ಸಹಾಯ ಮಾಡಬೇಕು. ಸ್ಕೂಲ್ ಬಿಲ್ಡಿಂಗ್ ಕಟ್ಟಿಸಬೇಕು. ಸರಕಾರ ಸಹ ಸ್ವಲ್ಪ ಹಣದ ಸಹಾಯ ಮಾಡುವುದು. ಸರಕಾರವೇ ಎಲ್ಲವನ್ನೂ ಮಾಡಬೇಕೆಂದು ಕೆಲವರು ಏನು ಹೇಳುತ್ತಾರೆಯೋ ಅಂಥವರಿಗೆ ನೀವೇ ಮಾಡಿ ಎಂದು ನಾನು ಹೇಳುತ್ತೇನೆ.

ಪಟ್ಟಣಗಳಲ್ಲಿ ಹೆಚ್ಚಾಗಿ ಸ್ಕೂಲುಗಳನ್ನು ಮಾಡುತ್ತೇವೆಂದು ಕೆಲವರು ಹೇಳಿದರು. ಆದರೆ ಆ ರೀತಿ ಮಾಡಿರುವುದಿಲ್ಲ. ಬೆಂಗಳೂರು ನಗರದಲ್ಲಿ ಪ್ರಾಥಮಿಕ ಶಾಲೆಗಳು ಹೇಗೆ ಇವೆ ಎನ್ನುವುದನ್ನು ನೀವು ಹೋಗಿ ನೋಡಬೇಕು. ಪಟ್ಟಣದಲ್ಲಿ ಶಾಲೆಗಳು ಬಾಡಿಗೆ ಮನೆಯಲ್ಲಿ ಇವೆ. ಲಕ್ಷಾಂತರ ರೂಪಾಯಿ ಬಾಡಿಗೆ ಕೊಡುತ್ತಿದ್ದೇವೆ. ಆದುದರಿಂದ ಗ್ರಾಮಾಂತರದಲ್ಲಿ ಕಟ್ಟಡಕ್ಕಾಗಿ ಖರ್ಚುಮಾಡದೆ ದೊಡ್ಡ ದೊಡ್ಡ ಪಟ್ಟಣದಲ್ಲಿ ಖರ್ಚು ಮಾಡುತ್ತೇವೆಂದು ಹೇಳುವುದು ಸರಿಯಾದುದಲ್ಲ. ಶ್ರೀಮಾನ್ ಗೋಪಾಲಗೌಡರು ಭಾಷಣ ಮಾಡಲು ವಿಜಾಪುರಕ್ಕೆ ಹೋಗುತ್ತಾರೆ. ಅತ್ತ ಕಡೆ ಹೋದಾಗ್ಗೆ ದಯವಿಟ್ಟು ಅವರು ವಿಜಾಪುರ, ಧಾರವಾಡ, ಬೆಳಗಾಂವಿ, ಕಾರವಾರ ಜಿಲ್ಲೆಗಳಲ್ಲಿ ಮೂಲೆ ಮೂಲೆಗಳಲ್ಲಿ ಶಾಲೆಗಳು ಹೇಗೆ ನಡೆದಿವೆ ಎಂಬುದನ್ನು ನೋಡಬೇಕೆಂದು ವಿಜ್ಞಾಪನೆ ಮಾಡಿಕೊಳ್ಳುತ್ತೇನೆ. ಬಹಳ ಕಡೆ ಶಾಲಾ ಕಟ್ಟಡಗಳಿವೆ. ಅವುಗಳನ್ನು ಯಾರು ಕಟ್ಟಿಸಿದರು ? ಸರ್ಕಾರ ಕಟ್ಟಿಸಿದ್ದಾರೆಯೇ ? ಇಲ್ಲ, ಜನರು ಮುಂದೆ ಬಂದು ಕಾಂಟ್ರಿಬ್ಯೂಷನ್ ಕೊಟ್ಟು ಕಟ್ಟಿಸಿದ್ದಾರೆ ? ಶಿರಹಟ್ಟಿ ತಾಲ್ಲೂಕಿನಲ್ಲಿ ತುಂಬಾ ಶಾಲೆಗಳು ಇವೆ. ಜನರು ಮುಂದೆ

(ಶ್ರೀ ಎಸ್. ಆರ್. ಕಂಠಿ)

ಬಂದು ಕೆಲಸ ಮಾಡಿದರೆ ಎಲ್ಲ ಕೆಲಸಗಳು ನಿಖರವಾಗಿ ಆಗುತ್ತವೆ. ಸರಕಾರದಿಂದ ಎಲ್ಲವೂ ಆಗುವುದಿಲ್ಲ. ಹಿಟ್ಟಿನಲ್ಲಿ ಸ್ವಲ್ಪ ಉಪ್ಪು ಬೆರಸಬಹುದು. ಆದರೆ ಹಾಲಿನಲ್ಲಿ ಮಾತ್ರ ಉಪ್ಪು ಬೆರಸಬೇಡಿ. ಹಾಲು ಕೆಟ್ಟು ಹೋಗುತ್ತದೆ. ಆದುದರಿಂದ ಇದಕ್ಕೆ ಮಾನ್ಯ ಸದಸ್ಯರೂ ಸಹ ಸಹಾಯ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಮಲೆನಾಡಿನ ಬಗ್ಗೆ ಕೆಲವು ತೊಂದರೆಗಳು ಇವೆ ಎಂದು ಕೆಲವರು ಹೇಳಿದರು. ಮಲೆನಾಡಿನಲ್ಲಿ ಮಳೆಯ ತೊಂದರೆ ಇದ್ದರೆ, ಮೈದಾನ ಪ್ರದೇಶವಾದ ವಿಜಾಪುರದಲ್ಲಿ ಬಿಸಿಲು ಬಹಳ ಇರುವುದರಿಂದ ತೊಂದರೆ ಇದೆ. ನೈಸರ್ಗಿಕವಾಗಿ ಇರುವುದನ್ನು ನಾವು ಎದುರಿಸಲೇ ಬೇಕಾಗುತ್ತದೆ. ಸೌತ್ ಕೆನರಾದಲ್ಲಿಯೂ ತುಂಬಾ ಮಳೆ ಬೀಳುತ್ತದೆ. ಆದರೆ ಅಲ್ಲಿ ಇಷ್ಟು ತೊಂದರೆ ಇದ್ದರೂ ಸಹ ಅಲ್ಲಿ ಶೇಕಡ 33.3 ಲಿಟರಸಿ ಹೇಗೆ ಆಯಿತು ? ಶಿವಮೊಗ್ಗಾ ಜಿಲ್ಲೆಯಲ್ಲಿ ಶೇಕಡ 28 ರಷ್ಟು ಲಿಟರಸಿ ಇದೆ. ಬೆಳಗಾಂನಲ್ಲಿ ಶೇಕಡ 27 ಹೇಗೆ ಆಯಿತು ? ಇದನ್ನು ವಿಹಂಗಮ ದೃಷ್ಟಿಯಿಂದ ನೋಡಿದರೆ ಒಂದು ಮಾತು ಗೊತ್ತಾಗುತ್ತದೆ. ಮಲೆನಾಡು ಪ್ರದೇಶದ ಜಿಲ್ಲೆಗಳಲ್ಲಿ ಲಿಟರಿಸಿ ಜಾಸ್ತಿ ಇದೆ. ಮೈದಾನ ಪ್ರದೇಶವಾದ ವಿಜಾಪುರ ಜಿಲ್ಲೆಯಲ್ಲಿ 24.4 ಇದೆ. ರಾಜ್ಯದ ಸರಾಸರಿಗಿಂತಲೂ ಕಡಮೆ ಇದೆ. ಕೋಲಾರ ತುಮಕೂರುಗಳಲ್ಲಿ ಶೇಕಡ 22 ರಷ್ಟು ಇದೆ. ಅಂದರೆ ಮೈದಾನ ಪ್ರದೇಶದಲ್ಲಿ ಲಿಟರಸಿ ಕಡಮೆ ಇದೆ ಎಂದು ಇದರಿಂದ ಗೊತ್ತಾಗುತ್ತದೆ. ಇದಕ್ಕೆ ಕಾರಣವೇನೆಂದರೆ ಮೈದಾನ ಪ್ರದೇಶದ ಜನರಿಗಿಂತಲೂ ಮಲೆನಾಡ ಪ್ರದೇಶದ ಜನರು ಇಂಡಸ್ಟ್ರಿಯಸ್ ಆಗಿದ್ದಾರೆಂದು ಕಂಡು ಬರುತ್ತದೆ. ಮಲೆನಾಡ ಪ್ರದೇಶದಲ್ಲಿ ತೊಂದರೆ ಇದ್ದರೂ ಸಹ ಜನರು ಉತ್ಸಾಹದಿಂದ ಮುಂದೆ ಬಂದು ಕಷ್ಟಪಟ್ಟು ದುಡಿದು ಕಲಿಯುತ್ತಾರೆ. ಇದು ಸಂತೋಷದ ವಿಚಾರ. ಯಾವ ಅನುಕೂಲತೆ ಇರದಿದ್ದರೂ ಜನರು ಕಲಿಯುತ್ತಾರೆ. ಮಲೆನಾಡಿನ ಜನ ಮುಂದುವರಿದಿದ್ದಾರೆ. ಶ್ರೀಮಾನ್ ಗೋಪಾಲಗೌಡರಿಗೆ ಶಿವಮೊಗ್ಗಾ ಜಿಲ್ಲೆಯನ್ನು ಸ್ವರ್ಗ ಮಾಡಲು ಸಾಧ್ಯವಿದೆ. ಅದಕ್ಕೆ ಅವರು ಮನಸ್ಸು ಮಾಡಬೇಕು. ಅವರ ಭಾಷಣದ ಸ್ವರ ಬೇರೆ ಮಾಡಿದರೆ ಅದು ಸಾಧ್ಯವಿದೆ. ಈ ಸಮಸ್ಯೆ ಅಷ್ಟು ಸುಲಭವಲ್ಲ. ಜನರು ದೇವಾಲಯ ಕಟ್ಟಿಸಲು ಯಾವ ರೀತಿ ಮುಂದೆ ಬರುತ್ತಾರೆಯೋ ಅದೇ ರೀತಿಯಾಗಿ ಮಾಡರ್ನ ದೇವಾಲಯ ಅಥವಾ ಆಧುನಿಕ ದೇವಾಲಯವಾಗಿರುವ ಶಾಲಾ ಕಟ್ಟಡವನ್ನು ಕಟ್ಟಿಸುವುದಕ್ಕೆ ಜನರು ಮುಂದೆ ಬರಬೇಕು, ಕೆಲಸ ಕೈಕೊಳ್ಳಬೇಕು. ಅಂದರೆ ನಮ್ಮ ದೇಶದ ಮಕ್ಕಳಿಗೆ ವಿದ್ಯಾಭ್ಯಾಸದ ಅನುಕೂಲ ಮಾಡಿಕೊಟ್ಟಂತಾಗುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ.

ಇನ್ನು ಬೆಟರ್‌ಮೆಂಟ್ ಕಮಿಟಿಯ ಸಂಬಂಧವಾಗಿ ಒಂದೆರಡು ಮಾತುಗಳನ್ನು ಕೆಲವರು ಪ್ರಸ್ತಾಪ ಮಾಡಿದ್ದಾರೆ. ಈ ಬೆಟರ್‌ಮೆಂಟ್ ಕಮಿಟಿಗಳು ನಮ್ಮ ರಾಜ್ಯದಲ್ಲಿ ಸರ್ವೇಸಾಧಾರಣವಾಗಿ ಚೆನ್ನಾಗಿ ನಡೆದಿವೆ. 1961-62ನೆಯ ಸಾಲಿನ ವಿಚಾರವನ್ನು ಹೇಳಬೇಕಾದರೆ 44 ಲಕ್ಷ ರೂಪಾಯಿಗಳವರೆಗೆ ಬೆಟೆರ್‌ಮೆಂಟ್ ಕಮಿಟಿಗಳು ದುಡ್ಡನ್ನೂ ಆಹಾರ ಧಾನ್ಯಗಳನ್ನೂ ಮತ್ತು ಉಳಿದ ಪದಾರ್ಥಗಳನ್ನೂ ಸಂಗ್ರಹಿಸಿವೆ. ಅವರು 1962-63ನೆಯ ಸಾಲಿನಲ್ಲಿ 66 ಲಕ್ಷ ರೂಪಾಯಿಗಳವರೆಗೂ ಸಂಗ್ರಹಿಸಿದ್ದಾರೆ. ತುರ್ತು ಪರಿಸ್ಥಿತಿ ಇಲ್ಲದೆ ಇದ್ದರೆ 1962-63ನೇ ಸಾಲಿನಲ್ಲಿ ಒಂದು ಕೋಟಿ ರೂಪಾಯಿಗಳವರೆಗೂ ಹೋಗುತ್ತಿತ್ತು. ಬೆಟರ್‌ಮೆಂಟ್ ಕಮಿಟಿಗಳು ಇನ್ನೂ ಚೆನ್ನಾಗಿ ಕೆಲಸ ಮಾಡುವುದಕ್ಕೆ ಸಾಧ್ಯವಿತ್ತು. ಶಿಕ್ಷಕರು ಸರಿಯಾಗಿ ಶಾಲೆಗೆ ಹೋಗುತ್ತಾರೆಯೇ ಇಲ್ಲವೇ, ಮಕ್ಕಳು ಸರಿಯಾಗಿ ಶಾಲೆಗೆ ಹೋಗುತ್ತಾರೆಯೇ ಅಥವಾ ಇಲ್ಲವೆ ಎಂಬುದನ್ನು ನೋಡಿಕೊಳ್ಳುವುದಕ್ಕೆ ಬೆಟರ್‌ಮೆಂಟ್ ಕಮಿಟಿಗಳನ್ನು ನೇಮಿಸಿದ್ದೇವೆ. ಬೆಟರ್‌ಮೆಂಟ್ ಕಮಿಟಿಗಳು ಚೆನ್ನಾಗಿ ಕೆಲಸ ಮಾಡಿದರೆ ಬಹಳ ರೀತಿಯಿಂದ ನಮಗೆ ಸಹಾಯವಾಗುತ್ತದೆ.

ಆಮೇಲೆ ಮಧ್ಯಾಹ್ನದ ಉಪಾಹಾರದ ವಿಷಯವನ್ನು ಕೆಲವು ಮಾನ್ಯ ಸದಸ್ಯರು ಹೇಳಿದರು. ಆ ವಿಷಯದಲ್ಲಿ ಸ್ವಲ್ಪ ಅನಾಹುತ ನಡೆಯುತ್ತಿದೆ. ಈ ಮಧ್ಯಾಹ್ನದ ಉಪಾಹಾರಕ್ಕೆ ಸರ್ಕಾರದವರು ಇಷ್ಟು ಹಣ ಎಂದು ಕೊಡುತ್ತಾರೆ, ಅದರ ಜೊತೆಗೆ ಜನಗಳು ಇಷ್ಟು ಹಣ ಎಂದು ಕೊಡುತ್ತಾರೆ. ಈ ಮಧ್ಯಾಹ್ನದ ಉಪಾಹಾರಕ್ಕೆ ಕೇಂದ್ರ ಸರ್ಕಾರದವರು ಹಣವನ್ನು ಕೊಡುತ್ತಾರೆ. ಆ ಹಣವನ್ನು ಸರ್ಕಾರದವರು ಅದಕ್ಕಾಗಿ ಖರ್ಚುಮಾಡುತ್ತಾರೆ. ಅದರ ಜೊತೆಗೆ ಸ್ವಲ್ಪ ಪ್ರಮಾಣದಲ್ಲಿ ಲೋಕಲ್ ಜನಗಳೂ ಸಹ ಸಹಾಯ ಮಾಡಿದರೆ ಅದನ್ನು ಚೆನ್ನಾಗಿ ದೊಡ್ಡ ಪ್ರಮಾಣದಲ್ಲಿ ನಡೆಸಬಹುದು. ಅದಕ್ಕೋಸ್ಕರ ಎರಡು ಕೋಟಿ ರೂಪಾಯಿಗಳ ಆಹಾರ ಧಾನ್ಯಗಳನ್ನು ಒದಗಿಸಿ ಅದನ್ನು ಗ್ರಾಮಾಂತರ ಪ್ರದೇಶದಲ್ಲಿ ಹಂಚಬೇಕೆಂದು ಮಾಡಿದ್ದೇವೆ. ಅದರಲ್ಲಿ ಅನಾಹುತ ಆಗದ ಹಾಗೆ ನೋಡಿಕೊಳ್ಳುತ್ತೇವೆ. ಮಾನ್ಯ ಸದಸ್ಯರು ಸರ್ಕಾರಕ್ಕೆ ಬರೀ ಸಲಹೆಗಳನ್ನು ಮಾಡಿದರೆ ಆಗುವುದಿಲ್ಲ. ಆದರೂ ಸಹ ಸ್ವಲ್ಪ ಆ ಕಡೆಗೆ ಗಮನ ಕೊಡಬೇಕು. ತಾಲ್ಲೂಕು ಬೋರ್ಡಿನ ಸದಸ್ಯರು ಮತ್ತು ಆ

ಊರಿನ ಜನಗಳು ಆ ಕಡೆ ಗಮನ ಕೊಟ್ಟರೆ ಇಂಥಾ ಅನಾಹುತಗಳು ಕಡಮೆಯಾಗುತ್ತವೆ. ಕೆಲವು ಕಡೆ ಅನಾಹುತಗಳು ಆದಾಗ ಅವರನ್ನು ಹಿಡಿದು ಶಿಕ್ಷೆ ಮಾಡಿದರೆ ಅದರಿಂದ ಅನುಕೂಲವಾಗುತ್ತದೆ. ಅದಕ್ಕೋಸ್ಕರ ಅಂಥಾ ಅನಾಹುತಗಳಾಗಿ ಅದರಲ್ಲಿ ತಪ್ಪು ಮಾಡಿದವರಿಗೆ ಶಿಕ್ಷೆ ಮಾಡುವಂಥಾ ಒಂದು ಕಾನೂನನ್ನು ಸಹ ಈಗ ಮಾಡಿದ್ದೇವೆ.

ಇನ್ನು ಶ್ರೀಮಾನ್ ಬಿರ್ಜೆಯವರು ಕೆಲವು ಮಾತುಗಳನ್ನು ಹೇಳಿದರು. ಅವರು ಮೊದಲು ಶಾಲೆಯಲ್ಲಿ ಶಿಕ್ಷಕರಾಗಿದ್ದು ಈಗ ನಿವೃತ್ತಿಯಾಗಿದ್ದಾರೆ, ಅವರಿಗೆ ಶಾಲೆಯ ವಿಷಯಗಳೆಲ್ಲಾ ಗೊತ್ತು. ಅವರು ಮಕ್ಕಳಿಗೆ ಸರಿಯಾಗಿ ಶಿಕ್ಷಣವನ್ನು ಸರಿಯಾಗಿ ನೀಡಿ ಎಂದು ಹೇಳಿದರೆ ನಾನು ಒಪ್ಪಿಕೊಳ್ಳುತ್ತೇನೆ. ಈಗ ಉಪಾಧ್ಯಾಯರಿಗೆ ಹೆಚ್ಚಿನ ಸಲವತ್ತುಗಳು ಸಿಕ್ಕಲಿ, ಅವರಿಗೆ ಕಲ್ಯಾಣವಾಗಲಿ ಎಂದು ಸಹಾಯ ಮಾಡುತ್ತಿದ್ದೇವೆ. 1961ನೆಯ ಇಸವಿಯಲ್ಲಿ ಪೇ ರಿವೈಜ್ ಮಾಡಿದೆವು. ಮೊನ್ನೆ ತಾನೆ ತುಟ್ಟಿ ಭತ್ಯವನ್ನು ಜಾಸ್ತಿ ಮಾಡಿದ್ದೇವೆ ಟ್ರಿಪಲ್ ಬೆನಿಫಿಟ್ ಸ್ಕೀಮು ಮೊನ್ನೆತಾನೆ ಆಗಿದೆ. ಕೇಂದ್ರ ಸರ್ಕಾರದವರು ಟೀಚರ್ಸ್ ವೆಲ್‌ಫೇರ್‌ಫಂಡ್ ಎಂದು ಮಾಡುತ್ತಿದ್ದಾರೆ. ನಾವೂ ಕೂಡ ಸರ್ಕಾರದ ವತಿಯಿಂದ ಟೀಚರ್ಸ್ ಬೆನಿಫಿಟ್‌ಫಂಡ್ ಎಂದು ಮಾಡುತ್ತಿದ್ದೇವೆ. ನಾನು ನಿನ್ನೆ ದಿವಸ ತಾನೆ ಅದನ್ನು ನೋಡಿದೆ. ಆ ಬಗ್ಗೆ ಈಗಾಗಲೇ 60 ಸಾವಿರ ರೂಪಾಯಿಗಳವರೆಗೂ ಕೊಡಿದೆ. ಇನ್ನೂ ಕೊಡುತ್ತಾ ಇದೆ. ಅದಕ್ಕೆ ಒಂದು ನಿಯಮಾವಳಿಯನ್ನು ಮಾಡಿದ್ದೇವೆ, ಈಗ ದುಡ್ಡು ಕೊಡುತ್ತಾ ಇದೆ. ಇನ್ನೊಂದು ವರ್ಷದಲ್ಲಿ ಒಂದು ಲಕ್ಷ ರೂಪಾಯಿ ಕೊಡುವುದಕ್ಕೆ ಸಾಧ್ಯವಿದೆ. ಅದರಿಂದ ಯಾರು ಕಷ್ಟದಲ್ಲಿ ಇದ್ದಾರೋ ಅವರಿಗೆ ಅದನ್ನು ಕೊಡುವುದಕ್ಕೆ, ಸಹಾಯ ಮಾಡುವುದಕ್ಕೆ ಅವಕಾಶವಾಗುತ್ತದೆ.

ಆಮೇಲೆ ಸ್ಕೂಲ್ ಬೋರ್ಡಿನ ವಿಷಯವನ್ನು ಹೇಳಿದರು. ಸ್ಕೂಲ್ ಬೋರ್ಡು ರೀಆರ್ಗನೈಜ್ ಆಗಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಧಾರವಾಡದಲ್ಲಿ ಆಗಿದೆ. ಕಾರವಾರದಲ್ಲಿ ಆಗುತ್ತಾ ಇದೆ. ಬಿಜಾಪುರದಲ್ಲಿ ಆಗುತ್ತಾ ಇದೆ. ಮಾನ್ಯ ಸದಸ್ಯರಾದ ಬಿರ್ಜೆಯವರು ಬೆಳಗಾಮಿನ ಮೇಲೆ ಕೋಪ ಇಟ್ಟುಕೊಂಡು ಸ್ಕೂಲ್ ಬೋರ್ಡು ರೀ ಆರ್ಗನೈಜ್ ಆಗಿಲ್ಲ ಎಂದು ಹೇಳಿದರೆ ಹೇಗೆ? ಧಾರವಾಡದ ಸ್ಕೂಲ್‌ಬೋರ್ಡ್ ನಿಮಗಿಂತ ಮುಂಚೆ ರೀ ಆರ್ಗನೈಜ್ ಆಗಿದೆ. ಅದರಲ್ಲಿ ಎಂ. ಇ. ಎಸ್. ಜನಗಳನ್ನು ಸೇರಿಸಿಕೊಂಡಿಲ್ಲ ಎಂದು ಹೇಳಿದರು. ಅದಕ್ಕೆ ಜನಗಳನ್ನು ಸೇರಿಸಿಕೊಳ್ಳುವಾಗ ಎಂ. ಇ. ಎಸ್. ಮತ್ತು ನಾನ್ ಎಂ. ಇ. ಎಸ್. ಎಂದು ನಾವು ಅದರಲ್ಲಿ ಜನಗಳನ್ನು ಸೇರಿಸಿಕೊಂಡಿಲ್ಲ. ಅದರಲ್ಲಿ ನಾನ್ ಕಾಂಗ್ರೆಸ್ ಜನಗಳೂ ಇದ್ದಾರೆ. ಮಾನ್ಯ ಸದಸ್ಯರು ತಿಳಿದುಕೊಂಡಿರುವುದು ತಪ್ಪು.

ಆಮೇಲೆ ಅವರು ಹೆಣ್ಣು ಮಕ್ಕಳು ಹೆಚ್ಚಿನ ಶಿಕ್ಷಕರಾಗುವುದಕ್ಕೆ ಅನುಕೂಲಮಾಡಿ ಕೊಡಬೇಕೆಂದು ಸೂಚನೆ ಮಾಡಿದ್ದಾರೆ. ಆ ವಿಷಯದಲ್ಲಿ ಸರ್ಕಾರದವರು ಏನು ಮಾಡಿದ್ದಾರೆಂದರೆ ಹೆಣ್ಣು ಮಕ್ಕಳಿಗೆ ಎಸ್. ಎಸ್. ಎಲ್. ಸಿ. ಪಾಸು ಆಗದಿದ್ದರೂ ಚಿಂತಿಯಿಲ್ಲ, ಎಲ್. ಎಸ್. ಮತ್ತು ಪಿ. ಎಸ್. ಸಿ. ಆಗಿದ್ದರೂ ಕೂಡ ಅವರಿಗೆ ನೌಕರಿ ಕೊಡಬಹುದೆಂದು ಅನುಕೂಲಮಾಡಿ ಕೊಟ್ಟಿದ್ದೇವೆ. ಅವರಿಗೆ ಎರಡು ವರ್ಷ ಟ್ರೈನಿಂಗ್ ಕೊಡುತ್ತಿದ್ದೇವೆ. ನಾನ್ ಎಸ್. ಎಸ್ ಎಲ್. ಸಿ. ಯವರಿಗೆ ಎರಡು ವರ್ಷ ಟ್ರೈನಿಂಗ್ ಇಲ್ಲದೆ ಹೋದರೆ ಅವರನ್ನು ಯಾವರೀತಿ ನೇಮಕ ಮಾಡಿಕೊಳ್ಳಬೇಕೆಂಬ ವಿಷಯವನ್ನು ವಿಚಾರ ಮಾಡಿದ್ದೇವೆ. ಮೊದಲನೆಯದು ಎಸ್. ಎಸ್. ಎಲ್. ಸಿ. ಟ್ರೈನ್ಡ್, ಎರಡನೆಯದು ಎಸ್. ಎಸ್. ಎಲ್. ಸಿ. ನಾನ್ ಟ್ರೇನ್ಡ್, Third, Now S. S. L. C. Trained before a certain day ಎಂದು ಮಾಡಿದ್ದೇವೆ. ಎರಡು ವರ್ಷ ಅವರು ಕಲಿತುಕೊಂಡು ನಮಗೆ ನೌಕರಿ ಕೊಡಿ ಎಂದು ಬರಬಾರದು ಎಂದು before that date ತೆಗೆದು ಕೊಳ್ಳುತ್ತೇವೆಂದು ಹೇಳಿದ್ದೇವೆ.

ಶ್ರೀ ಸಿದ್ದಯ್ಯ ಕಾಶೀಮಠ (ಶಿರಹಟ್ಟಿ).—1954ನೇ ಇಸವಿಯಲ್ಲಿ ಟೆಂಪರರಿಯಾಗಿ ಕೆಲಸಕ್ಕೆ ಸೇರಿ ಈಗ ಅವರಿಗೆ ಟ್ರೇನಿಂಗು ಆಗಿದ್ದರೆ ಅವರಿಗೆ ಯಾವ ನಿಯಮವನ್ನು ಅನ್ವಯಿಸುತ್ತೀರಿ?

ಶ್ರೀ ಎಸ್. ಆರ್. ಕಂಠಿ.—ಅವರನ್ನು ತೆಗೆಯುವುದಕ್ಕೆ ಆಗುವುದಿಲ್ಲ. ಅವರನ್ನು ರೀಎಂಪ್ಲಾಯ್ ಮಾಡಿಕೊಳ್ಳಬೇಕು. ಅಂಥವರು ಯಾರು ಯಾರು ಇದ್ದಾರೋ ಅವರ ಹೆಸರನ್ನು ಕೊಟ್ಟರೆ ಅದನ್ನು ನಾನು ನೋಡುತ್ತೇನೆ. ಬೆಳಗಾಮಿನಲ್ಲಿ ಎರಡು ಸಂಘಗಳಿವೆ. ಸಮಿತಿ ಮತ್ತು ಕುಂದರನಾಡು ಎಂದು ಎರಡು ಸಂಸ್ಥೆಗಳು. ಅವರು ಬಹಳ ಶಾಲೆಗಳನ್ನು ನಡೆಸುತ್ತಿದ್ದಾರೆ. ಈ ದಿವಸ ಅವುಗಳನ್ನು ನಾವು ತೆಗೆದುಕೊಳ್ಳುವುದಿಲ್ಲ. ಕೆಲವು ಪ್ರೈವೇಟ್ ಪ್ರೈಮರಿ ಶಾಲೆಗಳನ್ನು ಉತ್ತರ ಕರ್ನಾಟಕದಲ್ಲಿ ನಡೆಸುತ್ತಿದ್ದಾರೆ. ಅವುಗಳನ್ನು ಸರ್ಕಾರಕ್ಕೆ ತೆಗೆದುಕೊಳ್ಳುವುದಕ್ಕೆ ಒಂದು ಕ್ರಮವನ್ನು ಮಾಡಿದ್ದೇವೆ. ಆ ಪ್ರಕಾರ ಅವುಗಳನ್ನು ತೆಗೆದುಕೊಳ್ಳುತ್ತೇವೆ. ಕುಂದರನಾಡು ಸಂಘದವರು ನಡೆಸುತ್ತಿರುವ ಶಾಲೆಗಳು ಧಾರವಾಡ, ಬಿಜಾಪುರ ಮತ್ತು ಕಾರವಾರ ಜಿಲ್ಲೆಗಳಲ್ಲಿದ್ದರೆ ಅವುಗಳನ್ನು ಕ್ರಮವಾಗಿ ಸರ್ಕಾರಕ್ಕೆ ತೆಗೆದುಕೊಳ್ಳಬೇಕೆಂದು ಮಾಡಿದ್ದೇವೆ. ಆದುರಿಂದ ಶ್ರೀಮಾನ್ ಬಿರ್ಜೆಯವರು ಹೇಳಿದಂತಹ ಮಾತಿನಲ್ಲಿ ಅಷ್ಟು ಸತ್ಯವಿಲ್ಲ. ನಾವು ಯಾವ ತರಹ ಅನ್ಯಾಯವನ್ನೂ ಮಾಡಿಲ್ಲ ಎಂದು ನಾನು ಹೇಳುತ್ತೇನೆ.

ಶ್ರೀ ಎಸ್. ಗೋಪಾಲಗೌಡ.—ಕೆಲವು ಪ್ರಾಥಮಿಕ ಶಾಲೆಗಳಲ್ಲಿ 4-5 ವರ್ಷ ಕೆಲಸ ಮಾಡಿದ ಉಪಾಧ್ಯಾಯರನ್ನು ನಿವೃತ್ತಿ ಮಾಡಿ ಕಳುಹಿಸಿದ್ದಾರೆ ಅದಕ್ಕೆ ಕಾರಣವೇನು ?

ಶ್ರೀ ಎಸ್. ಆರ್. ಕಂಠಿ.—ಅವರು ಲೋಕಲ್ ಕ್ಯಾಂಡಿಡೇಟ್ಸ್ ಇರಬೇಕು. ಯಾವಾಗ ರೆಗ್ಯುಲರ್ ಕ್ಯಾಂಡಿಡೇಟ್ಸ್ ಬರುತ್ತಾರೆಯೋ ಆಗ ಲೋಕಲ್ ಕ್ಯಾಂಡಿಡೇಟ್ಸನ್ನು ನಿವೃತ್ತಿ ಮಾಡ ಬೇಕಾಗುತ್ತದೆ. ಅವರು ಡಿವಿಜನಲ್ ರೆಕ್ರೂಟ್‌ಮೆಂಟ್ ಕಮಿಟಿಯ ಮುಂದೆ ಹೋಗಿ ಆರಿಸಿ ಬರಬೇಕು.

ಅಮೇಲೆ ಶ್ರೀಮಾನ್ ಬಿರ್ಜೆಯವರು ಟೆಕ್ಸ್ಟ್ ಬುಕ್ಕುಗಳ ವಿಚಾರವನ್ನು ಹೇಳಿದರು. ಅದಕ್ಕಾಗಿ ಸರ್ಕಾರದವರು ಟೆಕ್ಸ್ಟ್ ಬುಕ್ಕುಗಳನ್ನು ರಾಷ್ಟ್ರೀಕರಣ ಮಾಡುತ್ತಿದ್ದಾರೆ. ಶ್ರೀಮಾನ್ ಗೋಪಾಲ ಗೌಡರು ಹೇಳಿದರು, ಪಠ್ಯ ಪುಸ್ತಕಗಳನ್ನು ರಾಷ್ಟ್ರೀಕರಣ ಮಾಡಿರುವುದು ಲೋಪದೋಷದಿಂದ ಕೂಡಿದೆ, ಪಠ್ಯ ಪುಸ್ತಕಗಳಲ್ಲಿ ರಾಜಕೀಯ ವಿಚಾರಗಳನ್ನು ಹಾಕಿದ್ದಾರೆಂದು, ಅದು ಸರಿಯಿಲ್ಲ. ರಾಜಕೀಯ ವಿಚಾರಗಳನ್ನು ಅದರಲ್ಲಿ ಹಾಕುವುದಕ್ಕೆ ಬರುವುದಿಲ್ಲ. ಅದರಲ್ಲಿ ಲೋಪದೋಷ ಬರುವು ದಿಲ್ಲ. ಪಠ್ಯ ಪುಸ್ತಕಗಳನ್ನು ಬರೆಯುವುದಕ್ಕೆ ಸಿಲಬಸ್ ಇದೆ. ಆ ಸಿಲಬಸ್ ಪ್ರಕಾರ ಸಬ್‌ಜೆಕ್ಟ್‌ಗಳು ಯಾವು ಯಾವುದು ಬರಬೇಕೋ ಅವುಗಳನ್ನು ಬರೆಸಿ ಹಾಕುತ್ತೇವೆ, ಪಠ್ಯ ಪುಸ್ತಕಗಳಲ್ಲಿ ರಾಜ ಕೀಯ ಇದ್ದರೆ ಲೋಪದೋಷಗಳಿದ್ದರೆ ಅದನ್ನು ಶ್ರೀಮಾನ್ ಗೋಪಾಲಗೌಡರು ನನ್ನ ಗಮನಕ್ಕೆ ತಂದರೆ ಅದನ್ನು ನಾನು ಸರಿಪಡಿಸುತ್ತೇನೆ.

ಈಗ ಅನೇಕ ಜನರು ಪಠ್ಯ ಪುಸ್ತಕಗಳನ್ನು ಬರೆಯುತ್ತಿದ್ದಾರೆ. ಇಪ್ಪತ್ತು ಕಡೆ ಇಪ್ಪತ್ತು ಬೇರೆ ಬೇರೆ ಸೋಷಿಯಲ್ ಸೈನ್ಸ್ ಪುಸ್ತಕಗಳು ಈಗ ನಿಗದಿಮಾಡಲ್ಪಟ್ಟಿವೆ. ಅದರಿಂದ ಬಹಳ ವೆಚ್ಚ ಆಗುತ್ತದೆ ಮತ್ತು ಸ್ವಲ್ಪ ತೊಂದರೆಯಿದೆ. ಆದುದರಿಂದ ಅದನ್ನು ತಪ್ಪಿಸಲು ಒಂದು ಮಾಸ್ಟರ್ ಪ್ಲಾನ್ ಪ್ರಕಾರ ಪಠ್ಯ ಪುಸ್ತಕಗಳನ್ನು ನ್ಯಾಷನಲೈಸ್ ಮಾಡುತ್ತಿದ್ದೇವೆ. ಈ ವರ್ಷ 107 ಪುಸ್ತಕಗಳನ್ನು ನ್ಯಾಷನಲೈಸ್ ಮಾಡಿದ್ದೇವೆ ; ಹಿಂದೆ 55 ಪುಸ್ತಕಗಳನ್ನು ನ್ಯಾಷನಲೈಸ್ ಮಾಡಿದ್ದೆವು. ಇದೆಲ್ಲಾ ಸೇರಿ 162 ಪುಸ್ತಕಗಳಾಗುತ್ತವೆ. ಮುಂದಿನ ವರ್ಷ ಎಲ್ಲಾ ನ್ಯಾಷನಲೈಸ್ ಆಗುತ್ತದೆ. ಶ್ರೀಮಾನ್ ಗೋಪಾಲಗೌಡರಿಗಿರುವ ಭಯ ಸರಿಯಲ್ಲ. ನಮ್ಮ ಮೇಲೆ ಅವರು ವಿಶ್ವಾಸವಿಡ ಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

12-00 NOON.

ಇನ್ನು ಅಟೆಂಡೆನ್ಸ್ ಆಫೀಸರ ವಿಚಾರವಾಗಿ ಒಂದು ಮಾತು. ಅವರನ್ನು ನಾವು ನೇಮಕ ಮಾಡಿಲ್ಲ ಎಂದು ಆಕ್ಷೇಪಿಸಿದ್ದಾರೆ. ನಾವು ಡೆಪ್ಯುಟಿ ಅಟೆಂಡೆನ್ಸ್ ಆಫೀಸರನ್ನು ನೇಮಿಸಿದ್ದೇವೆ. ಅವ ರಿಂದ ಸರಿಯಾಗಿ ಕೆಲಸ ನಡೆಯುತ್ತಿದೆಯೆ ಎಂಬುದನ್ನು ಕಾದು ನೋಡಬೇಕಾಗಿದೆ. ಅವರಿಗೆ ಬಹಳ ಕೆಲಸವಿದೆ, ಅವರು ಈ ಕೆಲಸವನ್ನು ನೋಡಿಕೊಳ್ಳುವುದಕ್ಕಾಗುವುದಿಲ್ಲ ಎಂದು ಬಿರ್ಜೆಯವರು ಹೇಳಿದರು ಈ ವರ್ಷ ಪ್ರಯೋಗಿಕವಾಗಿ ಅವ್ಯವಸ್ಥೆ ಮಾಡಿದ್ದಾರೆ. ಅದರ ಅನುಕೂಲ ಅನನು ಕೂಲಗಳನ್ನು ಕೆಲವು ಕಾಲ ನೋಡಲಿ ನಂತರ ಬೇಕಾದರೆ ಬೇರೆ ವ್ಯವಸ್ಥೆ ಮಾಡೋಣ. ಕೆಲವು ಶಬ್ದಗಳ ಉಪಯೋಗದಿಂದ ಅನಾಹುತವಾಗುತ್ತಿದೆ ಎಂದು ಕೆಲವು ಟೀಕೆಗಳು ಬಂದುವು. ನಾವು ಸಾಕಷ್ಟು ಕ್ರಮ ಕೈಕೊಳ್ಳುತ್ತಿದ್ದೇವೆ. ಸುಮ್ಮನೆ ಆರೋಪಿಸಲು ಟೀಕೆ ಮಾಡಬಾರದು.

ಹುಡುಗರ ವಿಚಾರವಾಗಿ ಹೇಳಬೇಕಾದರೆ ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಒತ್ತಾಯ ಶಿಕ್ಷಣವನ್ನು ಜಾರಿಗೆ ತಂದ ಮೇಲೆ ಎರಡು ವರ್ಷಗಳಲ್ಲಿ 5 ಲಕ್ಷ ವಿದ್ಯಾರ್ಥಿಗಳು ಶಾಲೆಗೆ ಸೇರಿದರು. ಅದು 1961-62 ಕ್ಕೆ ಸಂಬಂಧಪಟ್ಟಿದೆ. ಈ ವರ್ಷ ಸುಮಾರು 2 ಲಕ್ಷ ಹೊಸದಾಗಿ ಶಾಲೆಗೆ ಹೋಗುತ್ತಿದ್ದಾರೆ. ಶಿಕ್ಷಕರು ಈ ವರ್ಷ 5 ಸಾವಿರ ಮಂದಿ ಬೇಕಾಗಿತ್ತು. ಆದರೆ ಬಡ್ಜೆಟ್ ಪ್ರಕಾರ ಅವಕಾಶವಿರುವುದು ಒಂದು ಸಾವಿರ ಮಂದಿಗೆ ಮಾತ್ರ. ಅದಕ್ಕಾಗಿ ಕೇಂದ್ರ ಸರ್ಕಾರದ ನೆರವನ್ನು ಕೇಳಿದ್ದೇವೆ. ಅದು ಬಂದಮೇಲೆ 1 : 40 ಪ್ರಮಾಣದಲ್ಲಿ ನೇಮಕವಾಗಬೇಕಾಗಿದೆ. ನಮ್ಮ ರಾಜ್ಯದಲ್ಲಿ ಸರಾಸರಿ 1 : 40 ಈಗ ಇದೆ; ಒಬ್ಬ ಶಿಕ್ಷಕ 40 ವಿದ್ಯಾರ್ಥಿಗಳನ್ನು ನೋಡಿ ಕೊಳ್ಳುತ್ತಿದ್ದಾನೆ. ಈ ವರ್ಷ ಬಂದಿರುವ 2 ಲಕ್ಷ ವಿದ್ಯಾರ್ಥಿಗಳಿಗಾಗಿ ಹೆಚ್ಚಿನ ಶಿಕ್ಷಕರನ್ನು ತೆಗೆದು ಕೊಳ್ಳಬೇಕಾಗಿದೆ. ಕೇಂದ್ರ ಸರ್ಕಾರದಿಂದ ಜವಾಬು ಬಂದಮೇಲೆ ಮುಂದಿನ ಕ್ರಮ ಕೈಕೊಳ್ಳ ಬೇಕಾಗುತ್ತದೆ. ಕೆಲವು ಕಡೆ ಒಬ್ಬರೇ ಉಪಾಧ್ಯಾಯರು 3-4 ತರಗತಿಗಳನ್ನು ನೋಡಿಕೊಳ್ಳ ಬೇಕಾಗಿದೆ ಎಂದು ಆರೋಪಿಸಿದರು. ಹಾಗೆ ಕೆಲವು ಕಡೆ ಇರಬಹುದು. ಸರ್ಕಾರದವರು ಈಗ ಪ್ರಯೋಗಾರ್ಥವಾಗಿ ಹಾಗೆ ಮಾಡಿದ್ದಾರೆ. ಮೊನ್ನೆ ಒಂದು ಸೆಮಿನಾರ್ ಆಯಿತು. ಸಿಂಗಲ್ ಟೀಚರ್ ಸ್ಕೂಲುಗಳು 2 ಸಾವಿರಕ್ಕೆ ಕಡಮೆಯಿಲ್ಲದಂತೆ ಇವೆ. ಕಾರವಾರ, ದಕ್ಷಿಣ ಕನ್ನಡ, ಮಲೆ ನಾಡು ಪ್ರದೇಶ ಮುಂತಾದ ಕಡೆಗಳಲ್ಲಿ ಅವುಗಳ ಅವಶ್ಯಕತೆ ಇದೆ. ಅಲ್ಲಿ ಯಾವರೀತಿ ನಡೆಯುತ್ತದೆ ಎಂಬುದನ್ನು ಕಾದು ನೋಡುತ್ತಿದ್ದೇವೆ.

ಶ್ರೀಮಾನ್ ಮಾದೇಗೌಡರು ಆಡಳಿತ ವಿಚಾರ ಪ್ರಸ್ತಾಪಿಸಿ ಸ್ವಲ್ಪ ಸರಿಯಾಗಿಲ್ಲವೆಂದು ಹೇಳಿದರು. ಅದೇಕೆ ಹಾಗೆ ಹೇಳಿದರೋ ತಿಳಿಯದು. ತಮಗೆ ಗೊತ್ತಿರುವ ಹಾಗೆ ಮೈಸೂರು ರಾಜ್ಯದಲ್ಲಿ 5 ಡಿವಿಜನ್ನುಗಳಿವೆ. ಜಿಲ್ಲೆಗಳಲ್ಲಿ ಡಿ. ಇ. ಒ. ಇರುತ್ತಾರೆ, ಡಿವಿಜನನಲ್ಲಿ ಡಿ. ಡಿ. ಪಿ.ಐ. ಇರುತ್ತಾರೆ. ಪ್ರತಿಯೊಂದು ತಾಲ್ಲೂಕಿನಲ್ಲೂ ಒಂದೊಂದು ರೇಂಜನ್ನು ಮಾಡಿದ್ದೇವೆ. ಅಲ್ಲಿ ಒಬ್ಬ ಇನ್‌ಸ್ಪೆಕ್ಟರ ಕೈಕೆಳಗೆ ಒಬ್ಬ ಡೆಪ್ಯುಟಿ ಇನ್‌ಸ್ಪೆಕ್ಟರಿದ್ದಾರೆ. 150 ಉಪಾಧ್ಯಾಯರಿಗೊಬ್ಬ ಡೆಪ್ಯುಟಿ ಇನ್‌ಸ್ಪೆಕ್ಟರು ಇರುತ್ತಾರೆ. 1-10-1962 ರಿಂದ ಸಿಬ್ಬಂದಿ ಹೆಚ್ಚಿಸಿದ್ದೇವೆ. ಹೋದ ವರ್ಷ ತೆಗೆದುಕೊಂಡ ಹೊಸ ನಿರ್ಣಯದ ಪ್ರಕಾರ ಸೂಪರ್‌ವಿಷನ್ ಕೆಲಸ ಚೆನ್ನಾಗಿ ನಡೆಯುತ್ತಿದೆ. ಈಗ ಶಿಕ್ಷಣ ವಿಸ್ತಾರವಾಗುತ್ತಿರುವುದರಿಂದ ಈಗಿರುವ ಸಿಬ್ಬಂದಿ ಕಡಮೆಯೆಂದು ಕಾಣುತ್ತದೆ. ಶಿಕ್ಷಣದಷ್ಟು ವೇಗವಾಗಿ ನಡೆಯುವುದು ಯಾವುದೂ ಇರುವಂತೆ ಕಾಣುವುದಿಲ್ಲ. ವರ್ಷಕ್ಕೆ 2–3 ಲಕ್ಷದ ಪ್ರಕಾರ ಹುಡುಗರು ಶಾಲೆಗೆ ಹೆಚ್ಚಾಗಿ ಸೇರಿದರೆ ಸ್ವಲ್ಪ ಕಷ್ಟವಾಗುತ್ತದೆ. ಈಗ ಎಲ್ಲ ವಿಷಯಗಳಿಗೂ ಉತ್ತರ ಕೊಡುವುದಕ್ಕಾಗುವುದಿಲ್ಲ. ಆದುದರಿಂದ ಕೆಲವು ವಿಚಾರಗಳನ್ನು ಮಾತ್ರ ಹೇಳಿದ್ದೇನೆ.

ಶ್ರೀ ಎಸ್. ಗೋಪಾಲ ಗೌಡ.—ಹಳೇ ಮೈಸೂರಿನಲ್ಲಿ ಪ್ರೈಮರಿ 8ನೆ ಶಾಲೆಯ ಮಕ್ಕಳ ವಿಚಾರ ಹೈಕೋರ್ಟಿಗೆ ಹೋಗಿದೆ. ಆ ತರಗತಿಯಲದ್ದ ಎಲ್ಲ ಮಕ್ಕಳನ್ನು ಪ್ರೌಢಶಾಲೆಗೆ ಸೇರಿಸಿಕೊಳ್ಳಬೇಕೆಂದು ಕೇಳುತ್ತಿದ್ದೇನೆ. ದಯಮಾಡಿ ಹಾಗೆ ಮಾಡಿ. ಅದರಿಂದ ಆಕಾಶವೇನೂ ಕಳಚಿ ಬೀಳುವುದಿಲ್ಲ.

ಶ್ರೀ ಎಸ್. ಆರ್. ಕಂಠಿ.—ನನಗೆ ಎಲ್ಲಾ ಒಂದೇ ; ಹಳೇ ಮೈಸೂರು, ಹೊಸ ಮೈಸೂರು ಎಲ್ಲಾ ಒಂದೇ. ಆ ಬಗ್ಗೆ ನಿನ್ನೆ ಗವರ್ನಮೆಂಟ್ ಆರ್ಡರಾಗಿದೆ. ಅದರ ಪ್ರಕಾರ 8ನೆಯ ತರಗತಿಯಲ್ಲಿ ಫೈಲ್ ಆದವರಿಗೆ ಪರೀಕ್ಷೆ ನಡೆಸಿ ಹೈಸ್ಕೂಲಿಗೆ ಹಾಕಬೇಕೆಂದು ಸೂಚಿಸಲಾಗಿದೆ.

ಶ್ರೀ ಸಿದ್ದಯ್ಯ ಕಾಶೀಮಠ.—ಶಾಲೆಗಳಲ್ಲಿ ಈಗ ಮಕ್ಕಳು ಕಸಗುಡಿಸುವುದು, ಸಾರಿಸುವುದು ಮುಂತಾದ ಕೆಲಸವನ್ನೆಲ್ಲಾ ಮಾಡಬೇಕಾಗಿದೆ. ಅದು ಬಹಳ ಚಿಂತಾಜನಕವಾಗಿದೆ. ಅದನ್ನು ತಪ್ಪಿಸಲು ಪ್ರಯತ್ನ ಇದೆಯೇ ?

ಶ್ರೀ ಎಸ್. ಆರ್. ಕಂಠಿ.—ಅದನ್ನು ಎಲ್ಲಾ ಕಡೆಯೂ ಮಾಡಬೇಕೆಂಬ ವಿಚಾರವಿದೆ. ಶಾಲೆಯನ್ನು ಅವರು ಚೆನ್ನಾಗಿಡಬೇಕು.

ಶ್ರೀ ಎಚ್. ಆರ್. ಕೇಶವಮೂರ್ತಿ (ಗಂಡಸಿ).—300-400 ಜನರು ಎಸ್. ಎಲ್. ಸಿ. ಪಾಸು ಮಾಡದೆ ಟಿ. ಸಿ. ಟ್ರೈನಿಂಗ್ ಮಾಡಿಕೊಂಡು ಕೆಲಸಕಾರ್ಯವಿಲ್ಲದೆ ತೊಂದರೆ ಪಡುತ್ತಿದ್ದಾರೆ. ಅವರ ಬಗ್ಗೆ ಸಹಾನುಭೂತಿ ತೋರಿಸಿ ಅವರನ್ನು ಉಪಾಧ್ಯಾಯರಾಗಿ ನೇಮಿಸಿಕೊಳ್ಳುತ್ತೀರಾ ?

ಶ್ರೀ ಎಸ್. ಆರ್. ಕಂಠಿ.—ಆಗಲೇ ಹೇಳಿದೆ. ಒಂದು ತಾರೀಖು ನಿಗದಿಮಾಡಿ ಅದರ ಹಿಂದೆ ಟಿ. ಸಿ. ಟ್ರೈನಿಂಗ್ ಆಗಿರುವವರನ್ನು ತೆಗೆದುಕೊಳ್ಳಬೇಕೆಂದು ತಿಳಿಸಿದ್ದೇವೆ. ಆದರೆ ಒಂದು ವಿಚಾರ. ಈಗ ಪ್ರಾಥಮಿಕ ಶಾಲೆಗಳಲ್ಲಿ 5, 6, 7 ನೆಯ ತರಗತಿಗಳಲ್ಲಿ ಇಂಗ್ಲೀಷ್ ಕಲಿಸುತ್ತಿದ್ದೇವೆ. ಆದುದರಿಂದ ಟಿ. ಸಿ. ಟ್ರೈನಿಂಗ್ ಆದವರಿಗೆ ಇಂಗ್ಲೀಷ್ ಬಾರದಿದ್ದರೆ ಮುಂದೆ ತೆಗೆದುಕೊಳ್ಳಬಾರದೆಂದು ಹೇಳಿದ್ದೇವೆ.

ಶ್ರೀಮತಿ ರತ್ನಮ್ಮ ಮಾಧವರಾವ್ (ಶಿವಮೊಗ್ಗ).—ಎಲ್. ಎಸ್. ಆದ ಒಬ್ಬ ಹೆಣ್ಣುಮಗಳನ್ನೂ ಟ್ರೇನಿಂಗಿಗೆ ತೆಗೆದುಕೊಂಡಿಲ್ಲ, ಇನ್ನು ಮುಂದಾದರು ಅವರ ಟ್ರೇನಿಂಗಿಗೆ ವ್ಯವಸ್ಥೆ ಮಾಡುತ್ತೀರ ?

ಶ್ರೀ ಎಸ್. ಆರ್. ಕಂಠಿ.—ಎಲ್. ಎಸ್. ಆದವರನ್ನು ಟ್ರೇನಿಂಗಿಗೆ ಸೆಲೆಕ್ಟ್ ಮಾಡಿದೆ.

† ಶ್ರೀ ಟಿ. ಮಾದಯ್ಯಗೌಡ (ರಾಮನಗರ).—ಸ್ವಾಮಿ, ಈ ಸಭೆಯ ಮುಂದೆ ಇಟ್ಟಿರತಕ್ಕಂಥ ನಿರ್ಣಯ ಎರಡು ದಿವಸ ವಿಫಲವಾಗಿ ಚರ್ಚೆಯಾಗಿ, ಅನೇಕ ವಿಚಾರಗಳನ್ನು ನಾವು ಸರ್ಕಾರದ ಗಮನಕ್ಕೆ ತರುವ ಒಂದು ಅವಕಾಶ ಇತ್ತಿರಲ್ಲಾ ಎಂದು ನಾನಾದರೂ ತುಂಬ ಸಂತೋಷ ಪಡುತ್ತೇನೆ. ಮಾನ್ಯ ಸದಸ್ಯರಾದ ಶ್ರೀಮಾನ್ ಮುಕ್ಕಣ್ಣಪ್ಪನವರು, ಗೋಪಾಲಗೌಡರು ಮುಂತಾದವರೆಲ್ಲಾ ಅನೇಕ ವಿಚಾರಗಳನ್ನು ಎತ್ತಿ ಪ್ರಾಥಮಿಕ ಶಿಕ್ಷಣ ದೇಶದಲ್ಲಿ ಯಾವರೀತಿ ನಡೆಯುತ್ತಾ ಇದೆ ಯಾವರೀತಿ ನಡೆಯಬೇಕಾಗಿತ್ತು ಅನ್ನತಕ್ಕಂಥಾದ್ದನ್ನು ಚರ್ಚೆ ಮಾಡಿದ್ದಾರೆ. ಮಾನ್ಯ ಮಂತ್ರಿಗಳು ಕೂಡ ಎಷ್ಟರಮಟ್ಟಿಗೆ ಸಮಾಧಾನ ಹೇಳಬೇಕು, ಅಷ್ಟನ್ನು ಹೇಳಿದ್ದಾರೆ.

ನಾನು ಈ ನಿರ್ಣಯವನ್ನು ಸಭೆಯಮುಂದಿಟ್ಟಾಗ ಅನೇಕ ವಿಷಯಗಳನ್ನು ಪ್ರಸ್ತಾಪಮಾಡಿದೆ. ಮಾನ್ಯ ಮಂತ್ರಿಗಳು ಅಪ್ಪಣೆ ಕೊಡಿಸಿದರು. ಎಲ್ಲಾ ವಿಚಾರಗಳಿಗೂ ಜವಾಬು ಕೊಡಲು ಸಾಧ್ಯವಿಲ್ಲವೆಂದು. ಆದರೆ ಈ ನಿರ್ಣಯವು ಚರ್ಚೆಯಾಗುತ್ತಿದ್ದಾಗ ಮಾನ್ಯ ಮಂತ್ರಿಗಳು ಬಹುಕಾಲ ಸಭೆಯಲ್ಲಿರಲಿಲ್ಲ. ಇಲಾಖೆಯಲ್ಲಿ ಸಂಬಂಧಪಟ್ಟವರು ಇದ್ದುಕೊಂಡು ನಾವು ಹೇಳತಕ್ಕಂಥಾದ್ದನ್ನು ನೋಟ್ ಮಾಡಿಕೊಂಡಿದ್ದರೆ ಚೆನ್ನಾಗಿತ್ತು. ಕೆಲವು ಮುಖ್ಯ ವಿಚಾರಗಳ ಪ್ರಸ್ತಾಪ ಏನು ಬಂದಿತ್ತು ಆ ವಿಚಾರವಾಗಿ ನಾನು ಈಗ ಸೂಚಿಸಲು ಅಪೇಕ್ಷಿಸುತ್ತೇನೆ.

(ಶ್ರೀ ಟಿ. ಮಾದಯ್ಯಗೌಡ)

ಮೊಟ್ಟಮೊದಲನೆಯದಾಗಿ ಈ ಪ್ರಾಥಮಿಕ ಕಡ್ಡಾಯ ಶಿಕ್ಷಣದ ವಿಚಾರದಲ್ಲಿ ಮಾನ್ಯ ಮಂತ್ರಿಗಳು ಏನು ಹೇಳಿದರೋ ಅದು ನನಗಾದರೂ ಅಷ್ಟು ಸಮರ್ಪಕವಾಗಿ ಹಿಡಿಸಲಿಲ್ಲ, ವಿಷಯ ಏನೆಂದರೆ ಕಡ್ಡಾಯಶಿಕ್ಷಣ ಕಾನೂನನ್ನು ಜಾರಿಗೆ ತಂದಮೇಲೆ 100ಕ್ಕೆ 90 ಮಕ್ಕಳು ಶಾಲೆಗೆ ಬರುತ್ತಾ ಇದ್ದರೆ, ನನಗೆ ಇರತಕ್ಕಂಥ ಒಂದು ಸಂಶಯವನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ. 100ಕ್ಕೆ 90ಜನ ಬರುತ್ತಾರೆಂದು ಏನು ಕರಡು ಅಂಶಗಳನ್ನು ಕೊಟ್ಟಿದ್ದಾರೆಯೋ ಅದು ಕೇವಲ ರಿಜಿಸ್ಟರಿನಲ್ಲಿ ಬರೆದಿಟ್ಟಿರತಕ್ಕಂಥ ಸಂಖ್ಯೆಯೇ ವಿನಾ, ನೇರವಾಗಿ ಶಾಲೆಗೆ ಬಂದು ಶಾಲೆಯಲ್ಲಿ ಕಲಿತುಕೊಳ್ಳತಕ್ಕ ಮಕ್ಕಳ ಸಂಖ್ಯೆಯಲ್ಲ ಆದು ಎಂದು ತುಂಬ ವಿಷಾದದಿಂದ ಹೇಳುತ್ತೇನೆ. ಅನೇಕ ಸ್ಕೂಲುಗಳನ್ನು ನೋಡಿದ್ದೇನೆ. ಸ್ಕೂಲಿನ ರಿಜಿಸ್ಟರಿನಲ್ಲಿ ಸಂಖ್ಯೆ 70 ಇದ್ದರೆ, ಸ್ಕೂಲಿಗೆ ಸರಾಸರಿ ಬರತಕಂಥ ಮಕ್ಕಳು 20-30 ಜನ. ಬಾಕಿಯವರೆಲ್ಲ ಮೊದಲಿನಿಂದ ಕೊನೆಯವರಿಗೂ ಪ್ರತಿ ತಿಂಗಳಿನಲ್ಲಿಯೂ ಆಬ್‌ಸೆಂಟ್ ಆಗುತ್ತಾ ಇರುತ್ತಾರೆ, ಅದು ಲೆಕ್ಕಕ್ಕೆ ಬಂದಿಲ್ಲ. ಅಲ್ಲದೆ ಒಂದು ಊರಿನಲ್ಲಿ ಕಡ್ಡಾಯ ಪ್ರಾಥಮಿಕ ಶಿಕ್ಷಣವಿದ್ದು ಶೇಕಡ 90 ಜನರು ಹಾಜರಿರುತ್ತಾರೆ, 10 ಜನ ನಿಂತು ಹೋಗುತ್ತಾರೆ ಇದೂಕೂಡ ಅರ್ಥವಾಗುವುದಿಲ್ಲ. ಕಡ್ಡಾಯ ಕಾನೂನನ್ನು ಜಾರಿ ಮಾಡಿದಾಗ ಹಳ್ಳಿಯಲ್ಲಿ ಇರತಕ್ಕ ಪ್ರತಿ ಮಕ್ಕಳೂ ಸಹ ಶಾಲೆಗೆಬರಬೇಕು, ಬಾರದಿದ್ದರೆ ಸರ್ಕಾರ ಒತ್ತಾಯ ಮಾಡಿ ಏಕೆ ಸೇರಿಸಲಿಲ್ಲ? ತಾವೇ ಹೇಳಿದಿರಿ ದಕ್ಷತೆಯಿಂದ ನಮ್ಮ ಅಧಿಕಾರಿಗಳು ಕೆಲಸ ಮಾಡುತ್ತಿದ್ದಾರೆಂದು Attendance Officer ಇದ್ದಾರೆ; ಅವರಮೇಲೆ ಇನ್‌ಸ್ಪೆಕ್ಟರು ಇದ್ದಾರೆ; ಅವರ ಮೇಲೆ A. E. O., D. E. O. ಇತ್ಯಾದಿ, ಇತ್ಯಾದಿ ದೊಡ್ಡ hierarchy ಇದ್ದರೂ ಕೂಡ, ಇಂಥಿಂಥ ಊರಿನಲ್ಲಿ ಶೇಕಡ 50, 30, 20, 10 ಜನ ಮಕ್ಕಳು ಶಾಲೆಗೆ ಬಂದಿರಲಿಲ್ಲ ಎಂದ ಮೇಲೆ ಅವರನ್ನು ಏಕೆ ಸೇರಿಸಲಿಲ್ಲ? ಇವರು ಕ್ರಮ ವಾಗಿ ಏತಕ್ಕೆ ಶಾಲೆಗೆ ಬರುತ್ತಿಲ್ಲವೆಂದು ಈ ಅಧಿಕಾರಿಗಳು ನೋಡಬೇಕಾಗಿತ್ತು. ಇದು ಏನು ತಿಳಿಸುತ್ತದೆ ಅಂದರೆ ಕಡ್ಡಾಯ ಶಿಕ್ಷಣ ಎಷ್ಟರಮಟ್ಟಿಗೆ ಜಾರಿಗೆ ಬರಬೇಕೆಂದು ಅಪೇಕ್ಷಿಸುತ್ತೇವೆಯೋ ಅಷ್ಟರಮಟ್ಟಿಗೆ ಅದು ಬರುತ್ತಿಲ್ಲ. ಇದಕ್ಕೆ ಜವಾಬ್ದಾರರು ಸರ್ಕಾರದವರು. ಅವರು ಒಂದು ಕಾನೂನು ಮಾಡಿ ಇಲಾಖೆಯವರು ಈ ಯೋಜನೆಯನ್ನು ಯಾವ ಯಾವರೀತಿ ಜಾರಿಗೆ ತರಬೇಕೆನ್ನುವುದನ್ನು ಹೇಳಿದ್ದಾರೆ.

ಶ್ರೀ ಎಸ್. ಆರ್. ಕಂಠಿ.—ಸ್ಕೂಲ್ ಬೆಟರ್‌ಮೆಂಟ್ ಕಮಿಟಿ ಇದೆ. ತಾವು ಇದರಲ್ಲಿ ಕೆಲಸ ಮಾಡಿದರೆ ಒಳ್ಳೆಯದಾಗುತ್ತದೆ. ನೀವು ಹೇಳಿದ್ದು ಜನಗಳು ಮಾಡುವ ಕೆಲಸ. ಇಲ್ಲದಿದ್ದರೆ ಜನಗಳನ್ನು ಶಿಕ್ಷೆಗೆ ಗುರಿಪಡಿಸಬೇಕಾಗುತ್ತದೆ; ಅದು ಒಳ್ಳೆಯದಲ್ಲ.

ಶ್ರೀ ಟಿ. ಮಾದಯ್ಯಗೌಡ.—ಅದು ಕಾನೂನಿನಲ್ಲಿಲ್ಲ.

Sri S. R. KANTHI.—Betterment Committee is provided for in the Act.

ಶ್ರೀ ಟಿ. ಮಾದಯ್ಯಗೌಡ.—ಬೆಟರ್‌ಮೆಂಟ್ ಕಮಿಟಿ ಇರತಕ್ಕಂಥದ್ದು ಶಾಲೆಗಳ ಮಕ್ಕಳ ಲೆಕ್ಕ ಮಾಡಬೇಕು, ರಿಜಿಸ್ಟರು ಮಾಡಬೇಕು. ರಿಜಿಸ್ಟರು ಆದಮೇಲೆ, ರಿಜಿಸ್ಟರು ಹೆಡ್‌ಮಾಸ್ಟರ ಹತ್ತಿರವಿರಬೇಕು. ಅವರು ಮಕ್ಕಳೆಲ್ಲಾ ಬಂದಿದ್ದಾರೆಯೇ ಇಲ್ಲವೋ ನೋಡಿಕೊಳ್ಳಬೇಕು. ಬರದೆ ಇದ್ದ ಮಕ್ಕಳ ಲಿಸ್ಟನ್ನು ಇನ್‌ಸ್ಪೆಕ್ಟರಿಗೆ ಕಳುಹಿಸಬೇಕು, ಅವರ ತಂದೆ ತಾಯಿಗಳಿಗೆ ನೋಟಿಸ್ ಕೊಡಬೇಕು, ಅವರ ಪ್ರಾಸಿಕ್ಯೂಷನ್‌ಮಾಡಬೇಕು. ಇದು ಎಲ್ಲಾ ಅವರ ಕೆಲಸವೆ ವಿನಾ ಬೆಟರ್‌ಮೆಂಟ್ ಕಮಿಟಿಯದಲ್ಲ.

ಪ್ರಾಥಮಿಕ ಶಿಕ್ಷಣದಲ್ಲಿ ಸ್ವಲ್ಪ ಲೋಪದೋಷಗಳಿವೆ, ಸರಿಮಾಡಿ ಎಂದು ಹೇಳುತ್ತಿದ್ದೇನೆ, ಅಷ್ಟೆ. ನಮ್ಮ ವಿದ್ಯಾ ಇಲಾಖೆಯ ಮಂತ್ರಿಗಳು ದಕ್ಷರು, ಅಭಿಮಾನಶಾಲಿಗಳು, ರಾಷ್ಟ್ರದ ಪ್ರಗತಿಯಲ್ಲಿ ಆಸಕ್ತಿ ಉಳ್ಳವರು. ಇದರಲ್ಲಿರತಕ್ಕಂಥ ನ್ಯೂನತೆಗಳನ್ನು ಸರಿಮಾಡಿ ಅನ್ನತಕ್ಕಂಥ ಉದ್ದೇಶದಿಂದ ಹೇಳಿದೆ, ಇದರಲ್ಲಿ ಕೋಪಮಾಡಿಕೊಳ್ಳಬೇಕಾದ ಅವಶ್ಯಕತೆ ಇಲ್ಲ.

Sri L. B. BIRJE.—(Marathi).

Sri S. R. KANTHI.—(Marathi).

ಶ್ರೀ ಟಿ. ಮಾದಯ್ಯಗೌಡ.—ಸ್ವಾಮಿ, ಶಾಲೆಗೆ ಬರತಕ್ಕಂಥ ಮಕ್ಕಳ ಸಂಖ್ಯೆಯ ವಿಚಾರದಲ್ಲಿ ಮತ್ತು ಶಾಲೆಗೆ ಕಳುಹಿಸಿದ ಮಕ್ಕಳಿಗೆ ಎಷ್ಟರಮಟ್ಟಿಗೆ ಶಿಕ್ಷಣ ದೊರಕುತ್ತದೆ ಅನ್ನತಕ್ಕಂಥ ವಿಚಾರದಲ್ಲಿ ಹಿಂದಿನಿಂದ ಬಹಳ ದೀರ್ಘವಾಗಿ ಹೇಳಿದರೂ ಮತ್ತೊಮ್ಮೆ ಹೇಳಬೇಕಾದ ಪ್ರಸಂಗ ಬಂದಿದೆ. ತಾವು ಈ ವಿಚಾರದಲ್ಲಿ ಒಂದು ಸರಿಯಾದಂಥ ಉತ್ತರ ಕೊಡುವುದು ಒಳ್ಳೆಯದೆಂದು ಅನಿಸುತ್ತದೆ. ನಮ್ಮ ಉಪಾಧ್ಯಾಯರುಗಳ ವಿದ್ಯಾಭ್ಯಾಸ ನಮ್ಮ ಉಪಾಧ್ಯಾಯರುಗಳ ಒಂದು ಯೋಗ್ಯತೆ. ಅವರಿಗಿರತಕ್ಕಂಥ ಸನ್ಮಾನ, ಅವರಿಗಿರತಕ್ಕಂಥ ಒಂದು ಅನುಕೂಲ. ಈಗಾಗಲೆ ನಡೆಯುತ್ತಿರ

ತಕ್ಕಂಥ ವರ್ಗಾವರ್ಗಿ, ರೀತಿ ನೀತಿ ಮುಂತಾದುವನ್ನೆಲ್ಲಾ ಗಮನಕ್ಕೆ ತೆಗೆದುಕೊಂಡು, ನಮ್ಮ ಮಕ್ಕಳಿಗೆ ಶಿಕ್ಷಣ ಎಷ್ಟರಮಟ್ಟಿಗೆ ದೊರೆಯಬೇಕೋ ಅಷ್ಟರ ಮಟ್ಟಿಗೆ ದೊರೆಯುತ್ತಿಲ್ಲವೆಂದು ವ್ಯಸನದಿಂದ ಹೇಳುತ್ತಿದ್ದೇನೆ. ಪ್ರಾಥಮಿಕ ವಿದ್ಯಾಭ್ಯಾಸ ಹೇಗಿದೆ ಎಂದು ಸ್ವಲ್ಪ ಕಠಿಣವಾದ ಮನಸ್ಸಿನಿಂದ, ತಮಗೆ ಬಹುಶಃ ಸಂತೋಷವಾಗದ ರೀತಿಯಲ್ಲಿ ಹೇಳುತ್ತಾ ಇದ್ದೇನೆ. ಮಕ್ಕಳು ಬೆಳೆಯುತ್ತಾ ಇರುತ್ತಾರೆ. ಇವತ್ತಿನ ಮಕ್ಕಳು ನಾಳೆ ಪ್ರಜೆಗಳು ಆಗಿಹೋಗುತ್ತಾರೆ. ಅವರಿಗೆ ವಿದ್ಯಾಭ್ಯಾಸ ದೊರೆಯಲಿಲ್ಲವೆಂದರೆ ಅವರ ಜೀವಮಾನವೆಲ್ಲಾ ಅನಕ್ಷರಸ್ಥರಾಗಿಯೇ ಇರಬೇಕು.

Sri S. R. KANTHI.—I rise to a point of order—The Hon'ble member is entitled to reply to the debate, but he is not entitled to bring in new facts.

Mr. CHAIRMAN.—The Hon'ble member can only reply to the Debate.

ಶ್ರೀ ಟಿ. ಮಾದಯ್ಯಗೌಡ.—ಈ ದೇಶದ ನಾನಾ ಭಾಗಗಳಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ಒಂದೇ ರೀತಿಯಾಗಿ ನಡೆಯುತ್ತಾ ಇಲ್ಲ. ಅದನ್ನು ಏಕೀಕೃತವಾಗಿ ಮಾಡಬೇಕು ಎಂಬುದಾಗಿ ಸರ್ಕಾರದವರು ಉದ್ಯುಕ್ತರಾಗಿದ್ದಾರೆ. ಅದನ್ನು ಆದಷ್ಟು ಜಾಗ್ರತೆ ಮಾಡುವುದು ಒಳ್ಳೆಯದು. ಇಷ್ಟು ವರ್ಷಗಳಾದರೂ ಏಕೀಕೃತ ಮಾಡುವುದಕ್ಕೆ ಎಷ್ಟರಮಟ್ಟಿಗೆ ಪ್ರಯತ್ನಗಳನ್ನು ಮಾಡಿದ್ದಾರೋ ಗೊತ್ತಿಲ್ಲ. ಒಟ್ಟಿನಲ್ಲಿ ಆ ಕಾರ್ಯವನ್ನು ಕೂಡಲೇ ಕೈಕೊಳ್ಳುವುದು ಒಳ್ಳೆಯದು ಎಂಬುದಾಗಿ ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಬೆಟರ್‌ಮೆಂಟ್ ಕಮಿಟಿಗಳ ವಿಚಾರವಾಗಿ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ಈ ಕಮಿಟಿಗಳು ಎಲ್ಲಾ ಊರಿನಲ್ಲೂ ಇಲ್ಲ. ಕೆಲವು ಕಡೆಗಳಲ್ಲಿ ಮಾತ್ರ ಇವೆ. ಹಣವೇನೋ ವಸೂಲಾಗಿದೆ. ಆದರೆ ಹಣವೆಷ್ಟು ಖರ್ಚಾಗುತ್ತಿದೆ ಎಂಬುದೇ ನನಗೆ ಗೊತ್ತಿಲ್ಲ. ಹಿಂದಿನ ವರ್ಷ ನಾನು ಈ ಬಗ್ಗೆ ಮಾತನಾಡಿ ಸ್ಕೂಲುಗಳ ಪರಿಸ್ಥಿತಿ ಗ್ರಾಮಾಂತರ ಪ್ರದೇಶಗಳಲ್ಲಿ ತುಂಬಾ ಕೆಟ್ಟು ಹೋಗಿದೆ. ಅವುಗಳನ್ನು ಆದಷ್ಟು ಮಟ್ಟಿಗೆ ಅಭಿವೃದ್ಧಿ ಸ್ಥಿತಿಗೆ ತರಬೇಕೆಂದು ಒತ್ತಾಯಮಾಡಿ ಹೇಳಿದ್ದೇನೆ. ಮಕ್ಕಳು ಕುಳಿತುಕೊಳ್ಳುವುದಕ್ಕೆ ಸಾಕಷ್ಟು ಸ್ಥಳವಿಲ್ಲ. ಹಲಗೆಗಳಿಲ್ಲ. ಮೇಜುಗಳಿಲ್ಲ. ಉಪಾಧ್ಯಾಯರಿಗೂ ಕುರ್ಚಿ, ಬೇಂಚುಗಳಿಲ್ಲ—ಹೀಗಾಗಿ ಉಪಾಧ್ಯಾಯರಿಗೂ ಮತ್ತು ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೂ ತುಂಬಾ ತೊಂದರೆಯಾಗಿದೆ ಎಂಬ ವಿಷಯವನ್ನು ನಾನು ಎಷ್ಟೋ ಸಾರಿ ಮಾನ್ಯ ಮಂತ್ರಿಗಳ ಗಮನಕ್ಕೆ ತಂದಿದ್ದೇನೆ. ಈಗಲೂ ಮತ್ತೊಂದು ಸಾರಿ ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಇದನ್ನೆಲ್ಲಾ ಬೆಟರ್‌ಮೆಂಟ್ ಕಮಿಟಿಯವರು ಮಾಡಬೇಕು ಎಂಬುದಾಗಿ ನಾನು ಹೇಳುತ್ತೇನೆ. ಎಲ್ಲಿ ಬೆಟರ್‌ಮೆಂಟ್ ಕಮಿಟಿ ಇದೆಯೋ ಅಲ್ಲಿ ಅವರು ಮಾಡಬಹುದು. ಎಲ್ಲಿ ಬಡವರು ಅಥವಾ ನಿರ್ಗತಿಕರು ಇರುತ್ತಾರೋ ಮತ್ತು ಎಲ್ಲಿ ಆ ಕಮಿಟಿಗಳು ಇನ್ನೂ ರಚನೆಯಾಗಿಲ್ಲವೋ ಮತ್ತು ಎಲ್ಲಿ ಹಣ ಸಾಕಷ್ಟು ವಸೂಲಾಗುವುದಿಲ್ಲವೋ ಅಂತಹ ಕಡೆಗಳಲ್ಲಿ ಸರ್ಕಾರದವರೇ ಮುಂದೆ ಬಂದು ಆ ಕಮಿಟಿಯವರು ಮಾಡಬೇಕಾದಂತಹ ಕೆಲಸ ಕಾರ್ಯಗಳನ್ನು ಕೂಡಲೇ ಕೈಕೊಳ್ಳಬೇಕೆಂದು ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ವಾಸಿಸತಕ್ಕ ಜನರಿಗೆ ಬೇಕಾದ ಸೌಕರ್ಯಗಳನ್ನು ಒದಗಿಸುವುದಕ್ಕೆ ತಕ್ಕ ಏರ್ಪಾಡನ್ನು ಮಾಡಿಕೊಡಬೇಕೆಂದು ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ.

ಇನ್ನೊಂದು ವಿಷಯ. ಇನ್ನು ಮುಂದೆ ಗ್ರಾಮಾಂತರ ಪ್ರದೇಶಗಳಿಗೆ ಪ್ರಾಥಮಿಕ ಶಾಲೆಗಳಲ್ಲಿ ಉಪಾಧ್ಯಾಯರ ಬದಲಾಗಿ ಉಪಾಧ್ಯಾಯನಿಯರನ್ನು ನೇಮಕ ಮಾಡಬೇಕೆಂದು ನಾನು ಹೇಳಿದ್ದೆ. ಆ ವಿಚಾರದಲ್ಲಿ ಸರ್ಕಾರ ಕೂಡಲೇ ಹೆಚ್ಚು ಗಮನವನ್ನು ಕೊಡಬೇಕು ಎಂಬುದಾಗಿ ನಾನು ಹೇಳುತ್ತೇನೆ. ನಮ್ಮ ಚಿಕ್ಕಮಕ್ಕಳ ಉಪಾಧ್ಯಾಯನಿಯರ ಕೈಕೆಳಗೆ ತಯಾರಾಗುವುದು ಶ್ರೇಷ್ಠ. ಏಕೆಂದರೆ ಪಾಶ್ಚಾತ್ಯ ದೇಶಗಳಲ್ಲಿ ಈ ಪದ್ಧತಿ ಇದೆ. ಇಲ್ಲಿಯೂ ಸಹ ನಮ್ಮ ಸರ್ಕಾರದವರು ಆ ಪದ್ಧತಿಯನ್ನು ಜಾರಿಗೆ ತರಬೇಕೆಂದು ಕೋರುತ್ತೇನೆ.

ಇನ್ನು ಕಡ್ಡಾಯ ಶಿಕ್ಷಣ ಜಾರಿ ಮಾಡಿರುವ ವಿಚಾರವಾಗಿ ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಆ ಕಾಲದಲ್ಲಿ ಇನ್‌ಸ್ಪೆಕ್ಟರ್‌ನಿಂದ ಹಿಡಿದು ಇಲಾಖೆಯಲ್ಲಿರುವ ಪ್ರತಿಯೊಬ್ಬರೂ, ಮಂತ್ರಿಗಳು ಮೊದಲ್ಗೊಂಡು ಅನೇಕ ಪ್ರಾಥಮಿಕ ಶಾಲೆಗಳಿಗೆ ಭೇಟಿ ಕೊಟ್ಟಿದ್ದಾರೆಂದು ಇನ್‌ಸ್ಪೆಕ್ಷನ್ ಪುಸ್ತಕದಲ್ಲಿ ತೋರಿಸುತ್ತಾರೆ. ಆದರೆ ಅಂತಹ ಸ್ಕೂಲುಗಳಿಗೆ ಭೇಟಿ ಕೊಟ್ಟಾಗ್ಗೆ ಅಲ್ಲಿ ಅಕ್ಕಯಲ್ಲಾಗಿ ಏನೇನು ನಡೆಯುತ್ತಿದೆ, ಏನೇನು ಅವಶ್ಯಕವಾಗಿ ಆ ಶಾಲೆಗೆ ಬೇಕಾಗಿದೆ ಎಂಬ ಬಗ್ಗೆ ಮೊದಲು ಗಮನ ಕೊಡಬೇಕು. ಇತ್ತೀಚೆಗೆ surprise visits ಎಂಬುದು ಇಲ್ಲವೇ ಇಲ್ಲವಾಗಿದೆ. ಇನ್‌ಸ್ಪೆಕ್ಷನ್ಸ್ ತೀರಾ ಕಡಮೆ. ಈಗಿರತಕ್ಕ ಶಾಲೆಗಳಿಗೆ ಇರತಕ್ಕ ಇನ್‌ಸ್ಪೆಕ್ಷನ್ ಸಿಬ್ಬಂದಿ ಬಹಳ ಕಡಿಮೆಯಾಗಿದೆ. ಆದ್ದರಿಂದ ಸರ್ಕಾರದವರು ಕೂಡಲೇ ಸಾಕಷ್ಟು ಇನ್‌ಸ್ಪೆಕ್ಷನ್ ಸಿಬ್ಬಂದಿಯನ್ನು

(ಶ್ರೀ ಟಿ. ಮಾದಯ್ಯಗೌಡ)

ಯನ್ನು ನೇಮಿಸಿ ಆಗಾಗ್ಗೆ surprise visits ನ್ನು ಎಲ್ಲಾ ಪ್ರಾಥಮಿಕ ಶಾಲೆಗಳಿಗೆ ಕೊಡುವ ವ್ಯವಸ್ಥೆಯನ್ನು ಮಾಡುವುದರಿಂದ ಬಹುಮಟ್ಟಿಗೆ ನಾವು ಸೂಚಿಸಿರುವ ಕುಂದುಕೊರತೆಗಳು ಜಾಗ್ರತೆಯಾಗಿ ನಿವಾರಣೆಯಾಗುತ್ತವೆಂದು ನಾನು ಭಾವಿಸುತ್ತೇನೆ.

ಒಟ್ಟಿನಲ್ಲಿ ಸರ್ಕಾರದವರು ಗ್ರಾಮಾಂತರ ಪ್ರದೇಶಗಳಲ್ಲಿ ಪ್ರಾಥಮಿಕ ವಿದ್ಯಾಭ್ಯಾಸವನ್ನು ಮುಂದುವರಿಸಬೇಕು. ನಮ್ಮ ದೇಶದ ಏಳಿಗೆಗಾಗಿ ವಿದ್ಯಾಭ್ಯಾಸವನ್ನು ಇನ್ನೂ ಹೆಚ್ಚಿಗೆ ಅಭಿವೃದ್ಧಿ ಸ್ಥಿತಿಗೆ ತರಬೇಕು. ಆ ಪ್ರಕಾರವಾಗಿಯೇ ಮಾನ್ಯ ಮಂತ್ರಿಗಳೂ ಹೆಚ್ಚಿಗೆ ಆಸಕ್ತಿಯನ್ನೂ ಸಹ ತೋರಿಸುತ್ತಿದ್ದಾರೆ. ಅದಕ್ಕಾಗಿ ಅವರನ್ನು ವಂದಿಸುತ್ತೇನೆ. ಇಷ್ಟು ಹೇಳಿ ಅತಿಮುಖ್ಯವಾದಂಥ ಈ ನಿರ್ಣಯವನ್ನು ಈ ಸಭಾಗಮನಕ್ಕೆ ತಂದು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ಆರ್. ಕಂಠಿ.—ಅಧ್ಯಕ್ಷರೇ, ಈಗ ಶ್ರೀ ಟಿ. ಮಾದಯ್ಯಗೌಡರು ನಿರ್ಣಯದ ಮೇಲೆ ಮಾತನಾಡುತ್ತಾ ಬಹಳ ಒಳ್ಳೆಯ ವಿಚಾರಗಳನ್ನು ಹೇಳಿದ್ದಾರೆ. ಇಲಾಖೆಯಲ್ಲಿ ಏನೋ ಲೋಪ ದೋಷಗಳೇ ಇಲ್ಲವೆಂದು ನಾನು ಎಲ್ಲಿಯೂ ಹೇಳಿಲ್ಲ, ಕೆಲವಾರು ಇರಬಹುದು. ಆದರೆ ಹಣಕಾಸಿನ ಮಂತ್ರಿಗಳು ಮಾಡುವ ಕೆಲಸವನ್ನು ಆಯಾ ಊರಿನ ಜನರು ಸ್ವಲ್ಪ ಮಾಡಬೇಕು. ಗ್ರಾಮಾಂತರ ಪ್ರದೇಶಗಳಲ್ಲಿ ಪ್ರಾಥಮಿಕ ಶಾಲೆಗಳ ಬಗ್ಗೆ ಬೇಕಾದಷ್ಟು ಸೌಕರ್ಯಗಳನ್ನು ಕೊಡಬೇಕಾದುದೇನೋ ಸಹಜ. ಅವರಿಗೆ ಮಾನ್ಯ ಸದಸ್ಯರಾದ ಶ್ರೀ ಮಾದಯ್ಯಗೌಡರು ಹೇಳಿದಂತೆ ಪುಸ್ತಕಗಳನ್ನು ಕೊಡಿಸುವುದು, ಕುರ್ಚಿ-ಮೇಜುಗಳನ್ನು ಒದಗಿಸುವುದು, ಮರದ ಹಲಗೆಗಳನ್ನು ಹುಡುಗರು ಕುಳಿತುಕೊಳ್ಳುವುದಕ್ಕೆ ಕೊಡಿಸುವುದು—ಇವನ್ನೆಲ್ಲಾ ಬೆಟರ್‌ಮೆಂಟ್ ಕಮಿಟಿಯವರು ಕೆಲವು ಕಡೆಗಳಲ್ಲಿ ಮಾಡುತ್ತಿದ್ದಾರೆ. ಆದರೂ ಈ ಶಾಲೆಗಳಲ್ಲಿ ಸಣ್ಣ ಸಣ್ಣ ಕೊರತೆಗಳಿವೆ. ಬ್ಲಾಕ್‌ಬೋರ್ಡ್ ಮತ್ತು ಹಲಗೆ ಇಲ್ಲದೆ ಇರುವುದು ಮತ್ತು ಸಾಕಷ್ಟು ಸ್ಥಳಾವಕಾಶವೂ ಇಲ್ಲದೆ ಇರುವುದು, ಇವನ್ನೆಲ್ಲಾ ಸರ್ಕಾರದವರೇ ಮಾಡಬೇಕೆಂದರೆ ಸ್ವಲ್ಪಮಟ್ಟಿಗೆ ಕಷ್ಟವಾಗುತ್ತದೆ.

ಶ್ರೀ ಟಿ. ಮಾದಯ್ಯಗೌಡ.—ಕೆಲವು ಕಡೆ ಬೆಟರ್‌ಮೆಂಟ್ ಕಮಿಟಿಗಳಿಲ್ಲದಿದ್ದರೂ ಸಹಾಯಕ ಸಮಿತಿಗಳನ್ನಾದರೂ ಮಾಡಿ ಅವಕ್ಕೆ ಅಧಿಕಾರ ಕೊಡಬಹುದಲ್ಲದೇ ?

ಶ್ರೀ ಎಸ್. ಆರ್. ಕಂಠಿ.—ಆ ಬಗ್ಗೆ ಹೊಸದಾಗಿ ಕಾನೂನು ಮಾಡದೆ ಅವುಗಳಿಗೆ ಅಧಿಕಾರ ಕೊಡುವುದಕ್ಕಾಗುವುದಿಲ್ಲ. ಸಹಾಯಕ ಸಮಿತಿಗಳೇನೋ ಕೆಲವು ಕಡೆಗಳಲ್ಲಿ ಚೆನ್ನಾಗಿ ಕೆಲಸಮಾಡುತ್ತಿವೆ ಯೆಂಬುದೇನೋ ಸರಿ. ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಪ್ರಾಥಮಿಕ ಶಾಲೆಗಳಿಗೆ ಹೆಣ್ಣು ಮಕ್ಕಳನ್ನೇ ಇನ್ನುಮುಂದೆ ತೆಗೆದುಕೊಳ್ಳಬೇಕೆಂದು ಸದಸ್ಯರು ಅಭಿಪ್ರಾಯಪಟ್ಟರು. ಈಗಿನ ಸಂದರ್ಭದಲ್ಲಿ ಕಾನ್ಸ್ಟಿಟ್ಯೂಷನ್ನು ಆ ರೀತಿ ವ್ಯತ್ಯಾಸ ಮಾಡುವುದಕ್ಕಾಗುವುದಿಲ್ಲ. ಹೆಣ್ಣೂ ಅಷ್ಟೇ ಗಂಡೂ ಅಷ್ಟೇ. ಎಲ್ಲರನ್ನೂ ಒಂದೇ ಸಮನಾಗಿ ನೋಡಬೇಕಾಗುತ್ತದೆ. ಎಲ್ಲೆಲ್ಲಿ ಸಾಧ್ಯವೋ ಅಂತಹ ಕಡೆಗಳಲ್ಲಿ ಹೆಣ್ಣು ಮಕ್ಕಳನ್ನು ವಿಶೇಷವಾಗಿ ನೇಮಕ ಮಾಡುವ ವಿಚಾರ ಸರ್ಕಾರದ ಗಮನದಲ್ಲಿದೆ. ಇನ್ನು ಶಾಲೆಗಳಿಗೆ ಭೇಟಿಕೊಡಬೇಕೆಂಬ ಒಂದು ಅಂಶವನ್ನು ಸೂಚಿಸಿದರು. ಸಂಬಂಧಪಟ್ಟ ಇಲಾಖಾಧಿಕಾರಿಗಳು ಆ ಕೆಲಸವನ್ನು ಈಗಾಗಲೇ ಮಾಡುತ್ತಿದ್ದಾರೆ. ನಾನೂ ಸಹ ಕೆಲವು ವೇಳೆ ಕೆಲವಾರು ಶಾಲೆಗಳನ್ನು ಭೇಟಿಮಾಡಿದ್ದೇನೆ. ಅದರಿಂದ ನನಗೆ ಒಳ್ಳೆಯ ಅನುಭವವೂ ಬಂದಿದೆ. ಕೆಲವು ಕಡೆಗಳಲ್ಲಿ ಲ್ಯಾಬೋರೇಟರಿಯೇ ಇಲ್ಲ. ಸರಿಯಾದ ಇಕ್ವಿಪ್‌ಮೆಂಟ್ಸ್ ಸಹ ಇಲ್ಲ. ಇದರಿಂದ ಮಕ್ಕಳ ವಿದ್ಯಾಭ್ಯಾಸಕ್ಕೆ ತೊಂದರೆಯಾಗುವುದೇನೋ ನಿಜ. ಅದಕ್ಕಾಗಿಯೇ ಹೆಚ್ಚಿಗೆ ಗ್ರಾಂಟುಗಳನ್ನು ಕೊಡುವ ವ್ಯವಸ್ಥೆಯನ್ನೂ ಸಹ ಸರ್ಕಾರದವರು ಕೈಗೊಳ್ಳುತ್ತಿದ್ದಾರೆ. ಶಾಲೆಗಳಲ್ಲಿ ಮಕ್ಕಳಿಗೆ ಸರಿಯಾದ ಶಿಕ್ಷಣವನ್ನು ಕೊಡದಿದ್ದರೆ ರೆಕಗ್‌ನಿಷನ್ ವಿತ್‌ಡ್ರಾ ಮಾಡುವ ಒಂದು ಕ್ರಮವನ್ನೂ ಸಹ ತೆಗೆದುಕೊಳ್ಳುತ್ತಿದ್ದೇವೆ. ಕೆಲವರು ಬಹಳ ಉತ್ಸಾಹದಿಂದ ಶಾಲೆಗಳನ್ನು ನಡೆಸುತ್ತಿದ್ದಾರೆ. ಕೆಲವು ಕಡೆಗಳಲ್ಲಿ ಉಪಾಧ್ಯಾಯರುಗಳು ಬಹಳ ಅಕ್ರಮವಾಗಿ ನಡೆಯುತ್ತಿದ್ದಾರೆಂದು ಹೇಳಿದರು. ಅಂತಹಕಡೆಗಳಲ್ಲಿ surprise visitsನ್ನು ಕೊಡುವುದು ಒಳ್ಳೆಯದೆಂಬುದು ನನ್ನ ಅಭಿಪ್ರಾಯವೂ ಇದೆ. ಮಾನ್ಯ ಸದಸ್ಯರು ಈ ವಿಚಾರಗಳನ್ನು ನನಗೆ ಮೊದಲೇ ತಿಳಿಸಿದ್ದರೆ ಅತ್ಯಂತ ಜರೂರಾದ ಕ್ರಮವನ್ನು ಸರ್ಕಾರ ತೆಗೆದುಕೊಳ್ಳುತ್ತಿತ್ತೆಂದು ನಾನು ಅವರಿಗೆ ಭರವಸೆ ಕೊಡುತ್ತೇನೆ. ಶಿಕ್ಷಣ ಇಲಾಖೆ ಬಹುದೊಡ್ಡ ಇಲಾಖೆ. ಈ ಇಲಾಖೆಯ ಅನೇಕ ವಿಷಯಗಳು ಎಲ್ಲರ ಗಮನವನ್ನೂ ಸೆಳೆಯದೆ ತೀರ್ಮಾನವಾಗುವಂತಿಲ್ಲ. ಒಟ್ಟಿನಲ್ಲಿ ಈ ನಿರ್ಣಯ ಕೂಲಂಕಷವಾಗಿ ಇಲ್ಲಿ ಚರ್ಚೆಯಾಗಿದೆ. ಮಾನ್ಯ ಸದಸ್ಯರ ಸಲಹೆಗಳನ್ನೆಲ್ಲಾ ಪರಿಶೀಲಿಸಿ ಇನ್ನು ಮುಂದೆ ಈ ಪ್ರಾಥಮಿಕ ಶಿಕ್ಷಣಕ್ಕೆ ಇನ್ನೂ ಹೆಚ್ಚು ಗಮನವನ್ನು ಸರ್ಕಾರ ಕೊಟ್ಟು ಆ ಇಲಾಖೆಯಲ್ಲಿರತಕ್ಕ ಲೋಪದೋಷಗಳನ್ನು ತೊಡೆದುಹಾಕಲು ಪ್ರಯತ್ನ ಮಾಡುವುದಾಗಿ ನಾನು ಈ ಸಂದರ್ಭದಲ್ಲಿ ಭರವಸೆ ಕೊಡುತ್ತೇನೆ. ಎಲ್ಲಕ್ಕಿಂತಲೂ ಮುಖ್ಯವಾಗಿ ಒಂದು ಮಾತನ್ನು ಹೇಳಬೇಕಾಗಿದೆ.

ಮಾನ್ಯ ಸದಸ್ಯರು ಯಾರೇ ಆಗಲೀ ಏನಾದರೂ ಇಂತಹ ವಿಚಾರಗಳಿದ್ದರೆ ಅವನ್ನು ಮೊದಲೇ ಬರೆದುಕೊಂಡು ಅದಕ್ಕೆ ಬೇಕಾದ ತೀರ್ಮಾನ ಅಭಿಪ್ರಾಯವನ್ನು ಪಡೆದು ನಿವಾರಣೆ ಮಾಡಿಕೊಂಡರೆ ಒಳ್ಳೆಯದಾಗುತ್ತದೆ. ಇಷ್ಟು ಹೇಳಿ ಮಾನ್ಯ ಸದಸ್ಯರು ತಮ್ಮ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಟಿ. ಮಾದಯ್ಯಗೌಡ.—ಮಾನ್ಯ ಮಂತ್ರಿಗಳು ಸಾಕಷ್ಟು ಆಶ್ವಾಸನೆಯನ್ನು ಕೊಟ್ಟಿದ್ದಕ್ಕಾಗಿ ನನ್ನ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳಲು ಅಪೇಕ್ಷೆ ಪಡುತ್ತೇನೆ.

The Resolution was, by leave of the House, withdrawn.

MR. CHAIRMAN.—The House will now rise to meet at 12-30 P.M. on Monday, the 9th September 1963.

The House adjourned at Thirty Minutes past Twelve of the Clock to meet again at Thirty Minutes past Twelve of the Clock on Monday, the 9th September 1963.

WD 975 GPB—900—15-10-1963